# ಬಿಎಸ್ಸಿ–ಫ್ಯಾಡ್/ಐಡಿಡಿ/ ಬಿವಿಎ/ ಬಿಎಸ್ಐಡಿ/ ಬಿಎಸ್ಎನ್ಡಿ

# ಮೊದಲ ಸೆಮಿಸ್ಟರ್ ಕನ್ನಡ ಭಾಷಾ ಪತ್ರ

# ವಿನ್ಯಾಸ ಸಂಪದ – ೧

## [ಆಧುನಿಕ ಕನ್ನಡ ಸಾಹಿತ್ಯ]

ಪ್ರಧಾನ ಸಂಪಾದಕರು
ಡಾ. ಎಂ. ಜಿ ಮಂಜುನಾಥ

ಸಂಪಾದಕರು
ಡಾ. ಜಿ. ಆಶಾ
ಡಾ. ಪ್ರೇಮಾ ಸಿದ್ಧರಾಜು
ಡಾ. ಚನ್ನವೀರಯ್ಯ
ಡಾ. ನಾರಾಯಣಸ್ವಾಮಿ ಎಸ್.ಜಿ

ಬೆಂಗಳೂರು ನಗರ ವಿಶ್ವವಿದ್ಯಾಲಯ
ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು

**KANNADA BHASHA PATYA - ADHUNIKA KANNADA SAHITHYA-** A Prescribed Text Book for First Semseter BSc FAD/IDD/BVA/BSID/BSND, Cheif Editer Dr. M G Manjunath, Edited by Dr. G Asha, Dr. Prema Siddharaju, Dr. Channaveeraiah, Dr. Narayanaswamy S G.

@ ಕಾಯ್ದಿರಿಸಿದೆ

**ಸಲಹಾ ಸಮಿತಿ**

ಡಾ. ಎಂ.ಜಿ. ಮಂಜುನಾಥ್
ಡಾ. ಎಸ್.ಎಲ್ ಮಂಜುನಾಥ್
ಡಾ. ಬಿ. ಎನ್ ಪೂರ್ಣಿಮ
ಡಾ. ಸುವರ್ಣ ಸಂಗಣ್ಣ ಹುಡೇದ
ಪ್ರೊ. ಬೊಮ್ಮೇಗೌಡ
ಡಾ. ಮನೋನ್ಮನಿ
ಡಾ. ಪಿ. ಬೆಟ್ಟೇಗೌಡ
ಡಾ. ಎನ್.ಆರ್ ಚಂದ್ರೇಗೌಡ

ಪ್ರಥಮ ಪ್ರಕಟಣೆ– **2024**

# ಪರಿವಿಡಿ

**ಕಾವ್ಯ**

1. ಡೊಂಬರಚೆನ್ನೆ – ಪಂಜೆ ಮಂಗೇಶರಾಯರು
2. ಇಂದಿನ ದೇವರು – ಕುವೆಂಪು
3. ಯುಗಾದಿ – ದ.ರಾ.ಬೇಂದ್ರೆ
4. ಮನೆಯಿಂದ ಮನೆಗೆ – ಕೆ.ಎಸ್.ನರಸಿಂಹಸ್ವಾಮಿ
5. ಕಣಿವೆಯ ಮುದುಕ – ಪು.ತಿ.ನರಸಿಂಹಾಚಾರ್
6. ಸಮಗಾರ ಭೀಮವ್ವ – ಎಚ್.ಎಸ್.ಶಿವಪ್ರಕಾಶ್
7. ಬೆಂಗಳೂರಿನ ಹಾಡು – ಡಾ. ಸಿದ್ದಲಿಂಗಯ್ಯ
8. ಅವಳ ಚರಿತ್ರೆ – ಕೆ.ಷರೀಫಾ

**ಕಥೆಗಳು**

1. ದೃಷ್ಟಿ ಲಾಭ – ವಿ.ಸೀ
2. ಮೋಚಿ – ಭಾರತೀಪ್ರಿಯ
3. ನಾಲ್ಕು ಮೊಳ ಭೂಮಿ – ಚದುರಂಗ

**ಸಂಕೀರ್ಣ ಲೇಖನಗಳು**

1. ಅಣು ಚಳಿಗಾಲ ಅಡಗಲು ಸ್ಥಳವೆಲ್ಲಿ? – ನಾಗೇಶ್ ಹೆಗಡೆ
2. ಪರಿಸರ ಮತ್ತು ವಿಕಾಸ – ಸುಂದರಲಾಲ ಬಹುಗುಣ
3. ಮೂಢನಂಬಿಕೆಗಳ ಬೀಡಿನಲ್ಲಿ – ಭುವನೇಶ್ವರಿ ಹೆಗಡೆ

# 1. ಡೊಂಬರ ಚೆನ್ನೆ

–ಪಂಜೆ ಮಂಗೇಶರಾಯರು

ಬೆರಗು ಕಣ್ಣಿನ ಬೆರಳ ಮೂಸೆಯ ಬೆರಸಿದಾ ನಗು ಮೋರೆಯಾ,
ಅರಸನಿದ್ದನು ಡೊಂಬರಾಟಕೆ ಸೆರೆಯ ಸಿಕ್ಕಿದ ಮನದಲಿ
ದಾಟಿ ಪಡುಹೊಳೆ ಜನರಸಂದಣಿ ಆಟ ನೋಡಲು ಕೂಡಿತು:
ಕೋಟೆ, ಕೊತ್ತಳ, ಮಾಡು, ಮನೆ, ಮರ, ಕೊಂಬೆಗಳ ಮೇಲಿದ್ದರು.

ಗುಲ್ಲು ಮಾಡರು, ಸೊಲ್ಲನಾಡರು:
ಎಳ್ಳು ಬಿದ್ದರೆ ಬೊಬ್ಬೆಯು
ಅಲ್ಲಿ ಜನಗಳ ನುಗ್ಗು ನುಗ್ಗಿಗೆ
ಇಲ್ಲ ಸಾಸಿವೆ ಹಾಕಲು.

ಅತ್ತಲಿದ್ದರು ಸೆಟ್ಟಿಮುದ್ದರು,
ಗುತ್ತಿನಡ್ಯಂತಾಯರು
ಇತ್ತಪೊಕ್ಕುಳ ಅರಸು ಮಕ್ಕಳ
ಒತ್ತಿನಲಿ ಕಳದೆಡದಲಿ

ಗುರು, ಸುಮಂಗಳ, ಬುಧ ಗ್ರಹಂಗಳ
ನಡುವೆ ತಿಂಗಳ ಚೆಲುವಿನಾ

ಅರಸು ಅಂಗಳದಲಿ ಜನಂಗಳ
ನಡುವೆ ಸಂಗಳಿಸಿದ್ದನು.

ಆಗ ಬಡಿಯಿತು ಡೋಲು ಬಡ ಬಡ,
ಬಾಗಿ ಅರಸಿಗೆ ತಲೆಯನು,
ಬೇಗ ತಿರ್‍ರನೆ ತಿರುಗಿ ಸರ್‍ರನೆ
ಲಾಗ ಹಾಕಿದ ಡೊಂಬನು.

ನೀರಿನೊಂದಿಗೆ ಆರು ಬಿಂದಿಗೆ
ಹೇರಿ ನೆತ್ತಿಯ ಮೇಲಕೆ
ಹಾರಿ ಧಿಕ್ಕಿಟ ಕುಣಿದನಕ್ಕಟ
ನೀರು ಹೊರಗಡೆ ಚೆಲ್ಲದೆ!

ತೆಗೆದು ಡೊಂಬನು ಹುರಿಯ ಸುಂಬನು
ಬಿಗಿದು ಬಟ್ಟಲನೇರಿಸಿ,
ಬೊಗರಿಯಂತೆಯೆ, ತಿಗರಿಯಂತೆಯೆ
ನೆಗೆದು ಕುಣಿದನು ಧಿಮಿ ಧಿಮಿ.

"ಮಾವಿನಾಟದ, ಹಾವಿನಾಟದ
ನೋವು ಸೋಜಿಗ ತಿಳಿಯದು!
ಯಾವ ತಂತ್ರವೊ? ಮೋಡಿ ಮಂತ್ರವೊ?
ನಾವು ಅರಿಯೆವು" ಎಂದರು.

ಬಿದಿರು ಒಂದನು ಹೊತ್ತು ತಂದನು
ಮುದುಕ ಡೊಂಬನು ಹೆಗಲಲಿ.
ಅದನು ಬಲದಲಿ ಹೂಡಿ ನೆಲದಲಿ
ಮದುವೆ ಮಗಳನು ಕರೆದನು.

ಹೆಣ್ಣು ಬಂದಳು ಹಣ್ಣು ಬಿಡದಾ
ಸಣ್ಣ ಬಳ್ಳಿಯ ಬೆಡಗಿನಾ,
ಮಕ್ಕಳಾಡುವ ಬೆಣ್ಣೆಯಂತಿಹ
ಕಣ್ಣು ಕಟ್ಟಿನ ಸೊಬಗಿನಾ.

ಮಣಿದು ಹಗ್ಗಕೆ ಹಾರಿ ಸಿಡಿದಳು ಕುಣಿವ ಮರಿಸಿಡಿಲಂತೆಯೇ
ಹೆಣೆದು ಮೈಯನು, ಹಾವಿನಂತೆಯೆ ಗಣಿಗೆ ಸರಿದಳು ಸರ್ರನೆ!
ಬಳಿಕ ಬೆನ್ನನು ಕೋದು, ಕೈಕಾಲ್ಗಳನು ತೇಲಿಸಿ ಹೊಳೆದಳು,
ಮಳೆಯ ಬಿಲ್ಲಿನ ಹಾಗೆ, ಸ್ಥಾಣುವಿನೆಳೆಯ ಚಂದ್ರನ ಚಂದದಿ.
ಕೊರಳು ವಾಲಿತು, ಹೆರಳು ಜೋಲಿತು, ಕರುಳು ತೇಲಿತು ತರಳೆಯಾ
ಉರುಳುತಲಿ ಕಾಲ್ ಬೆರಳ ಕೊನೆಯಲಿ ಮರಳಿ ಹೊಲಿದಳು ಜಡೆಯನು.

ಗಳೆಯ ಡೊಂಬತಿಯಾಟದಾ ಪರಿ
ಗಾಳಿ ಕೈಗಿರಿಗಿಟಗಿರಿ,
ಸುಳಿಯ ನೀರಿನ ತಲೆಯ ಹೂಗರಿ,
ಸೆಳೆಯ ಮಿಂಚಿನ ತೋಳ್ ಸರಿ.

ಅರರೆ! ಡೊಂಬರ ಹೆಣ್ಣುಮರಿ
ಗರಗರನೆ ಎತ್ತರ ಭರದಲಿ–
ತಿರುಗುವಾ ತೆರ ಹುಡಿಯು ಅರಸಿನ
ಎರಚಿತೆರಚಿತು ಕಣ್ಣಿಗೆ.

ಬಿಗಿದು ಬಿಚ್ಚುವ, ಬಿಚ್ಚಿ ಬಿಗಿಯುವ,
ಮುಗಿಲ ಕೂದಲ ಬಲೆಯಲಿ.
ಇಗೊ! ಇಗೋ!
ಸಿಲುಕಿದುದು ಅರಸನ
ಮಿಗದ ಕಣ್ಗಳ ಜೋಡಿಯು!

"ಏಕೆ! ಡೊಂಬನೆ! ನಿಲ್ಲಿಸಾಟವ! ಈಕೆಯಲಿ ಮನಸೋತುದು.
ಸಾಕು! ಬಂಗರು ನಾನೆ! ಕೈಸರ ಹಾಕುವಿಕೆಯ ಕೊರಳಲಿ!"

ಎಂದು ನಂದಾವರದ ಬಂಗರು ನೊಂದು ನಂದದ ತಾಪದಿ,
ಮುಂದೆ ನಿಂದಾ ಡೊಂಬನೊಂದಿಗೆ "ಸಂದಿಸಿವಳನು", ಎಂದನು.

ನುಡಿದ ಮಾತಿನ ಮಾನಭಂಗದ ಹೊಡೆತ ನುಂಗಿದ ಸಿಡುಕಿನಾ
ಕಿಡಿಯ ಕಣ್ಣೀರಿಂದ ನಂದಿಸಿ, "ಒಡೆಯ! ಬಿನ್ನಹ ಲಾಲಿಸು".
"ಮಗಳ ಹೆಸರಿನ ಮೈಗೆ ಸೂಳೆಯ ಬೆಡಗ ಸೀರೆಯ ಉಡಿಸೆನು.
ನಗರೆ? ಹೆಸರಿನ ತಲೆಗೆ ಪಾದರಿ ಮುಗುಳು ಹೂವನು ಮುಡಿಸೆನು."

ಉಲಿಯೆ ಡೊಂಬನು, ಕೆಲರ ಪಿಸಿಪಿಸಿ, ಕೆಲರ ಗುಜುಗುಜು, ಕೆಲವರಾ
ಗಲಭೆ ಕಳಕಳ ಆಟದಾ ಕಳದಲಿ ವಿಶಾಲಕೆ ತುಂಬಿತು.

ಒಡನೆ ಡೊಂಬನು ಡೋಲು
ಬಡಿದನು,
ಬಡಿದು ಗುಡುಗುಡು
ಗುಡುಗಿದಾ.
ಗುಡುಗಿ ಓಡಿದ,
ಓಡಿ ತೋರಿದ
ಗಿಡುಗನನು ಗಳೆ ಗುಬ್ಬಿಗೆ.
ಹೀಗೆ ತೋರಿಸಿ
ಮಾಯವಾದನು
ಲಾಗದಲಿ ಕಳದಾಚೆಗೆ
ಹೋಗಿ ಹೋದನು,
ಸನ್ನೆ ಮಾಡುತ
ಕೈಗಳಿಂದಾ ಹುಡುಗಿಗೆ.
ಕಣ್ಣು ಕತ್ತಲೆಗೊಳಿಪ ಗಣೆಯಿಂ
ಹೆಣ್ಣು ಧುಮುಕಿತು ಹೊಳೆಯಲಿ
ಬಣ್ಣ ಕಿಡಿಯಲಿ
ಬಿದ್ದು ಬಾನಿಂ
ತಣ್ಣಗಾಗುವ ಬಿರುಸಿನೋಲ್.

ಎಲ್ಲಿ? ಹೋ! ಹೋ! ಹೋಯ್ತು! ಹೋಗಿರಿ!

ಎಲ್ಲಿ? ಎಲ್ಲೆಂಬರಸಿನಾ

ತಲ್ಲಣದ ಕಟ್ಟಾಜ್ಞೆಗಾಗಲೆ

ಎಲ್ಲರೋಡಿರ್ದ

ಅರಸುತಾ.
ಆಳುನಾಲ್ವರು
ದಡಕೆ ಹಾಯ್ದರು,
ಆಳವಿಹ ಹೊಳೆ ನೀರಲಿ
ಆಳುವೇಳುವ
ಇಬ್ಬರನು ತಮ್
ಆಳುವವನೆಡೆಗೊಯ್ದರು,
ಗದ್ದಿಗೆಯ ಬಳಿ
ಕೆಡವಿದರು-ನೀರ್
ಮೆದ್ದ ಉದ್ದಿನ ತೊಗಲಿನಾ
ಬಿದ್ದ ಮೋರೆಯ.
ನಿದ್ದೆಗಣ್ಣಿನ,
ಒದ್ದೆ ಕೂದಲ ಡೊಂಬನಾ.
"ದೇವ ಬಂಗರೆ!
ಕರೆವುದೆನ್ನನು,............
.
...........ಸಾವು;....................
ಬಾಗಿಲು ತೆರೆದಿದೆ!...........
ಜೀವನಿಲ್ಲದು;............
...........ಅರಿಕೆ ಮಾಡುವೆ;
ಕಾವುದೆನ್ನಪರಾಧವಾ.............

"ಹಿಂದೆ ನಾಲ್ಕ-ಕೈ ವರ್ಷಗಳ ಕೆಳಗೊಂದು ಸಲ ನಾನಿಲ್ಲಿಗೆ

ಬಂದು ಗೈದಾಟಕೆ ಪಾದದ ತಂದೆ ತಂಗಿ ಸುನಂದೆಯು-"

ಎಂದು ನಿಲ್ಲಲು ಡೊಂಬನರೆನುಡಿ, "ಮುಂದೆ. ಮುಂದೆ'ನ ಬಂಗರು,
"ಮುಂದೆ ತಮ್ಮ ಸುನಂದೆ... ಕಿರಿಮಗಳೊಂದಿಗರಮನೆ... ಬಿಟ್ಟಳು.

"ಅಂದು ರತ್ನಾವತಿಗೆ ತುಂಬದು ಒಂದು ವರ್ಷವು, ಕೂಸಿನಾ
ಮುಂದು ಎಣಿಸದೆ, ನಿಂದೆ ಗಣಿಸದೆ... ಹಿಂದೆ ಬಂದಳು ಪಾಪಿಯಾ.

"ಸಂದವಿಂದಿಗೆ ವರ್ಷಗಳು ಹನ್ನೊಂದು,–ಸತ್ತು ಸುನಂದೆಯು,
ಅಂದಿನಿಂದಿದು ಕೋಗಿಲೆಯ ಮರಿ ಕಾಗೆ ನಾನೆನೆ ಆಯಿತು.

"ಇವಳೆ ರತ್ನಾವತಿಯು; ಮುಂಚಿನ ಇವಳ ಹೆಸರದು ರನ್ನೆಯು;
ಇವಳೆ ಕೊಳೆ ಸೋಕದ ಸುಕನ್ಯೆಯು; ಇವಳೆ ಡೊಂಬರ ಚೆನ್ನೆಯು.

"ಆರಿ ದೂರಕೆ ಅಲೆದ ಕಡಲಿನ ನೀರೆ ಕಡಲನೆ ಕೂಡಿತು........
.....ಬೇರೆ! ....ಹಾ!....ಹಾ!" ಎಂದು ಡೊಂಬನು ತೀರಿಸದೆ ಕಣ್ಮುಚ್ಚಿದಾ.

ಅಳಿದ ಡೊಂಬಗೆ ಉತ್ತರಕ್ರಿಯೆಗಳನು ಬಂಗರು ಮಾಡಿಸಿ,
ಗಳೆಯ ಡೊಂಬರ ಚೆನ್ನೆಯನು ಮದುವಳಿಗೆ ಕೈಯಲಿ ಹಿಡಿದನು.

ತನ್ನ ರಾಜ್ಯದ ಪಾಲು ಬಳುವಳಿಯನ್ನು ಕೊಟ್ಟನು ರನ್ನೆಗೆ.
ಚೆನ್ನೆ ಸಂತತಿಗಾಯ್ತು ಅದರಿಂ ಹೆಸರು ಡೊಂಬಾ ಹೆಗಡೆ.

## ಕವಿ ಪರಿಚಯ

## ಪಂಜೆ ಮಂಗೇಶರಾವ್ (1874-1937)

ಜನನ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ

ಮುಖ್ಯ ಕೃತಿಗಳು : ಇವರ ಕವಿತೆಗಳು, ಸಂಶೋಧನಾ ಲೇಖನಗಳು, ಕತೆಗಳು, ಕೋಟಿ ಚನ್ನಯ್ಯ – ತುಳು ಪಾಡ್ದನಗಳು – ಮುಂತಾದುವನ್ನು ಓರಿಯಂಟ್ ಲಾಂಗ್‌ಮನ್ ಪ್ರಕಾಶನ ಸಂಸ್ಥೆ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದೆ. ಹೆಣ್ಣು–ಗಂಡುಗಳ ಪರಸ್ಪರ ಆಕರ್ಷಣೆಯ ದುರ್ದಮ್ಯತೆ ಈ ಕಥನ ಕವನದ ವಸ್ತು. ವಿಲಕ್ಷಣವಾಗಿ ವರ್ತಿಸುವ ಸನ್ನಿವೇಶಗಳು, ಕತೆಯ ಅನಿರೀಕ್ಷಿತ ತಿರುವುಗಳಿಗೆ ಕಾರಣವಾಗಿ, ಕವಿತೆ ಉದ್ದಕ್ಕೂ ಕುತೂಹಲವನ್ನು ಉಳಿಸಿಕೊಳ್ಳುತ್ತದೆ. ಇಲ್ಲಿನ ಗೋವಿನಕತೆಯ ಮಟ್ಟು ಗಮನೀಯ.

## 2. ಇಂದಿನ ದೇವರು

**– ಕುವೆಂಪು**

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ
ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು
ಹಾವ್ಗಳಿಗೆ ಹಾಲೆರೆದು ಪೋಷಿಸಾಯ್ತು
ಬಿಸಿಲು ಮಳೆ ಗಾಳಿ ಬೆಂಕಿಯನೆಲ್ಲ ಬೇಡಿಯಾಯ್ತು
ದಾಸರನು ಪೂಜಿಸಿಯೆ ದಾಸ್ಯವಾಯ್ತು
ಗುಡಿಯೊಳಗೆ ಕಣ್ ಮುಚ್ಚಿ ಬೆಚ್ಚಗಿರುವರನೆಲ್ಲ
ಭಕ್ತ ರಕ್ತವ ಹೀರಿ ಕೊಬ್ಬಿಹರನೆಲ್ಲ
ಗಂಟೆ ಜಾಗಟೆಗಳಿಂ ಬಡಿದು ಕುತ್ತಿಗೆ ಹಿಡಿದು
ಕಡಲಡಿಗೆ ತಳ್ಳಿರೈ ಶಂಖದಿಂ ನುಡಿದು
ನಿದ್ದೆ ಮಾಡುತ್ತಿಹರು ಹಲವು ದೇವತೆಗಳೆಲ್ಲ
ಬಿದ್ದವರು ಕಲ್ಲಾಗಿ ಕೆಲವರಿಹರು
ಕ್ಲೀಬತನದಲಿ ಮರೆತು ತಮ್ಮ ಪೌರುಷವನೆಲ್ಲ
ಸತ್ತೆ ಹೋದಂತಿಹರು ಮತ್ತುಳಿದಮರರು
ಅವರ ಗುಡಿ ಹಾಳಾಯ್ತು ಅವರ ನುಡಿ ಮಡಿದುಹೋಯ್ತು
ಅವರ ನೆಮ್ಮಿದ ನಮಗೆ ಬೀಳುಗತಿಯಾಯ್ತು
ಮುಂದಿವಳನಾರಾಧಿಸುವ ಶಕ್ತಿಯಾರ್ಜಿಸುವ

ಒಂದು ಶತಮಾನವನು ಒಂದೆ ದಿನ ಜೈಸುವ
ಸತ್ತ ಕಲ್ಗಳ ಮುಂದೆ ಅತ್ತು ಕರೆದುದು ಸಾಕು
ಜೀವದಾತೆಯನಿಂದು ಕೂಗಬೇಕು
ಶಿಲೆಯ ಮೂರ್ತಿಗೆ ನೆಯ್ದ ಕಲೆಯ ಹೊದಿಕೆಯನೊಯ್ದು
ಚಳಿಯು ಮಳೆಯಲಿ ನವೆವ ತಾಯ್ಗೆ ಹಾಕು
ಭಾರತಾಂಬೆಯೆ ನಮಗಿಂದು ಜೀವನದ ದೇವತೆಯು
ವಿಶ್ವರೂಪಿಣಿಯವಳು ವಿಶ್ವಮುಖಿಯೈ
ನಮ್ಮೆಲ್ಲರಂಗಗಳೆ ನಮ್ಮಂಬೆಯಂಗವೈ
ನಮ್ಮ ಸ್ವಾತಂತ್ರ್ಯದೊಳೆ ನಮ್ಮಮ್ಮ ಸುಖಿಯೈ
ಇಂದೊ ನಾಳೆಯೊ ದಾಸನೀಶನಾಗಲೆ ಬೇಕು
ಎಂದಿದೆ ಎದ್ದೇಳಿ ನಾಳೆಯೆನೆ ಹೋಕು
ನಾವೆ ದೇವತೆಗಳೈ ಭಾರತವೆ ಸ್ವರ್ಗವೈ
ಭಾರತಾಂಬೆಯೆ ನಮಗೆ ದೇವಿಯೈ ಜನನಿ.

*********

## ಕವಿ ಪರಿಚಯ

## ಕುವೆಂಪು (1904-1994)

ಕನ್ನಡ ನವೋದಯ ಕಾಲದ ಹರಿಕಾರರಲ್ಲಿ ಪ್ರಮುಖರಾದ ಕುವೆಂಪು ಅವರು ಹೊಸಗನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿ ಹೊಸ ಮೌಲ್ಯಗಳನ್ನು ರೂಪಿಸಿಕೊಟ್ಟವರು. ಮೈಸೂರು ವಿ.ವಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಕುಲಪತಿಗಳಾಗಿ ಸೇವೆಸಲ್ಲಿಸಿದ್ದಾರೆ.

ಸಾಮಾಜಿಕ ಕಳಕಳಿ ಹಾಗೂ ವೈಚಾರಿಕ ಪ್ರಜ್ಞೆಯ ಶ್ರೀಯುತರು ಪ್ರಕೃತಿಪ್ರೇಮಿ. ಅವರ ಕಾವ್ಯ, ಕತೆ, ಕಾದಂಬರಿಗಳಲ್ಲಿ ಸಹಜವಾಗಿ ನಿಸರ್ಗ ವರ್ಣನೆ ಇರುತ್ತದೆ. ನವಿಲು, ಕಲಾಸುಂದರಿ, ಪಕ್ಷಿಕಾಶಿ, ಅನಿಕೇತನ, ಕೋಗಿಲೆ ಮತ್ತು ಸೋವಿಯತ್ ರಷ್ಯಾ, ಮುಂತಾದ ಕಾವ್ಯಕೃತಿಗಳು ಹಾಗೂ ಕಾನೂರು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಕಾದಂಬರಿಗಳಲ್ಲದೆ ಶೂದ್ರತಪಸ್ವಿ, ಬೆರಳ್‌ಗೆ ಕೊರಳ್, ರಕ್ತಾಕ್ಷಿ ಮುಂತಾದ ನಾಟಕಗಳು, ಲೇಖನಗಳು, ಪ್ರಬಂಧಗಳನ್ನು ರಚಿಸುವ ಮೂಲಕ ಸಾಹಿತ್ಯ ಸರಸ್ವತಿಯ ಆರಾಧಕರಾಗಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ – (ಶ್ರೀರಾಮಾಯಣ ದರ್ಶನಂ) (1955), ಮೈಸೂರು ವಿಶ್ವವಿದ್ಯಾನಿಲಯದಿಂದ, ಗೌರವ ಡಿ.ಲಿಟ್. (1956), ಪದ್ಮಭೂಷಣ (1958), ರಾಷ್ಟ್ರಕವಿ ಪುರಸ್ಕಾರ (1964), ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. (1966), ಜ್ಞಾನಪೀಠ ಪ್ರಶಸ್ತಿ (ಶ್ರೀ ರಾಮಾಯಣ ದರ್ಶನಂ) (1968), ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. (1969), ಕೇಂದ್ರ ಸಾಹಿತ್ಯ ಅಕಾಡೆಮಿಯು ಫೆಲೋಷಿಪ್ (1979), ಪಂಪ ಪ್ರಶಸ್ತಿ (1988), ಪದ್ಮವಿಭೂಷಣ (1989), ಕರ್ನಾಟಕ ರತ್ನ (1992), ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ, ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ (ಮರಣೋತ್ತರ)

## 3. ಯುಗಾದಿ

– ದ. ರಾ ಬೇಂದ್ರೆ

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ

ಹೊಂಗೆ ಹೂವ ತೊಂಗಲಲ್ಲಿ
ಬೃಂಗದ ಸಂಗೀತ ತೇಲಿ
ಮತ್ತೆ ಕೇಳಬರುತಿದೆ
ಬೇವಿನ ಕಹಿ ಬಾಳಿನಲ್ಲಿ
ಹೂವಿನ ನಸುಗಂಪ ಸೂಸಿ
ಜೀವಕಳೆಯ ತರುತಿದೆ

ಕಮ್ಮನ ಬಾಣಕ್ಕೆ ಸೋತು
ಜುಮ್ಮನೆ ಮಾಮರವು ಹೂತು
ಕಾಮಗಾಗಿ ಕಾದಿದೆ
ಸುಗ್ಗಿ ಸುಗ್ಗಿ ಸುಗ್ಗಿ ಎಂದು

ಹಿಗ್ಗಿ ಗಿಳಿಯ ಸಾಲು ಸಾಲು
ತೋರಣದೊಲು ಕೋದಿದೆ

ವರುಷಕೊಂದು ಹೊಸತು ಜನ್ಮ
ಹರುಷಕೊಂದು ಹೊಸತು ನೆಲೆಯು
ಅಖಿಲ ಜೀವಜಾತಕೆ!
ಒಂದೆ ಒಂದು ಜನ್ಮದಲ್ಲಿ
ಒಂದೆ ಬಾಲ್ಯ ಒಂದೆ ಹರೆಯ
ನಮಗದಷ್ಟೆ ಏತಕೆ?

ನಿದ್ದೆಗೊಮ್ಮೆ ನಿತ್ಯ ಮರಣ
ಎದ್ದ ಸಲ ನವೀನ ಜನನ
ನಮಗೆ ಏಕೆ ಬಾರದೊ?
ಎಲೆ ಸನತ್ಕುಮಾರದೇವ!
ಸಲೆ ಸಾಹಸಿ ಚಿರಂಜೀವ!
ನಿನಗೆ ಲೀಲೆ ಸೇರದೋ?

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ
ನಮ್ಮನಷ್ಟೆ ಮರೆತಿದೆ!

# ಕವಿ ಪರಿಚಯ

## ದ.ರಾ. ಬೇಂದ್ರೆ

ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಕಾವ್ಯನಾಮ 'ಅಂಬಿಕಾತನಯದತ್ತ'. ಧಾರವಾಡ ಇವರ ಹುಟ್ಟೂರು. ಧಾರವಾಡದ ಆಕಾಶವಾಣಿ ಕೇಂದ್ರದ ಸಲಹೆಗಾರರಾಗಿ ಹೈಸ್ಕೂಲು, ಹಾಗೂ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಜಯ ಕರ್ನಾಟಕ, ಜೀವನ ಪತ್ರಿಕೆಗಳ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಇವರ ಕೆಲವು ಕವನ ಸಂಕಲನಗಳು: ಗರಿ, ಸಖೀಗೀತ, ಉಯ್ಯಾಲೆ, ನಾದಲೀಲೆ, ಅರಳು ಮರಳು, ಗಂಗಾವತರಣ, ನಾಕುತಂತಿ, ಕೃಷ್ಣಕುಮಾರಿ, ಚೈತ್ಯಾಕ್ಷಿ, ಮತ್ತೆ ಬಂತು ಶ್ರಾವಣಾ, ಕರುಳಿನ ವಚನಗಳು.

1943ರಲ್ಲಿ ಶಿವಮೊಗ್ಗದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, 1958ರಲ್ಲಿ 'ಅರಳು ಮರಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1964ರ ಮೈಸೂರು ದಸರಾ ಕಾರ್ಯಕ್ರಮದಲ್ಲಿ ಬೇಂದ್ರೆಯವರಿಗೆ ಸನ್ಮಾನ, 1965ರಲ್ಲಿ ಮರಾಠಿಯಲ್ಲಿ ರಚಿಸಿದ "ಸಂವಾದ" ಎಂಬ ಕೃತಿಗೆ ಕೇಳ್ಕರ್ ಬಹುಮಾನ, 1968ರಲ್ಲಿ 'ಪದ್ಮಶ್ರೀ' ಪ್ರಶಸ್ತಿ ಲಭಿಸಿತು, 1973ರಲ್ಲಿ 'ನಾಕುತಂತಿ' ಕೃತಿಗೆ ಜ್ಞಾನಪೀಠಪ್ರಶಸ್ತಿ, ಕಾಶಿ ವಿದ್ಯಾಪೀಠ, ವಾರಣಾಸಿ, ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್, ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಷಿಪ್ ಪಡೆದರು.

# 4. ಮನೆಯಿಂದ ಮನೆಗೆ

– ಕೆ.ಎಸ್. ನರಸಿಂಹಸ್ವಾಮಿ

ವರುಷ ತುಂಬಿದರೆ ಹೊರಮನೆಯಿಂದ ಹೊರಮನೆಗೆ
ವರ್ಗ. ವರ್ಗವೆಂದರೆ ಮತ್ತೆ
ಗಂಟು ಮೂಟೆಯ ಬಿಗಿತ, ಇನ್ನಷ್ಟು ಆಯಾಸ.
ತಿರುಪಿರದ ಲಾಂದ್ರಗಳು, ತಳವಿರದ ಗೂಡೆಗಳು,
ಜರಡಿ, ತೊಟ್ಟಿಲು, ಒನಕೆ – ಇವುಗಳದೆ ಮೆರವಣಿಗೆ!

ಸರಕು ಸುಮ್ಮನೆ ಭಾರ, ಎಸೆಯಬಾರದೆ ಹೇಳು.
'ಎಸೆದರಾಯಿತೆ, ಹೇಳಿ ? – ಮೊದಲು ಹೊಸತನು ತನ್ನಿ'
ಸ್ಥಳವಿಲ್ಲ ಬಂಡಿಯಲಿ, 'ಹೊತ್ತು ಸಾಗಿಸಬೇಕು' ;
ಹೊತ್ತು ಸಾಗಿಸಬೇಕು ? ಅದಕೆ ಕತ್ತಲೆ ಬೇಕು !
'ಕತ್ತಲೆಗೆ ಕಾಯೋಣ!'

(ಏಳು ಮಕ್ಕಳ ತಾಯಿ, ಸ್ನೇಹಮಯಿ, ನಕ್ಕಳು)
ನಗೆ ಕೊಲ್ಲುವಂತೆ ಹಗೆ ಕೊಲ್ಲಲಾರದು; ಏಳು,
ಹೊಸಮನೆಗೆ ಹೋಗೋಣ ಮೊದಲು ; ಸಂಜೆಗೆ ಬಂದು
ಸಾಗಿಸುವ ಕೆಲಸ ನನಗಿರಲಿ.
ಕಂಬನಿಗೊಳವ

ಕೆಂಗರಿಯ ಮೀನು ಕಲಕಿತ್ತು. ಗೆದ್ದಳು ಹೆಣ್ಣು !
ನಗಬಹುದು ಹೀಗೆ ಒಂದೊಂದು ಸಲ ಬದುಕಿನಲಿ.

ಒಂದೊಂದು ಮನೆಯ ಬಿಡಲೊಂದೊಂದು ಕಾರಣ.
ಈ ಸಲದ ಅನುಭವ : ಮನೆವಂತ ಒಳ್ಳೆಯವ ;
ಅವನ ಹೆಂಡತಿ, ಮಗಳು ? – ಒಳ್ಳೆಯವರಿರಬೇಕು !
"ಮನೆಯ ಬಿಡಿ" ಎಂದವರು ನಮಗೆ ಹೇಳಿರಲಿಲ್ಲ,
ಅವರು ಮಾಡಿದ ಕೆಲಸ ಬೇರೆ!
ಓದು ಹತ್ತದ ಮಗಳ ದನಿಯಾದರು ಕುದುರಿ
ಮದುವೆ ಹತ್ತಿರವಾಗಲೆನುವ ಹಂಬಲಿನಿಂದ
ಸಂಗೀತ ಪಾಠವನು ಗೊತ್ತುಮಾಡಿದರಷ್ಟೆ !
ಆ ಎಂಟು ತಿಂಗಳೂ ಮಳೆಗಾಲ, ಕಪ್ಪೆಗಳು.
ಮೊದಲು, ಕೊನೆ – ಆ ಹುಡುಗಿ ಕಲಿತ ಒಂದೇ ಚರಣ –
"ಕೆರೆಯ ನೀರನು ಕೆರೆಗೆ ಚೆಲ್ಲಿ,"
ಎಲ್ಲ ಮಾಡುವ ಕೆಲಸವಿಷ್ಟೆ ಇಲ್ಲಿ !

ಕೆರೆಯ ನೀನು ಕೆರೆಗೆ ಚೆಲ್ಲಿ
ಬೆಳಗಿನಲ್ಲಿ, ಮಧ್ಯಾಹ್ನದಲ್ಲಿ, ಸಂಜೆಯಲ್ಲಿ
ನೀರ ತುಂಬಲು ಇನ್ನು ಸ್ಥಳವಿರದೆ ಮನೆಯಲ್ಲಿ
ಬಂದು ನಿಂತರೆ ನಾವು ನಡುಬೀದಿಯಲ್ಲಿ
'ನೀರ ಚೆಲ್ಲಿದ ಮಂದಿ ನೀವೆಂದು' ಮನೆವಂತ
ಒಟ್ಟು ತೆರಿಗೆಯ ಬಿಗಿದ ನನ್ನ ತಲೆಗೆ !

ನೀರಳೆಯುವ ಯಂತ್ರ ನಿಜವನ್ನೆ ನುಡಿದಿತ್ತು ;
ಇನ್ನೊಂದು ಮನೆಯ ಕದ ನಮಗಾಗಿ ತೆರೆದಿತ್ತು.

ಇದ್ದವರಿಗೊಂದು ಮನೆ, ಇಲ್ಲದವರಿಗೆ ನೂರು.
ಇಲ್ಲಿ ಹಿಂದಿದ್ದವರಿಗೆಷ್ಟು ಮಕ್ಕಳೊ ಕಾಣೆ!
ಎಲ್ಲೆಲ್ಲು ನೆಲವ ಕೆತ್ತಿವೆ ;
ನಲ್ಲಿಗಳ ಮುರಿದಿವೆ ;
ದೀಪಗಳ ಕೆಡಿಸಿವೆ ;
ಹೂಗಿಡಗಳ ಕಿತ್ತೆಸೆದಿವೆ ;
ಎಲ್ಲ ಬಾಗಿಲಮೇಲೆ ಸೊನ್ನೆಗಳ ಬರೆದಿವೆ.

ನಾಳೆ ಈ ಹುಡುಗರಿನ್ನೇನು !
ಇಲ್ಲಿ ಹೊಸತನವೆಲ್ಲಿ? ಯಾರೋ ಇದ್ದ ಮನೆಗೆ
ನಾವು ಬಂದಿದ್ದೇವೆ. ನಾವು ಹೊಸಬರೆ ? ಅಲ್ಲ.
ಕಂದು ಗೋಡೆಯ ಮೇಲೆ ಇಲ್ಲಣದ ತೆರೆಬಿದ್ದು
ಕಾದಿರುವ ನಾಟಕದ ಹೆಸರು 'ಹೊಸತು'.

ಈ ಮನೆಗೆ ಬಂದೆವೀ ದಿನ –
ಗಾಜೊಡೆದ ಪಠಗಳ ರಿಪೇರಿಗವಸರವಿಲ್ಲ ;
ಪಾತ್ರೆಗಳಿಗಾಗಬೇಕಾದರೆ ಕಲಾಯ
ತಳ್ಳಬಹುದಿನ್ನೊಂದು ವಾರ.
ಹೊಸಚಾಪೆ, ಕಾಲೊರಸಿ – ನಾಳೆ ತರಬಹುದಲ್ಲ ?
"ಈಗೇನು ಮಾಡೋಣ ? " ಮತ್ತೆ ಕೇಳುವೆಯಲ್ಲ !

ಹೊಕ್ಕ ಮನೆಯೆಲ್ಲ ಹೊಸಮನೆಯೆಂದೆ ಕರೆಯೋಣ ;
ಹಳೆಯ ಬಾಗಿಲಿಗೆ ಹೊಸತೋರಣ ಕಟ್ಟೋಣ ;
ಶಾಲೆಮಕ್ಕಳ ಹಾಗೆ ಹೊಸತನವ ಕಲಿಯುತ್ತ
ಇನ್ನೊಂದು ವರುಷ ಕಳೆಯೋಣ !

ಒಂದೊಂದು ಮನೆಗೆ ಒಂದೊಂದು ವರುಷದ ಸರದಿ ;
ಅಷ್ಟು ಹೊಸತೇನಲ್ಲ ನಾಳೆಯೋದುವ ವರದಿ.
ಸ್ಮೃತಿಪಥದ ಬೆಳ್ಳಿದಾರದ ಸುರುಳಿ ಬಿಚ್ಚುತಿದೆ ;
ಬೆಲೆಯಿರದ ಸರಕ ಸಾಗಿಸಿದೆ ಬಾಗಿದೆ ಬೆನ್ನು ;
ಕೆರೆಯ ನೀರನು ಕೆರೆಗೆ ಚೆಲ್ಲಿ ಬಿಳಿಚಿದೆ ಕಣ್ಣು ;
ಮಗು ಬರೆದ ಸೊನ್ನೆ ; ಮನೆವಂತರಾಡಿದ ಮಾತು ;
ನಕ್ಕನಗೆ ; ಕಣ್ಣೀರು –
ಒಂದಲ್ಲ, ಎರಡಲ್ಲ, ನಮ್ಮ ಪಾಲಿನ ಪುಣ್ಯ !
ಬಂಡಿಯಲಿ ಸ್ಥಳವಿಲ್ಲ, ಹೊತ್ತು ಸಾಗಿಸಬೇಕು ;
ಅದಕೆ ಕತ್ತಲೆ ಬೇಕು.
ಕತ್ತಲೆಗೆ ಕಾಯೋಣ !

ಮನೆಯಿಂದ ಮನೆಗೆ, ಹೊರಮನೆಯಿಂದ ಹೊರಮನೆಗೆ
ಮೊದಲ ಮನೆಯಿಂದ
ಆದರವಿರದ, ಕದವಿರದ, ಹೆಸರಿರದ ಇನ್ನೊಂದು ಮನೆಗೆ
ಹೊಸತು ಹಳೆಯದು ಎಲ್ಲ ಯಾತ್ರೆಗೆ ಹೊರಟಿದ್ದೇವೆ.
ಅಲ್ಲಿ ತಡೆಯುವರಿಲ್ಲ ;

ಒಳಗೆ ಕರೆಯುವರಿಲ್ಲ ;
ಇನ್ನೊಂದು ಮನೆಯಿಲ್ಲ ;
ಹೊರಮನೆಯ ನೆರಳಿಲ್ಲ ;
ಹೊದವರು ಹಿಂದಿರುಗಿ ಬರಲು ಹಾದಿಗಳಿಲ್ಲ ;
ಅದೇ ಕಡೆಯ ಮನೆ !
ಬಾಂದಳದ ತಾರೆಗಳ ಓರೆಗಣ್ಣಿನ ಕೆಳಗೆ
ಆಗಾಗ ಬೀಸುವುದು ಬಯಲ ಗಾಳಿ.

*********

## ಕವಿ ಪರಿಚಯ

### ಕೆ.ಎಸ್. ನರಸಿಂಹಸ್ವಾಮಿ

ಮಂಡ್ಯ ಜಿಲ್ಲೆ ಕಿಕ್ಕೇರಿಯಲ್ಲಿ 1915ರಂದು ಜನಿಸಿದ ಕೆ.ಎಸ್. ನರಸಿಂಹಸ್ವಾಮಿಯವರು, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ವ್ಯಾಸಂಗ ಮಾಡಿ, ಸರ್ಕಾರಿ ಸೇವೆಗೆ ಆಯ್ಕೆಯಾದರು. ಮಲ್ಲಿಗೆ ಮನಸ್ಸಿನ ಕೆ.ಎಸ್.ನ. ಅವರು ನವಿರಾದ ಪ್ರೀತಿ, ಪ್ರೇಮ, ಪ್ರಣಯ ಹಾಗೂ ದಾಂಪತ್ಯದ ಅನುಭವಗಳ ಥಲುಕುಗಳನ್ನು ತಮ್ಮ ಕಾವ್ಯದಲ್ಲಿ ಪ್ರತಿಬಿಂಬಿಸಿದವರು. ನವ್ಯಸಾಹಿತ್ಯದ ಆಶಯಗಳನ್ನೊಳಗೊಂಡ ಇವರ ಪ್ರಮುಖ ಕಾವ್ಯಗಳೆಂದರೆ, ಮೈಸೂರು ಮಲ್ಲಿಗೆ, ದೀಪದ ಮಲ್ಲಿ, ತೆರೆದ ಬಾಗಿಲು, ಶಿಲಾಲತೆ, ಮುಂತಾದುವು.

1933 – ಕಬ್ಬಿಗನ ಕೂಗು ಮೊದಲ ಕವನ, 1942– ಮೈಸೂರು ಮಲ್ಲಿಗೆ ಪ್ರಸಿದ್ಧ ಕವನ ಸಂಕಲನ ಪ್ರಕಟ, 1943– ದೇವರಾಜ್ ಬಹದ್ದೂರ್ ಬಹುಮಾನ, 1957ರಲ್ಲಿ 'ಶಿಲಾಲತೆ'ಗೆ ರಾಜ್ಯ ಸಂಸ್ಕೃತಿ ಇಲಾಖೆ ಪ್ರಶಸ್ತಿ, 1972– ಚಂದನ ಅಭಿನಂದನ ಗ್ರಂಥ ಸಮರ್ಪಣೆ, 1977– ತೆರೆದ ಬಾಗಿಲು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1986–

ಮೈಸೂರು ಮಲ್ಲಿಗೆ ಧ್ವನಿ ಸುರುಳಿ, 1987– ಕೇರಳದ ಕವಿ ಕುಮಾರ್ ಆಶಾನ್ ಪ್ರಶಸ್ತಿ, 1990– ಮೈಸೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯಾ ಸಮ್ಮೇಳನದ ಅಧ್ಯಕ್ಷತೆ, 1991– ಮೈಸೂರು ಮಲ್ಲಿಗೆ ಚಲನಚಿತ್ರ ಬಿಡುಗಡೆ, 1992– ಉತ್ತಮ ಗೀತರಚನೆಗೆ ರಾಷ್ಟ್ರಪತಿ ಪ್ರಶಸ್ತಿ, 1992– ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಿಲಿಟ್, 1996– ಮಾಸ್ತಿ ಪ್ರಶಸ್ತಿ, 1997– ಪಂಪ ಪ್ರಶಸ್ತಿ, 1999– ಕೇಂದ್ರ ಸಾಹಿತ್ಯ ಅಕಾಡೆಮಿ ಗೌರವ ಫೆಲೋಷಿಪ್, 2000– ಗೊರೂರು ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ.

## 5. ಕಣಿವೆಯ ಮುದುಕ

– ಪು.ತಿ.ನ

ಪಯಣ ಬೆಳಸಿತು ಸಂಜೆ ; ಬಾನು
ಭಯವ ಬೀರಿತು ಮಿಂಚಿ ಮೊಳಗಿ ;
ಬಯಲುದಿಣ್ಣೆಯನೊಂದುಮಾಡಿತು
ಕಣಿವೆ ತುಂಬುತ ಕತ್ತಲು.

ಕಾಡಿನೊಳಗೆ ನಾನೆ ಒಂಟಿ ;
ಓಡುತಿದ್ದೆನು ಹನಿಗೆ ಬೆದರಿ,
ಮೋಡ ಮಿಂಚಲು ಹಾದಿ ಹಿಡಿದು
ಮೆಟ್ಟಲೇರುವ ತಾಣಕೆ.

ಏನನೆಡಹಿದೆ ? ಸುಯ್ಯಲೇನು ?
ಏನು ನರಳಿಕೆ ? – ಮನುಜನೇನು !
"ಕಾಣದೇನೋ ದಾರಿಹೋಕನೆ !"
ಎಂದು ಗದರಿತು ವ್ಯಕ್ತಿಯು.

ಹೆದರಿ ನಿಂತೆನು – ಮಿಂಚು ಬೆಳಕೊಳು

ಮುದುಕನೊಬ್ಬನ ಕಂಡೆನಲ್ಲಿ :
ಬರಿಯ ಬಂಡೆಯನೊರಗಿ ಕುಳಿತ
"ಹೊಸಿಲಸಾವಿನ ಮುದುಕನ.

"ಗೌಡ, ಕ್ಷಮಿಸ್ಯೆ ; ಇರುಳು, ಕಾಣದು,
ಮೋಡ ಮುಸುಕಿದೆ – ಕಾಡಿಗೊಬ್ಬನೆ !
ಮೇಡ ಹತ್ತಲು ಕಷ್ಟವಹುದೈ :
ಜೊತೆಗೆ ನಿಲ್ಲುವೆ" ನೆಂದೆನು.

ಮೊದಲು ಕೋಪಿಸಿ ಬಳಿಕ ನಕ್ಕನು
ಮುದುಕ ಮರುಕವ ಹಳಿವ ನಗೆಯ
"ಮುದಿಗೆ ಚಳಿಯೆ, ಇರುಳೆ, ಮಳೆಯೆ,
ಕಾಡೆ, ಮೇಡೆ ? ನಡೆಯೊ, ನೀ"

ಹಳುವಿನೊಳಗೂ ಮರುಕ ಬೇಡವೆ !
ಇಳೆಯ ಬವಣೆಗೆ ಜಡ್ಡು ಬಿದ್ದನೆ ?
ಕಳೆದ ಬಾಳೊಳು ದಯೆಯ ಕಾಣದೆ
ಇಂದು ಕಾಣಲು ಹಳಿವನೆ ?

ಹಿತದ ಮಾತುಗಳಾಡುತಾತನ
ಖತಿಯನಿಳುಹಿದೆ : ಬೇಡವೆಂದರು

ಜೊತೆಯೊಳೊಯ್ದನು ಹೆಜ್ಜೆ ಹೆಜ್ಜೆಗು
ನಿಂತು ಮುದುಕನ ನಡೆಸುತ.

ಮೇಡು ಹತ್ತುತಲಿದ್ದೆ ವಿಂತು
ಗೌಡ ಕರಗಿದ, ಕರವ ನೆಮ್ಮಿದೆ.
ಮೋಡ ಮಿಂಚಿನ ಬಾನಹೋಲಿತು
ಎನ್ನ ಮನದಾ ಭಾವವು.

ಗಗನವಳೆಯುವ ಮಿಂಚು ಮುದುಕನ
ಮೊಗದಿ ಬಿಂಬಿಸಿತಂದು–ಕಂಡೆನು
ಉಗುವ ಕಂಬನಿ ಹೊಸಲ ಸೋಜಿಗ !
ಅಳುವನೇನೀ ಮುದುಕನು !

"ದುಗುಡವೇತಕೆ, ಗೌಡ?ಪೇಳೈ
ದಿಗಿಲು ಬಿದ್ದೆಯ ? ಮುಪ್ಪ ಹಳಿವೆಯ ?
ಬಗೆಯೊಳಾವುದು ನೋವು ? ಕೋಪವೆ
ನಿನ್ನ ಅಬಲತೆಗಳುವೆಯಾ ?"

ಎನ್ನ ಮಾತಿಗೆ ಗೌಡನೆಂದನು.
ಎನ್ನ ಕರಗಳನಮುಕಿ, ಮೆಲ್ಲನೆ :
"ನಿನ್ನ ಈ ಬಗೆ ಮರುಕ ತಂದಿತು
ಮರೆತ ಕಂದನ ನೆನಪನು".

ನಡೆದೆವಿಬ್ಬರು ಮೌನದಿಂದ
ಅಡವಿಯೊಳಗೆ ನಾನು ಮದುಕನು.
ನುಡಿಯು ತಿಳುಹಲು ಬಲ್ಲುದೇನು
ಮೌನ ನುಡಿದಾ ದುಗುಡವ ?

## ಕವಿ ಪರಿಚಯ

**ಪು.ತಿ.ನ (1905-1998)** : ಇವರ ಪೂರ್ತಿ ಹೆಸರು ಪುರೋಹಿತ ತಿರುನಾರಾಯಣಯ್ಯಂಗಾರ ನರಸಿಂಹಾಚಾರ್ಯ ಪು.ತಿ.ನ ಇವರ ಕಾವ್ಯನಾಮ ಮೇಲುಕೋಟೆ ಜನ್ಮಸ್ಥಳ.

ಇವರು ಅಹಲ್ಯೆ, ಶಬರಿ, ಸತ್ಯಾಯನ, ಹರಿಶ್ಚಂದ್ರ ಮೊದಲಾದ ಗೀತನಾಟಕಗಳನ್ನು ಬರೆದಿದ್ದಾರೆ. ಗೋಕುಲನಿರ್ಗಮನ, ವಿಕಟಕವಿ ಜಯ, ಹಂಸ ದಮಯಂತಿ ಇವು ರಮ್ಯ ರೂಪಕ ಕೃತಿಗಳು. ಹಣತೆ ರಸಸರಸ್ವತಿ, ಮಾಂದಳಿರು, ಮಲೆದೇಗುಲ, ಶಾರದ, ಯಾಮಿನಿ, ಗಣೇಶ ದರ್ಶನ, ಹೃದಯ ವಿಹಾರಿ, ಇರುಳ ಮೆರಗು, ಹಳೇಬೇರು ಹೊಸ ಚಿಗುರು ಮೊದಲಾದ ಕವನ ಸಂಕಲನಗಳೂ ಶ್ರೇಷ್ಠ ಶ್ರೇಣಿಯವುಗಳಾಗಿವೆ. 'ಹಂಸ ದಮಯಂತಿ ಮತ್ತು ಇತರ ರೂಪಕಗಳು' ಗ್ರಂಥಕ್ಕೆ 1965ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1999ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಮೈಸೂರು ವಿ.ವಿಯು ಗೌರವ ಡಿ.ಲಿಟ್ ಪ್ರಶಸ್ತಿಯನ್ನು ನೀಡಿದೆ. ಇವರನ್ನು ಕುರಿತು ಕನ್ನಡ ಕವಿಗಳು ಬರೆದಿರುವ 'ಯದುಗಿರಿಯ ವೀಣೆ' ಎಂಬ ಪದ್ಯ ಸಂಕಲವನ್ನು ಇವರಿಗೆ ಸಮರ್ಪಿಸಲಾಗಿದೆ. ಇವರ ಮಹಾಕಾವ್ಯ 'ಶ್ರೀ ಹರಿಚರಿತ್ರೆ' 'ಪಂಪ ಪ್ರಶಸ್ತಿ' ದೊರೆತಿದೆ.

## 6. ಸಮಗಾರ ಭೀಮವ್ವ

– ಎಚ್.ಎಸ್. ಶಿವಪ್ರಕಾಶ್.

ಸಮಗಾರ ಭೀಮವ್ವ, ಎದೆ ಹಾಲ ನೀಡವ್ವ
ನೆಲದೆದೆಯ ಹಾಲು ಹೀರಿ ನೆತ್ತಿಗೇರಿದ ಬಿಸಿಲು
ಕರಗಲಾಗದೆ ಬೀಳ್ಬಿಡುವ ನವಲಗುಂದದ ಗುಡ್ಡ
ಅತ್ತ ಇತ್ತ ಸುಡುವೆಲರ ಸುಯ್ದು ಊರು....

ನಡುಹಗಲಿನಲ್ಲೇ ಗವ್ವಿರುಳು ಕಣ್ಣಿಗಿಳಿಯಿತು ತಾಯಿ
ನಿಂತನೆಲ ಒಮ್ಮೆಗೇ ಚಿಮ್ಮಿ
ಪುಟಿಯಿತು ಮೇಲೆ ಕೆಳಗೆ
ಎಡಗಡೆಗೆ ಬಲಗಡೆಗೆ
ಕಿಕ್ಕಿರಿದು, ತಾರೆ ಸಂಕುಳ ದಿಕ್ಕೆಟ್ಟ ಹಾಗಾಗಿ
ಸ್ವಪ್ನ ಬಂದೆರಗಿತ್ತು ; ಗಿರಿಗಟ್ಟಲೆ ಜಗದ ಮಧ್ಯ
ಕಾಯುವ ಗುಡ್ಡದ ಮೇಲೆ ಬೇಯುವ ಜ್ವರದ
ಮೈಯಾರಿ ಬಾಯೇಹಾರಿ
ಹೋಗುವ ಮುನ್ನ
ಸಮಗಾರ ಭೀಮವ್ವ ಎದೆ ಹಾಲ ನೀಡವ್ವ

ಅಜಾತನಾದವನಿಗೆ ಜಾತಿ ಯಾವುದೆ ತಾಯಿ ?

ಹೊಟ್ಟೆಯಲ್ಲಿಟ್ಟುಕೊಂಡದ್ದಕ್ಕೆ ತಾಯಿ ನೋವಿಗೆ ತೊತ್ತು ;
ತಂದೆ ಹಾಕುವ ತುತ್ತು ; ಸುತ್ತು ಮುತ್ತು ಊರು ಕೇರಿ
ದಿಕ್ಕು ದೇಶ ಹರಿದು
ಜ್ಯೋತಿಯನ್ನರಸುತ್ತ
ಬಿಸಿಲು ಮಳೆ ಗಾಳಿ ಮಾಗಿ ಮಂಜಿನಿಬ್ಬನಿ ತೊಟ್ಟ
ನಾಗಲಿಂಗನ ಮೈಯಿ ಇಂದು ಕೆಂಡ
ಒಡಲು ಹಸಿವಿನ ಕುಂಡ, ಹಾಲು ಸುರಿಯೇ ತಾಯಿ
ಸಮಗಾರ ಭೀಮವ್ವ ಎದೆ ಹಾಲ ನೀಡವ್ವ

ಏನಾಯ್ತು ನಿಟಿಲ ಭ್ರೂಮಧ್ಯ ಸ್ಫಟಿಕ ವರ್ಣದ ದೀಪ್ತಿ
ಮೇರುದಂಡದಿ ಹರಿದ ತಿಳಿಬೆಳಕಿನ ಹಾದಿ
ದಾಟಿ ಕದಳಿ ಶಿಖರ ಮೀರಿ ಹಾರಿ
ಅಂಬರದಲ್ಲಿ ತೇಲಾಡಿ ನನ್ನ ಆತ್ಮದ ಪಕ್ಷಿ
ಯಾಕೆ ನಾಟಿತೋ, ಯಾವ ಬಾಣವೋ ಏನೋ....
ನಿನ್ನ ಕಾಲಡಿ ಬಿದ್ದ ಹಸಿವು ಜ್ವರಗಳ ಮುದ್ದೆ
ಸೀದ ಕಿರುಮರಿ ಹಕ್ಕಿ
ಎದೆಗುಟುಕ ನೀಡವ್ವ ಸಮಗಾರ ಭೀಮವ್ವ
ಸಮಗಾರ ಭೀಮವ್ವ ಎದೆ ಹಾಲ ನೀಡವ್ವ

ಈ ರೀತಿ ಲಕ್ಷಯೋಜನದಾಚೆ ಕೋಟಿಯೋಚನೆಯಾಚೆ
ನೀ ಯಾಕೆ ಕುಳಿತಿರುವಿ ? ಬಂಜೆಗಂಬನಿ
ಮಣಿಯ ಯಾಕೆ ಪೋಣಿಸುತಿರುವಿ ?

ಮೌನದೆಳೆ ಎಳೆ ಎಳೆಯ ರಾಟಿಯ ಸುತ್ತಿ ಬಿಚ್ಚಿ
ಮತ್ತೆ ಸುತ್ತುತ್ತಿರುವಿ ? ನೆಲದ ಕಸವನು ಗುಡಿಸಿ ಕಸವ ಗೊಬ್ಬರ ಮಾಡಿ
ಬೀಜಬಿತ್ತುವ ಕೈಯೆ,
ದೇಸಾಯಿ ಪಾಟೀಲ ಕುಲಕರಣಿಗಳ ಕಾವು
ಕಡಿಯಲಾಗದ ಮರವೆ, ಕಡಿದರೂ ಹೊಲೆ
ಹೊಲೆಯೆಂಬ ಒಲೆಯಲ್ಲಿ ಸುಟ್ಟರೂ
ರೊಟ್ಟಿಯಾಗುವೆ ಬಾಯ್ಗೆ.
ಮೊಲೆಬರದ ಕೊಡಗೂಸ
ಮದುವೆಯಾಗದ ತಾಯೆ
ಮೊಲೆಹಾಲು ಬೇಡವ್ವ ಎದೆ ಹಾಲ ನೀಡವ್ವ
ಸಮಗಾರ ಭೀಮವ್ವ

ತಂದಿರುವೆ ನಿನಗೆಂದು
ಗದಗುಡುವ ಗದಗ ಬೀದಿಗಳ ಪ್ಲೇಗನ್ನು : ವಿಕ್ಟೋರಿಯಾ ರಾಣಿ ನಾಣ್ಯದ ಬೆಳಕು
ಕಮರಿಸಿದ ಸೂರ್ಯರನು ; ಹಸಿರು ಜಗ್ಗನೆ ಉರಿವ ಹೊಲದ ಆಳಗಳಲ್ಲಿ
ಬಸಿರ ಮಕ್ಕಳ ಹೂತು ಕೊಯ್ಲಾದ
ತೆನೆ ತೆನೆ ಜೋಳಗಂಬನಿಯನ್ನು ; ಬ್ರಾಹ್ಮಣರ ಕೇರಿಯಲಿ ಕಾಲರದ ಹೊಲೆಯ
ಕೂಸು ಮಕ್ಕಳನೊಯ್ದು ಸಿದಿಗಿ ಬೊಂಬುಗಳನ್ನು ; ಕಿತ್ತೂರ ವಂಶವನ್ನು ಕಿತ್ತೆಸೆದ ಕಡುಗೋಪಿ

ಹುಚ್ಚ ಮಡಿವಾಳನ ಕಣ್ಣುಗಳನು ;
ತೊಲೆಬಿದ್ದ ಯಮನ ಮನೆಯಲ್ಲಿ

ಉಳುಕೊಳ್ಳದೆ ಮಡದಿಯ
ಕಳುಹಿಕೊಟ್ಟಿರುವ ಶಿಶುವಿನ ಹಾಳು
ಶರೀಫನ ಕರುಳ ಹುಣ್ಣುಗಳನು.

ಯಾವ ಗುಡಿಸಲಿನಲ್ಲಿ ಯಾವ ಆಕಳು ಬರಡು
ಯಾರ ಕಾಲಿಗೆ ಕುತ್ತು
ಕ್ಷಾಮಲಕ್ಷ್ಮಿಯ ಸಿಟ್ಟು ಯಾರ ಹೊಲದಲಿ ಬಿತ್ತು
ಊರಸೀರೆಗೆ ಹಿಗ್ಗಿ ಹೀರೆಯಾಗುವ ಅಗಸ
ಯಾರ ಚಿನ್ನಕೋ ಕೊಬ್ಬಿದ ಪತ್ತಾರಣ್ಣ ;
ಕೂಸುಗಳ ಕದಪು ಎಷ್ಟೊಂದು ಕಂಪು
ಯಾವ ಹೂವಿನ ಕಂಪು...
ಕೂಳುಂಡು ಬದುಕಲಾರದೆ ಹೇಲುಂಡ ಬದುಕೇನೆಂಬ
ಈ ಚಿಂತೆಗಳ ಹುಲುಗೂರ ಸಂತ
ಹರಿಯುವ ಮೊದಲು
ಸಮಗಾರ ಭೀಮವ್ವ ಎದೆ ಹಾಲ ನೀಡವ್ವ

ಎಳೆಗೂಸು ನೀನು ಮುದಿಗಣ್ಣೀರನೊರೆಸವ್ವ
ಕೊಡಗೂಸು ಗೆಳತಿ ಕೈಹಿಡಿದು ನಡೆಸವ್ವ
ತಾರವ್ವ ಮಳೆಯ ಎಳೆಎಳೆಯ ಎದೆಹಾಲ
ಸಿಂಪಡಿಸು ಗುಡ್ಡಕ್ಕೆ ನವಲಗುಂದಕ್ಕೆ
ಗದಗಕ್ಕೆ, ಗಿರಣಿಗಳು ಕಿರುಗುಡುವ ಹುಬ್ಬಳ್ಳಿ ನಗರಕ್ಕೆ,
ತಾರೆಮಂಡಲ ಬುಗುರಿ ಕೆದರಿರುವ ವ್ಯೋಮಕ್ಕೆ

ತಾರವ್ವ ಚಂದ್ರವ್ವ ಮುಗಿಲವ್ವೂ, ಭುಗಿ ಭುಗಿಲಪ್ಪ

ಎದೆಯಲ್ಲಿ ಕರುಳಲ್ಲಿ ನೆಲದಲ್ಲಿ ಏಸು ಕಾವಿತ್ತವ್ವ ಮಳೆಬಿದ್ದ ನೆಲದಲ್ಲಿ ? ಕಾವು ತಡೆಯದೆ ಹಾವೇಸು

ಹುತ್ತವ ಬಿಟ್ಟು

ನೆಲದುದ್ದ ನೆಲದಗಲ ಹೊರಳಿದುವ್ವವ್ವಾ...

ಸಮಗಾರ ಭೀಮವ್ವ ಎದೆ ಹಾಲ...

**********

## ಕವಿ ಪರಿಚಯ

### ಎಚ್. ಎಸ್. ಶಿವಪ್ರಕಾಶ್

ಇವರು ಬೆಂಗಳೂರಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ವೃತ್ತಿ ಸೇವೆ ಸಲ್ಲಿಸಿರುವರು. ಇವರ ಮೊದಲ ಕವನ ಸಂಕಲನ 'ಮಿಲರೇಪ' ಇವರ 'ಮಹಾಚೈತ್ರ' ನಾಟಕಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದರೆ 'ಸುಲ್ತಾನ ಟಿಪ್ಪು' ನಾಟಕಕ್ಕೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ಮಳೆ ಬಿದ್ದ ನೆಲದಲ್ಲಿ' ಕವನ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ನಾಟಕ : ಮಹಾಚೈತ್ರ, ಸುಲ್ತಾನ ಟಿಪ್ಪೂ, ಷೇಕ್ಸಪಿಯರನ ಸ್ವಪ್ನನೌಕೆ, ಮಕರ ಚಂದ್ರ, ಮದುರೆ ಕಾಂಡ.

ಕಾವ್ಯ : ನುರಾಜಲ, ನವಿಲುನಗರ ಮಳೆಬಿದ್ದ ನೆಲದಲ್ಲಿ, ಮಿಲರೇಪ, ಇತ್ಯಾದಿಗಳು.

'ಶೇಕ್ಸ್‌ಪಿಯರ್ ದೃಶ್ಯಗಳು' 'ಒಲೆ ಸೋಯಂಕಾನ ರೋಡು' ಇವರೆಡೂ ಇಂಗ್ಲೀಷಿನಿಂದ ಅನುವಾದಿತವಾಗಿರುವ ಕೃತಿಗಳು. ಹಾಗೆಯೇ 'ಮರು ರೂಪಗಳು' ವಿಶ್ವಪ್ರಸಿದ್ಧ ಕವಿಗಳ ಕವಿತೆಗಳ ಅನುವಾದ ಸಂಗ್ರಹ ಕೃತಿಯಾಗಿದೆ.

# 7. ಬೆಂಗಳೂರಿನ ಹಾಡು

– ಡಾ. ಸಿದ್ಧಲಿಂಗಯ್ಯ

ಬೆಂಗಳೂರೇ ಎಂದು ಬಾಯಾರೆ ಕರೆಯೋರೆ
ಮೈತುಂಬ ವಡವೆಗಳು ಇರಬಹುದು ನನಗೆ
ನನ್ನ ಮೇಲಿರಬಹುದು ಎಲ್ಲ ಚೆಲುವರ ಕಣ್ಣು
ರಥ ಕುದುರೆ ಕಾಲಾಳು ಆನೆಗಳು ಸುತ್ತ

ನಮ್ಮ ಮದುವೆಗೆ ಮೊದಲು ಗಂಡ ಕೆಂಪೇಗೌಡ
ಹಾರುವರ ಹಟ್ಟಿಯಲ್ಲಿ ಜೀತಕಿದ್ದ
ಚಿಂದಿ ದುಬಟಿಯ ಚೆಲುವ ತಂಗಳಿನ ಸರದಾರ
ದನದ ಕೊಟ್ಟಿಗೆಯಲ್ಲಿ ಮಲಗುತ್ತಿದ್ದ

ಏಳು ಲೋಕದ ನೋವು ಮೂಡುವಾಗದ್ದವನು
ದುಡಿಯುತ್ತಿದ್ದನು ಹೊತ್ತು ಇಳಿವತನಕ
ಹಿಪ್ಪನೇರಳೆ ಕಡ್ಡಿ ಹಣ್ಣು ತರಕಾರಿಗಳು
ಮಲ್ಲಿಗೆಯು ಕಿಕ್ಕಿರಿದು ಬೆಳೆವತನಕ

ಅಪ್ಪಣೆಯ ಕೊಟ್ಟ ಧಣಿ ಮೇಲುತೋಟವನೆಲ್ಲ
ಆಗೆದುಬಿಡು ನಾ ಬರುವ ವೇಳೆಯೊಳಗೆ

ಯಾವ ಕೀಲಿನ ನೋವೊ ಎಂಥ ಮಾಯದ ಮರೆವೊ
ನನಗಂಡ ತೋಟದಲಿ ಮಲಗಿಬಿಟ್ಟ

ಗಿಡಗಿಡವು ಹಾವಾಗಿ ನಾಗಲೋಕವು ಹುಟ್ಟಿ
ಬೇಲಿಗಳ ಮೇಲೆಲ್ಲ ಮಾಣಿಕ್ಯ ಚೆಲ್ಲಿ
ಏಳೆಡೆಯ ನಾಗರವು ನಿಂತು ನಾಂಟೇವಾಡಿ
ಮಲಗಿದ್ದ ಪತಿರಾಯ ಬೆಳಗುತ್ತಿದ್ದ

ಹತ್ತು ದಿಕ್ಕುಗಳಲ್ಲಿ ಮುತ್ತು ರತ್ನದ ದೀಪ
ಕಂಡ ಹಾರುವ ಹರಿದ ಬೆವರ ತೊರೆಯಾಗಿ
ಎಂಥ ಪುಣ್ಯವೊ ನಿನದು ಯಾವ ತಾಯಿಯ ಮಗನೊ
ನಾಗಪ್ಪ ಬಂದವನೆ ಕೆಂಪಯ್ಯ ಏಳೊ

ರಾಜ್ಯವಾಳುವ ಯೋಗ ನಿನಗುಂಟು ಕೆಂಪಣ್ಣ
ಎದ್ದು ನಿಲ್ಲೋ ರಾಜ, ಕಟ್ಟಯ್ಯ ದಂಡು
ನೀನರಸನಾದಾಗ ನನ್ನ ಮಂತ್ರಿಯ ಮಾಡೊ
ಮುತ್ತಿಗೆಯ ಹಾಕಯ್ಯ ಕೊಳ್ಳಯ್ಯ ಕತ್ತಿ

ಸತ್ತ ಮಕ್ಕಳು ಎಷ್ಟು ಆದ ಮುಂಡೆಯರಷ್ಟು
ಎಷ್ಟಯ್ಯ ಕನಸೊಡೆದು ಹರಿದ ರಕ್ತ
ಮುರಿದ ಕೈ ಕಾಲುಗಳು ಮುರಿದ ತೊಲೆ ಕಂಬಗಳು
ಒಡೆದ ಹೊಂಗಳಸಗಳ ಲೆಕ್ಕವೆಷ್ಟು.

ನನ್ನ ಗಂಡನ ಜೊತೆಯ ಜೀತಗಾರರ ಕಥೆಯು
ಯಾವ ಹಾಡಿನ ಒಳಗೂ ಮೂಡಲಿಲ್ಲ
ರಾಜ್ಯದಾಹದ ಬೆಂಕಿ ಊರೂರ ಸುಟ್ಟಾಗ
ಬೂದಿಯಾದರೂ ಅವರು ತಿಳಿಯಲಿಲ್ಲ

ನನ್ನ ಸೀರೆಯ ಸೆರಗು ಮರೆಮಾಡಿಕೊಂಡಿರುವ
ಜೋಪಡಿಯ ಲೋಕವನು ತೋರಲೇನು
ಹೊಟ್ಟೆಯೊಳಗಿನ ಬೆಂಕಿಯುಂಡೆಯೆಲ್ಲವನೆತ್ತಿ
ಮರೆವ ಜನಗಳ ಮೇಲೆ ಚೆಲ್ಲಲೇನು

********

## ಕವಿ ಪರಿಚಯ

### ಡಾ.ಸಿದ್ಧಲಿಂಗಯ್ಯ

ದಲಿತ ಕವಿ ಎಂದೇ ಪರಿಚಿತರಾಗಿರುವ ಡಾ.ಸಿದ್ಧಲಿಂಗಯ್ಯ 1954 ಫೆಬ್ರುವರಿ 3ರಂದು ಬೆಂಗಳೂರಿನ ಮಾಗಡಿಯಲ್ಲಿ ಜನಿಸಿದರು. 'ಗ್ರಾಮದೇವತೆಗಳು' ಎಂಬ ಪ್ರೌಢ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದಿರುವರು. ಬೆಂಗಳೂರಿನ ಇವರು ವಿಧಾನ ಪರಿಷತ್ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ. ಕನ್ನಡ ಕಾವ್ಯಕ್ಷೇತ್ರದಲ್ಲಿ ಸಿದ್ಧಲಿಂಗಯ್ಯ ಅವರ ಸಾಧನೆ ಅಪಾರವಾದುದು. ಇವರ ಕೃತಿಗಳು: 'ಹೊಲೆಮಾದಿಗರ ಹಾಡು' 1975ರಲ್ಲಿ ಪ್ರಕಟಗೊಂಡ ಇದರಲ್ಲಿ 20 ಹಾಡುಗಳಿವೆ. ಇದರಲ್ಲಿ ದಲಿತರಿಗೆ ಸ್ವಾಭಿಮಾನದ ಕಿಚ್ಚನ್ನು ಮೂಡಿಸುವ ಕೆಲಸ ನಡೆಯಿತು. 'ಸಾವಿರಾರು ನದಿಗಳು' 'ಕಪ್ಪು ಕಾಡಿನ ಹಾಡು' 'ಅಲ್ಲೆ ಕುಂತವರು' ಇವರ ಇತರ ಕವನ ಸಂಕಲನಗಳು 'ಊರು – ಕೇರಿ' ಕೃತಿ ಇವರ ಆತ್ಮಕಥನವಾಗಿದೆ

# 8. ಅವಳ ಚರಿತ್ರೆ

**– ಕೆ.ಷರೀಫಾ**

ಪ್ರೀತಿಯಿಂದ ಕಟ್ಟಿದ
ಅವಳ ನಾಗರೀಕತೆಗಳ ಮೇಲೆ
ಕಾಣುತ್ತಿದೆ ನಿಮ್ಮದೇ ಕ್ರೂರ ಮುದ್ರೆ
ಅವಳೇ ಕಟ್ಟಿದ ಸಂಸ್ಕೃತಿಗಳ ಮೇಲೆ
ಇರಲಿ ಬಿಡಿ ಅವಳದೇ ಮುದ್ರೆ
ನಿಲ್ಲಿಸಲಿ ಬಿಡಿ ಅವಳದೇ ಸೌಧ
ತೋರಿಸಲಿ ಬಿಡಿ ಲೋಕಕ್ಕೆ
ಹೊಸ ಸೂರ್ಯೋದಯ
ಕೇಳಲಿ ಬಿಡಿ ಹೊಸ ಸುಪ್ರಭಾತ
ರಚಿಸಲಿ ಬಿಡಿ ಅವಳದೇ ಇತಿಹಾಸ
ಅವನ ಚರಿತ್ರೆಯಲ್ಲಿ ಅವಳು
ಮೂಡಿ ಬಂದದ್ದು ಸಾಕು
ಬೇಕಲ್ಲವೇ ಅವಳದೇ ಇತಿಹಾಸ?
ಯುಗಯುಗಗಳಿಂದ ಸಂಗಾತಿ
ನಡೆದೇ ಬಂದಳು ನೋಡಿ
ನಿಮ್ಮ ಜೊತೆಗಾತಿ
ಅವಳಿಲ್ಲದ ನಿಮ್ಮ ಚರಿತ್ರೆ
ಪೂರ್ಣಗೊಳ್ಳುವುದಾದರೂ ಎಂತು?

ಅದಕ್ಕೆ........................
ನಿಮ್ಮದೇ ಚರಿತ್ರೆಯಲ್ಲಿ
ಅವಳು ಮೂಡಿದ್ದು ಸಾಕು
ಹೊಸ ಚರಿತ್ರೆ ರಚಿಸುವ ಕೈ,
ಬುದ್ಧಿ, ಭಾವಗಳೆಲ್ಲವೂ
ಅವಳವೇ ಆಗಿರಲಿ ಸಾಕು

************

## ಕವಿ ಪರಿಚಯ

### ಲೇಖಕಿ ಕೆ.ಷರೀಫಾ

ಇವರು 1957 ಮೇ 05ರಂದು ಗುಲಬರ್ಗಾದಲ್ಲಿ ಜನಿಸಿದರು. ತಂದೆ ಬಾಬುಮಿಯಾ, ತಾಯಿ ಪುತಲೀಬೇಗಂ. ಬಿಡುಗಡೆಯ ಕವಿತೆಗಳು, ನೂರೇನ್‌ಳ ಅಂತರಂಗ, ಪಾಂಚಾಲಿ, ಮುಮ್ರಾಜಳ ಮಹಲು, ಬುರ್ಖಾ ಪ್ಯಾರಡೈಸ್, ಸಂವೇದನೆ (ವಿಮರ್ಶೆ), ಮಹಿಳಾ ಮಾರ್ಗ (ಸಹ ಸಂಪಾದನೆ), ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಮಹಿಳಾ ಸಂವೇದನೆ (ಸಂಶೋಧನೆ), ಹೊಸ ಶತಮಾನದ ಕಾವ್ಯ (ಸಂಪಾದನೆ) ಅವರ ಪ್ರಕಟಿತ ಕೃತಿಗಳು. ಅವರಿಗೆ ಮಹಿಳೆ ಮತ್ತು ಸಮಾಜ ಪ್ರಶಸ್ತಿ, ವನಿತಾ ಸಾಹಿತ್ಯ ಶ್ರೀ ಪ್ರಶಸ್ತಿ, ಅತ್ತಿಮಬ್ಬೆ ಸಾಹಿತ್ಯ ಶ್ರೀ ಪ್ರಶಸ್ತಿ, 2019ನೇ ಸಾಲಿನ ಕ.ಸಾ.ಪದ ಶ್ರೀನಿವಾಸ ಸ್ಮರಣಾರ್ಥ ಪಿ.ಕೆ. ನಾರಾಯಣ ದತ್ತಿ ಪ್ರಶಸ್ತಿ ದೊರೆತಿದೆ.

# ಸಣ್ಣ ಕಥೆಗಳು

## 1. ದೃಷ್ಟಿಲಾಭ

–ಪ್ರೊ.ಎಂ.ವಿ.ಸೀತಾರಮಯ್ಯ

"ತಾಯಿ, ನಿಮಗೇನಾಗಬೇಕು?"

ನಿಮ್ಮ ಮಹಿಮೆಯನ್ನು ಕೇಳಿ ನಿಮ್ಮ ಬಳಿಗೆ ಬೇಡಲು ಬಂದಿದ್ದೇನೆ. ಅನುಗ್ರಹ ಮಾಡಬೇಕು" ಎಂದು ಭಯ ಭಕ್ತಿಗಳಿಂದ ದೀನವದನಳಾಗಿ ನಿಂತಿದ್ದಾಕೆ ಮಂಡಿಯೂರಿ ತಲೆಬಾಗಿ, ಹುಲಿಯ ಚರ್ಮದ ಮೇಲೆ ಪದ್ಮಾಸನಾಸೀನರಾಗಿ ಮಂಡಿಸಿದ್ದ ಸಾಧುವಿಗೆ ನಮಸ್ಕಾರ ಮಾಡಿದಳು.

"ನಾನು ಕೇಳಿದ್ದೂ ಅದೇ ತಾಯಿ, ನಿಮಗೇನಾಗಬೇಕು?"

ನಿಂತಿದ್ದಾಕೆ ಮೌನವಾಗಿದ್ದಳು.

ಸಾಧು ಅವಳ ಮುಖವನ್ನು ದಿಟ್ಟಿಸಿ ನೋಡಿದನು. ಸೌಮ್ಯವಾದ ಆ ಮುಖದಲ್ಲಿ ಅಷ್ಟೊತ್ತಿದ್ದ ಭಕ್ತಿಭಾವರಂಜಿತವಾದ ಉದ್ವೇಗವು ಆತನ ಹೃದಯವನ್ನು ಕರಗಿಸಿತು; ಮರುಕದ ಮುಗುಳುನಗೆಯೊಂದು ಜಟಾಭರ ಬಂಧುರವಾದ ಆತನ ದಿವ್ಯ ಮುಖಮಂಡಲವನ್ನು ಬೆಳಗಿತು.

"ಅಮ್ಮಾ, ನಿಮ್ಮ ಮನಸ್ಸಿಲ್ಲಿರುವುದನ್ನು ನಾನು ಊಹಿಸಲಾರೆ. ನನಗಿನ್ನೂ ಎ ಅಂತಹ ದಿವ್ಯಶಕ್ತಿಯು ಲಭಿಸಿಲ್ಲ. ನಾನೊಬ್ಬ ಬಡ ಸಾಧು; ಸಾಧಕ. ಆ ಜನೋಪಕಾರಕ್ಕಿಂತ ಹೆಚ್ಚಿನ ತಪಸ್ಸಿಲ್ಲ ಎಂದು ನನ್ನ ಗುರುದೇವನು ನನಗೆ ತಿಳಿಯಹೇಳಿ, ಕೆಲವು ಮಂತ್ರಗಳನ್ನೂ ಉಪಾಸನಾ ಕ್ರಮಗಳನ್ನೂ ಔಷಧದ ಮೂಲಿಕೆಗಳನ್ನೂ ಅನುಗ್ರಹ ಮಾಡಿದ್ದಾರೆ. ಜನೋಪಕಾರಕ್ಕಾಗಿ ಊರೂರು ಅಲೆಯುವುದೇ ನನ್ನ ತೀರ್ಥಯಾತ್ರೆ; ಗುರುವಿನ ಅನುಗ್ರಹದ ಬಲದಿಂದ ನನ್ನ ಶಕ್ತಿಯಿದ್ದಮಟ್ಟಿಗೆ ಬೇಡಿದವರ ಇಷ್ಟಾರ್ಥಗಳು ಸಿದ್ಧಿಯಾಗಲು ಸಹಾಯ

ಮಾಡುವುದೇ ನನ್ನ ದೇವತಾ ಪೂಜೆ, ತಪಸ್ಸು. ಕೆಲವು ಊರುಗಳಲ್ಲಿ, ಹಳ್ಳಿಗಳಲ್ಲಿ, ತಿಳಿಯದ ಜನ ನನ್ನಲ್ಲಿ ನಂಬಿಕೆಯಿಟ್ಟು, ನಾನು ಹೇಳಿದ ಮೇರೆಗೆ ನಡೆದುಕೊಂಡು ಕೃತಾರ್ಥರಾಗಿದ್ದಾರೆ. ಈ ಊರು ದೊಡ್ಡದು, ವಿದ್ಯಾವಂತರಿಂದ ತುಂಬಿದೆ. ಭೈರಾಗಿಯ ಬೂಟಾಟಿಕೆಗೆ ಬಲಿಯಾಗಬೇಡಿ ಎಂದು ಕೆಲವರು ಕೂಗತೊಡಗಿದ್ದು ನನ್ನ ಕಿವಿಗೂ ಬಿದ್ದು, ಊರಾಚೆಗೆ ಬಂದು ಈ ಕಲ್ಲಿನ ಮಂಟಪದಲ್ಲಿ ಇದ್ದೇನೆ ತಾಯಿ. ನಾನೇನು ಮಹಾತ್ಮನಲ್ಲ. ಆದರೂ ನಿಮ್ಮ ಮನಸ್ಸಿನಲ್ಲಿ ಇರುವುದನ್ನು ತಿಳಿಸಿದರೆ, ನನ್ನ ಕೈಲಾದ ಸಹಾಯ ಮಾಡುತ್ತೇನೆ".

ತಲೆಬಾಗಿ ನಿಂತಿದ್ದಾಕೆ ಮೌನವಾಗಿದ್ದಳು. ಬೇಡಲು ಅದೇನೋ ಅಂಜಿಕೆ; ಬೇಡದಿರಲೂ ಆಗದು–ಏಕೆಂದರೆ ಬೇಡುವುದಕ್ಕಾಗಿಯೇ ಸಂಜೆಯ ಹೊತ್ತಿನಲ್ಲಿ ಒಬ್ಬೊಂಟಿಗಳಾಗಿ ಈ ಸಾಧುವಿದ್ದ ತಾವನ್ನು ಹುಡುಕಿಕೊಂಡು ಬಂದಿದ್ದಳು.

"ನಿಮಗೆ ಮಕ್ಕಳಿಲ್ಲವೆ, ತಾಯಿ?"

"ಇಲ್ಲ" ಎನ್ನುವಂತೆ ತಲೆಯಲ್ಲಾಡಿಸಿದಳಾಕೆ.

" ನಿಮ್ಮ ಬಯಕೆ ಅದೇ ಎಂದು ಕಾಣುತ್ತದೆ, ಅಲ್ಲವೆ?"

"ಅಲ್ಲ" ಎನ್ನುವಂತೆ ತಲೆಯಲ್ಲಾಡಿಸಿ, ತುಸು ಧೈರ್ಯವನ್ನು ತಂದುಕೊಂಡು, 'ನನ್ನ... ಅವರಿಗೆ ಕುರುಡು..." ಎಂದು ಹೇಳಿದಳು.

"ಹುಟ್ಟುಗುರುಡೆ?"

"ಹುಟ್ಟುಗುರುಡಂತೆ"

"ಏನಾದರೂ ವೈದ್ಯಚಿಕಿತ್ಸೆ ಮಾಡಿಸಿತ್ತೆ?"

"ಹುಡುಗರಾಗಿದ್ದಾಗ ಬೆಂಗಳೂರಿನ ಕಣ್ಣಾಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಬಿಟ್ಟಿದ್ದರಂತೆ. ಕೆಲವು ದಿನ ಔಷಧ ಹಾಕಿ, 'ಆಪರೇಷನ್ ಮಾಡಿ ನೋಡಬೇಕು. ಅದರಿಂದ ಕೂಡ ಕಣ್ಣು ಬರುತ್ತದೆ ಎಂದು ಖಾತರಿ ಕೊಡುವುದಕ್ಕೆ ಆಗುವುದಿಲ್ಲ' ಎಂದು ದೊಡ್ಡ ಡಾಕ್ಟರೇ ಹೇಳಿದರಂತೆ. ಅವರ ತಂದೆ ವ್ಯರ್ಥವಾಗಿ ಆಪರೇಷನ್ ಮಾಡಿಸಲು ಒಪ್ಪಲಿಲ್ಲವಂತೆ".

"ಅವರ ತಂದೆ ತಾಯಿ ಇದ್ದಾರೆಯೋ?"

"ಇಲ್ಲ, ತೀರಿಕೊಂಡು ಐದಾರು ವರ್ಷವಾಯಿತು".

"ಹಾಗಾದರೆ, ಮನೆಯಲ್ಲಿ ನೀವು, ನಿಮ್ಮ ಯಜಮಾನರು ಇಬ್ಬರೇ? ಬಹಳ ಕಷ್ಟವಾಗಿರಬೇಕು".

"ಇಲ್ಲ, ಅವರ ಶಿಷ್ಯರೊಬ್ಬರಿದ್ದಾರೆ".

"ಶಿಷ್ಯರೇ?"

"ಹೌದು. ಅವರ ಬಳಿ ಸಂಗೀತ ಕಲಿಯುತ್ತಿದ್ದಾರೆ".

"ಓಹೋ ! ನಿಮ್ಮ ಯಜಮಾನರಿಗೆ ಸಂಗೀತ ಬರುತ್ತದೆಯೋ ! ಅದರಿಂದಲೇ ಜೀವನೋಪಾಯ ಎಂದು ಕಾಣುತ್ತದೆ ಹಾಗಾದರೆ !"

"ಹೌದು, ಎಷ್ಟೋ ಜನ ಕೈ ತುಂಬ ಹಣ ಕೊಟ್ಟು ಸಂಗೀತ ಪಾಠ ಹೇಳಿಸಿಕೊಂಡು ಹೋಗುತ್ತಿದ್ದಾರೆ".

"ಹಾಗಾದರೆ ಹೊಟ್ಟೆಗೆ ಬಟ್ಟೆಗೆ ನೆಮ್ಮದಿಯಾಗಿದ್ದೀರಿ ತಾನೆ?"

"ತಮ್ಮ ಆಶೀರ್ವಾದದಿಂದ ಅನ್ನ ಬಟ್ಟೆಗೆ ಕೊರತೆಯಿಲ್ಲ?"

"ದಯಾಮಯನಾದ ದೇವರು ನಿಮಗೆ ಯಾವುದೂ ಕೊರತೆ ಮಾಡಿಲ್ಲವಲ್ಲ ತಾಯಿ ಸುಮ್ಮನೆ ಯಾಕೆ ಬವಣೆಪಡುತ್ತೀರಿ, ತಾಯಿ?"

'ದೇವರು ಯಾವುದೂ ಕೊರತೆ ಮಾಡಿಲ್ಲ !" ಈ ಮಾತು ಕೇಳಿ ಆ ಹೆಣ್ಣು ಜೀವಕ್ಕೆ ಆಶ್ಚರ್ಯವಾಯಿತು; ಅಂತೆಯೇ ದುಃಖವೂ ಒತ್ತರಿಸಿ ಬಂದಿತು; ಕಂಬನಿಯೆರಡು ಆಕೆಯ ಕೆನ್ನೆಯನ್ನು ತೋಯಿಸಿದುದು ಸಾಧುವಿನ ಗಮನಕ್ಕೆ ಬಂದಿತು.

"ಹಾಗಾದರೆ ಕುರುಡನ್ನು ವಾಸಿಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ?" ತನ್ನ ದುಃಖಕ್ಕೆ ಮಾತುಕೊಟ್ಟಳಾಕೆ.

"ವಾಸಿಯಾಗುತ್ತದೆಯೋ ಇಲ್ಲವೋ-ಅದು ದೈವೇಚ್ಛೆ, ಅದಕ್ಕಾಗಿ ಅಪ ಪ್ರಯತ್ನಪಡಬೇಕಾದದ್ದು ಅವಶ್ಯಕವಿಲ್ಲ ಎಂದು ನನ್ನ ಮಂದಬುದ್ಧಿಗೆ ತೋರುತ್ತದೆ".

ಈ ನಿರಾಶೆಯ ಮಾತುಗಳನ್ನು ಕೇಳುವುದಕ್ಕಾಗಿಯೇ, ತಾನು ಊರಾಚೆಗೆ ವಿ ಇಷ್ಟು ದೂರ ಧೈರ್ಯಮಾಡಿ ನಡೆದು ಬಂದದ್ದು? ಈತ ಬೂಟಾಟಿಕೆಯ ಬೈರಾಗಿ ಎಂದು ಜನ ಆಡಿಕೊಳ್ಳುತ್ತಿದ್ದುದು ನಿಜವಿರಬೇಕು. ಹಾಗಾದರೆ ಇವನು ತನ್ನನ್ನು, ಒಂಟಿಯಾದ ಹೆಂಗಸನ್ನು, ಈ ರೀತಿ ಪರಿಪರಿಯಲ್ಲಿ ಈ ಪ್ರಶ್ನಿಸುತ್ತಿರುವುದರ ಉದ್ದಿಶ್ಯವಾದರೂ ಏನು? ಏಕ ಕಾಲದಲ್ಲಿ ದುಃಖ ಸಂದೇಹ, ಭಯಗಳು ಅವಳ ಮನಸ್ಸನ್ನು ಮುತ್ತಿ ಕಾಡ ತೊಡಗಿದವು. ಬೈರಾಗಿಯ ಮನಸ್ಸಿನಲ್ಲಿ ದುರಭಿಸಂಧಿಯೇನಾದರೂ ಇದ್ದರೆ ಅದು ದುಷ್ಪರಿಣಾಮಕಾರಿಯಾಗುವ ಮೊದಲೇ ಅಲ್ಲಿಂದ ಕಾಲು ಕೀಳುವುದು ಉಚಿತವೆನ್ನಿಸಿತು ಅವಳಿಗೆ.

"ಹಾಗಾದರೆ ನಾನಿನ್ನು ಹೋಗಿ ಬರಲೆ?"

"ನನ್ನ ಮಾತಿನಿಂದ ನಿಮಗೆ ನಿರಾಶೆಯಾಯಿತೆಂದು ಕಾಣುತ್ತದೆ, ನಿರಾಶೆಗೊಳಿಸಬೇಕೆಂದು ಹಾಗೆ ಹೇಳಲಿಲ್ಲ. ದೈವಸಂಕಲ್ಪದ ಮಹತ್ವವನ್ನು ನಿಮಗೆ ಹೇಳಿದೆ, ಅಷ್ಟೆ. ನನ್ನ ಮಾತಿನ ಅಭಿಪ್ರಾಯ ನಿಮಗೆ ಸ್ಪಷ್ಟವಾಗಿಲ್ಲ ನೀವು ಇಷ್ಟಪಟ್ಟರೆ ಸ್ಪಷ್ಟಪಡಿಸುತ್ತೇನೆ".

ನಿರಾಶೆಯಲ್ಲಿ ಮತ್ತೆ ಆಶೆಯ ಕಿರಣ ಸುಳಿದಂತಾಯಿತು ಆಕೆಗೆ. ಮತ್ತೆ ಧೈರ್ಯ ತಂದುಕೊಂಡು ಹೇಳಿದಳು;

"ತಾವು ಏನು ಹೇಳಿದರೂ ಅದೇ ಪರಮಾನುಗ್ರಹ".

"ನಿಮ್ಮ ಯಜಮಾನರಿಗೆ ದೇವರು ಕುರುಡನ್ನು ಕೊಟ್ಟ; ಜೊತೆಗೆ ದಿವ್ಯವಾದ ಸಂಗೀತ ವಿದ್ಯೆಯ ವರವನ್ನೂ ಕರುಣಿಸಿದ. ಅದಕ್ಕಿಂತ ಹೆಚ್ಚಾಗಿ ನಿಮ್ಮಂಥ ಪತಿವ್ರತೆಯಾದ ಸ್ತ್ರೀಯನ್ನು ಕೈಹಿಡಿಯುವ ಸೌಭಾಗ್ಯವನ್ನೂ ಅನುಗ್ರಹಿಸಿದ. ಅವರು ಕುರುಡಾಗಿ ಹುಟ್ಟಿರದಿದ್ದರೆ, ಬಹುಶಃ ಸರಸ್ವತೀ ದೇವಿ ಅವರಿಗೆ ಒಲಿದು ಬರುತ್ತಿರಲಿಲ್ಲ. ಅಂಥ ದಿವ್ಯ ಚೇತನವನ್ನು ಕೈಹಿಡಿಯುವ ಭಾಗ್ಯವೂ ನಿಮ್ಮ ಪಾಲಿಗಿರುತ್ತಿರಲಿಲ್ಲ. ಇದೇ ನಾನು ದೈವಸಂಕಲ್ಪ ಎನ್ನುವುದು. ಯಾರೇ ಆಗಲಿ, ನನ್ನ ಬಳಿ ಬಂದು ತಮ್ಮ ಕಷ್ಟನಿಷ್ಟುರಗಳನ್ನು ಹೇಳಿಕೊಂಡರೆ, ಅವರ ಪೂರ್ವೋತ್ತರಗಳನ್ನೆಲ್ಲಾ ವಿಚಾರಮಾಡಿ, ದೈವಸಂಕಲ್ಪಕ್ಕೆ ವಿರುದ್ಧವಾಗಲೆಂದು ನನಗೆ ತೋರಿದರೆ, ನನ್ನ ಕೈಲಾದ

ಸಹಾಯ ಮಾಡುವುದು ನನ್ನ ಪದ್ಧತಿ. ಪ್ರಕೃತ ನಿಮ್ಮ ವಿಷಯದಲ್ಲಿ, ನಾನು ನಿಮಗೆ ಮಾಡಬಹುದಾದ ಸಹಯ ದೈವಸಂಕಲ್ಪಕ್ಕೆ ವಿರುದ್ಧವಾಗಬಹುದೆಂದು ನನಗೆ ತೋರುತ್ತದೆ".

"ಅಂದರೆ, ಅವರಿಗೆ ಕಣ್ಣು ಬರುವುದರಿಂದ ಕೆಡುಕು ಎಂದು ನಿಮ್ಮ ಅಭಿಪ್ರಾಯವೇ? ಅದು ಹೇಗೆ?

"ಅದು ಹೇಗೆ ಎಂದು ವಿವರಿಸಲಾರೆ. ನನ್ನ ಬಡ ಮೂಲಿಕೆಯಿಂದ ಅವರಿಗೆ ಏನೂ ಸಹಾಯ ಮಾಡಲಾಗದು, ನಿಮ್ಮ ಪಾತಿವ್ರತ್ಯದಿಂದ ಏನಾದರೂ ಆದರೆ ಆದೀತು. ಅದರ ಬಲದಿಂದಲೇ ಅವರಿಗೆ – ಕಾಲಾನುಕಾಲದಲ್ಲಿ ಕಣ್ಣು ಬಂದರೂ ಬಂದೀತು. ಏಕೆ ಆತುರಪಡುತ್ತೀರಿ?"

"ಅಯ್ಯೋ, ಅವರ ಮುಪ್ಪಿನಲ್ಲಿ ಕಣ್ಣು ಬಂದರೆ ಏನು, ಬಿಟ್ಟರೆ ಏನು? 2 ಈಗಲಾದರೂ ಬಂದರೆ ಎಷ್ಟೋ ಸಂತೋಷಪಟ್ಟಾರು, ಸುಖಪಟ್ಟಾರು".

"ಹಾಗಾದರೆ ಈಗ ಸುಖವಾಗಿ, ಸಂತೋಷವಾಗಿ ಇಲ್ಲವೆ?"

"ಇದ್ದಾರೆ. ಆದರೂ ಕುರುಡಲ್ಲಾ ಎಂದು ಒಮ್ಮೊಮ್ಮೆ ಕೊರಗುತ್ತಾರೆ".

"ಅದು ಸಹಜ, ಈಗ ನಿಮ್ಮ ನಿರ್ಧಾರವೇನು? ನನ್ನ ಸಹಾಯ ಅಗತ್ಯವಾಗಿ ಬೇಕೋ?"

"ತಮ್ಮಿಂದ ಅಷ್ಟು ಉಪಕಾರವಾದರೆ ತಮ್ಮನ್ನು ತನ್ನ ಭಾಗದ ದೇವರೆಂದು ತಿಳಿಯುತ್ತೇನೆ".

"ಹಾಗಲ್ಲ ತಾಯಿ ನಿಮ್ಮ ಪತಿಯೇ ನಿಮ್ಮ ದೇವರು. ಅವರ ಸುಖ ಸಂತೋಷಗಳಿಗಾಗಿ ನೀವು ಬಂದಿದ್ದೀರಿ. ಆಗಲಿ ದೇವರಿದ್ದಾನೆ. ನೋಡೋಣ. ಈ ಮೂಲಿಕೆಯನ್ನು ತೆಗೆದುಕೊಳ್ಳಮ್ಮಾ, ನಿತ್ಯವೂ ಇದರ ಗಂಧವನ್ನು ತೆಗೆದು, ಹೆಸರು ಕಾಳಿನಷ್ಟು ಹೊಟ್ಟೆಗೆ ಕೊಟ್ಟು, ಹೆಸರು ಕಾಳಿನಷ್ಟನ್ನು ನೀರಿನಲ್ಲಿ ಕದಡಿ ಎರಡು ಕಣ್ಣಿಗೂ ಒಂದೊಂದು ತೊಟ್ಟು ಬಿಡುತ್ತ ಬನ್ನಿ ತಾಯಿ. ಒಂದು ಮಂಡಲ ಹೀಗೆ ನಡೆಯಿಸಿ. ದೇವರು ಒಳ್ಳೆಯದು

ಮಾಡಲಿ" ಎಂದು ಜೋಳಿಗೆಯಿಂದ ತೆಗೆದಿದ್ದ ಬೇರೊಂದನ್ನು ಸಾಧು ಬಂದಿದ್ದಾಕೆಯ ಕೈಗೆ ಹಾಕಿದನು.

ಆಕೆ ಸಾಧುವಿಗೆ ನಮಸ್ಕಾರ ಮಾಡಿ ಹಿಗ್ಗುತ್ತ ಹಿಂತಿರುಗಿದಳು. ಆಕೆ ಹಿಂತಿರುಗುವಾಗ ಸಾಧು ಹೇಳಿದ ಕಡೆಯ ಮಾತುಗಳಿವು.

"ಇನ್ನು ಮೂರು ಸಂವತ್ಸರಗಳ ತರುವಾಯ ಇದೇ ಕಾರ್ತಿಕ ಹುಣ್ಣಿಮೆ ದಿನ ನಾನು ಬಹುಶಃ ಇಲ್ಲಿ ಬಂದಿರುತ್ತೇನೆ. ಏನಾದರೂ ಶುಭ ಸಮಾಚಾರ ತಿಳಿಸುವುದಿದ್ದರೆ ಆಗ ಬಂದು ತಿಳಿಸಬಹುದು".

ಇಂದು ಶಾರದಮ್ಮನ ಬಾಳಿನಲ್ಲಿ ಅದೃಷ್ಟದ ದಿನವೊ ದುರದೃಷ್ಟದ ದಿನವೋ ಹೇಳಲು ಸಾಧ್ಯವಿಲ್ಲ. ಅವಳ ಕುರುಡು ಗಂಡ ಶಿವರಾಮಯ್ಯನಿಗೆ ದೃಷ್ಟಿ ಬಂದ ದಿನವಿದು.

ಶಿವರಾಮಯ್ಯ ಮಧ್ಯಾಹ್ನ ಊಟವಾದ ಮೇಲೆ ಒಬ್ಬನೇ ಕುಳಿತು ತೊಡೆಯ ಮೇಲೆ ವೀಣೆಯನ್ನಿಟ್ಟುಕೊಂಡು ಬಿಲಹರಿ ರಾಗವನ್ನು ನುಡಿಸುತ್ತ, ನಾದಲೀಲಾನಿಮಗ್ನನಾಗಿ ಕುಳಿತಿದ್ದ. ಶಾರದಮ್ಮನೂ ಆಗತಾನೆ ಊಟ ಮಾಡಿ ಕೆಲವು ಮುಸುರೆ ಪಾತ್ರೆಗಳನ್ನು ಬೆಳಗಲು ಹಿತ್ತಿಲ ಕಡೆಗೆ ಹೋಗಿದ್ದಳು. ಅವನ ನೆಚ್ಚಿನ ಶಿಷ್ಯ ಶಂಕರ ಮುಂದುಗಡೆಯ ಕೋಣೆಯಲ್ಲಿ ಗುರುಗಳು ಮಲಗಲು ಹಾಸಿಗೆಯನ್ನು ಹಾಸುತ್ತಿದ್ದ. ಗುರುಗಳು ಬಹು ಅಪೂರ್ವವಾದ ರೀತಿಯಲ್ಲಿ ರಾಗವಿನ್ಯಾಸ ಮಾಡುತ್ತಿದ್ದಾರೆಂದು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಾ, ರಾಗದ ಸ್ವರ ಸಂಚಾರವನ್ನು ಹೃದ್ಗತ ಮಾಡಿಕೊಳ್ಳುತ್ತ, ನಿಧಾನವಾಗಿಯೇ ಹಾಸಿಗೆ ಹಾಸುತ್ತಿದ್ದ, ಶಾರದಮ್ಮ ತನ್ನ ಮನಸ್ಸಿನಲ್ಲಿ 'ಅಂತೂ ಬಲವಂತ ಮಾಡಿ ಔಷಧ ಕೊಡುತ್ತ ಬಂದು ಇಂದಿಗೆ ಸರಿಯಾಗಿ ನಲವತ್ತೆಂಟು ದಿನ. ನಾಳೆ ಬೆಳಗ್ಗೆ ಅವರು ಏಳುವ ಹೊತ್ತಿಗೆ ಸರಿಯಾಗಿ ಅವರ ಕಣ್ಣಿಗೆ ಬೀಳುವಂತೆ ದೇವರ ಪಟವೊಂದನ್ನು ಗೋಡೆಗೆ ಹಾಕೆಂದು ಶಂಕರನಿಗೆ ಹೇಳಬೇಕು.. ನಾಳೆ.. ನಾಳೆ.. ಎಷ್ಟು ಹಿಗ್ಗುವರೋ, 'ಬೈರಾಗಿಯ ಬೇರು' ಎಂದು ಹಾಸ್ಯಮಾಡುತ್ತಿದ್ದರು.... ಆ ಮಹಾತ್ಮನ ಅನುಗ್ರಹದಿಂದ. ದೇವರ ದಯದಿಂದ.. ನಾಳೆಯೇ" ಎಂದು ಮುಂಬಯಕೆಯ

ಮುಗಿಲನ್ನೇರಿ ವಿಹರಿಸುತ್ತಿದ್ದಳು. ಮಾರನೆಯ ದಿನದವರೆಗೂ ಕಾಯಬೇಕಿಲ್ಲೆಂಬುದನ್ನು ಅವಳರಿಯಳು.

ಇದ್ದಕ್ಕಿದ್ದ ಹಾಗೆಯೇ ಶಿವರಾಮಯ್ಯ "ಹೋ ಹೋ! ಅಯ್ಯೋ ಅಯ್ಯೋ! ಹಾ, ಕಣ್ಣು ಕಣ್ಣು!" ಎಂದು ಚೀರಿದನು. ಕೋಣೆಯಲ್ಲಿದ್ದ ಶಂಕರ ಗಾಬರಿಯಿಂದ ಓಡಿಬಂದು, ಏನಾಯಿತು ಗುರುಗಳೆ?' ಎಂದು ಭಯಮಿಶ್ರವಾದ ಬೆರಗಿನಿಂದ ಎದುರುಗಡೆ ಸ್ತಂಭಿತನಾಗಿ ನಿಂತಿದ್ದನು. ಕ್ಷಣದ ಹಿಂದೆ ವೀಣೆಯ ತಂತಿಗಳ ಮೇಲೆ ಆಡುತ್ತಿದ್ದ ಶಿವರಾಮಯ್ಯನ ಕೈಗಳೆರಡೂ ಕಣ್ಣುಗಳನ್ನು ಮರೆಮಾಡಿ ಮುಖದ ಮೇಲಿದ್ದುವು. ಶಂಕರನ ಕೂಗು ಅನ್ಯಮನಸ್ಕಳಾಗಿದ್ದ ಶಾರದಮ್ಮನಿಗೆ ಬಹುಶಃ ಕೇಳಿಸಿರಲಾರದು.

ಇದುವರೆಗೂ ಕತ್ತಲೆಯ ಕಡಲಿನಲ್ಲಿ ಮುಳುಗಿದ್ದ ಶಿವರಾಮಯ್ಯನ ಕಣ್ಣುಗಳಿಗೆ ಮೊತ್ತ ಮೊದಲು ಬೆಳ್ಳಂಬೆಳಕಾದಾಗ ಸರ್ವಸಾಮಾನ್ಯವಾದ ಆ ಬೆಳಕೇ ಕೋರೈಸುವಂತಾಗಿರಬೇಕು. ಹಾಸಿಗೆಯಲ್ಲಿ ಹೊನ್ನಿನ ಹಾವನ್ನು ಕಂಡಂತಾಗಿರಬೇಕು! ಬೆಳಕನ್ನು ನೋಡಲಾಗದೆ ಕಣ್ಣು ಮುಚ್ಚಿಕೊಂಡೆ ಇದ್ದನು.

ಶಂಕರ ಹಿತ್ತಿಲ ಕಡೆಗೆ ಹೋಗಿ, ಸಂಗತಿಯನ್ನು ತಿಳಿಸಿ, ಗುರುಪತ್ನಿಯನ್ನು ಕರೆದುಕೊಂಡು ಬಂದನು. ಗಂಡನಿಗೆ ಕಣ್ಣು ಬಂದಿದೆಯೆಂದೇ ಶಾರಮ್ಮನ ದೃಢವಿಶ್ವಾಸ; ಆದರೂ ಆತಂಕದಿಂದಲೇ ಬಂದು ಪತಿಯೆದುರು ನಿಬ್ಬೆರಗಾಗಿ, ಮೌನದಿಂದ ನಿಂತಿದ್ದಳು. ಅಮಿತಾನಂದದಿಂದ ಅವಳ ಬಾಯಿ ಕಟ್ಟಿ ಹೋಗಿದ್ದಿತು. ಶಂಕರನೂ ಜೊತೆಯಲ್ಲಿಯೇ ಬಂದು ಮೊದಲ ಹಾಗೆಯೇ ನಿಂತಿದ್ದನು.

ಶಿವರಾಮಯ್ಯ ಮುಖ ಮುಚ್ಚಿದ ಕೈಗಳನ್ನು ತೆಗೆದನು; ಮತ್ತೆ ಮುಚ್ಚಿಕೊಂಡನು, ಮತ್ತೆ ತೆಗೆದನು, ಹೀಗೆ ಹಲವು ಸಲ ಪುನರಾವೃತ್ತಿ ಮಾಡಿ, ದೃಷ್ಟಿಗೆ ಅಪರಿಚಿತವಾಗಿದ್ದ ಆಕೃತಿಗಳನ್ನು ಸಹ್ಯವಾಗಿ ಮಾಡಿಕೊಳ್ಳತೊಡಗಿದನು; ಕಣ್ಣುಬಿಟ್ಟು ನೋಡತೊಡಗಿದನು.

ಶಾರದಮ್ಮನಾಗಲಿ ಶಂಕರನಾಗಲಿ ಈವರೆಗೆ ಬಾಯಿ ಬಿಟ್ಟಿರಲಿಲ್ಲ.

"ನೀವು ಯಾರು?" ಎಂದು ಬೆರಗಾಗಿ ಕೇಳಿದ, ಶಿವರಾಮಯ್ಯ,

ಶಾರದಮ್ಮನ ಹಿಗ್ಗು ಹಿಡಿಸಲಾಗಲಿಲ್ಲ; ಒಂದೇ ಸಮನೆ ಸುರಿಯುತ್ತಿದ್ದ ಹರ್ಷಬಾಷ್ಪವನ್ನು ಸೆರಗಿನ ಕೊನೆಯಿಂದ ಒರಿಸಿಕೊಳ್ಳುತ್ತಿದ್ದಳು.

ಶಂಕರನೆಂದ : "ನಾನು ಗುರುಗಳೆ".

ಪರಿಚಿತವಾದ ಧ್ವನಿಯುಳ್ಳ ವ್ಯಕ್ತಿ ಶಂಕರನೆಂದು ಸ್ಪಷ್ಟವಾಯಿತು, ಶಿವರಾಮಯ್ಯನಿಗೆ,

"ನಾನು.. ಗೊತ್ತಾಗಲಿಲ್ಲವೆ?" ಎಂದಳು ಶಾರದಮ್ಮ ಹಿಗ್ಗಿನಿಂದ.

"ಓಹೋ, ನೀನೇ! ಎಂದು ನಕ್ಕ ಶಿವರಾಮಯ್ಯ.

ಶಾರದಮ್ಮ ಹಿಗ್ಗಿನಿಂದ, ಸಡಗರದಿಂದ ದೇವರ ಕೋಣೆಗೆ ಹೋಗಿ, ದೇವರ ಮುಂದೆ ತುಪ್ಪದ ದೀಪ ಹೊತ್ತಿಸಿಟ್ಟು, ತೆಂಗಿನಕಾಯಿಯನ್ನು ಒಡೆದಿಟ್ಟು, ಅಡ್ಡಬಿದ್ದು ಕುಣಿದಾಡಿದಳು; ಹಿಗ್ಗಿನ ಕಡಲಿನ ತೆರೆಗಳ ಮೇಲೆ ಓಲಾಡಿದಳು; ಸಾಧುವರ್ಯರನ್ನು ಭಕ್ತಿಯಿಂದ ಸ್ಮರಿಸಿದಳು.

ಶಿವರಾಮಯ್ಯನಿಗೆ ದೃಷ್ಟಿ ಬಂದದ್ದು ಒಂದು ಪವಾಡದ ಸಂಗತಿಯಾಯಿತು. ಈ ಸಂತೋಷದ ಕೇಳಿ ಹಿಗ್ಗಲು ಅವನ ಹೆಂಡತಿ ಹೊರತು ಹತ್ತಿರದ ಬಳಗದವರಾರೂ ಇರಲಿಲ್ಲ. ಆದರೆ ನೆರೆಹೊರೆಯವರೂ, ಸಂಗೀತ ಪಾಠಕ್ಕೆ ಬರುತ್ತಿದ್ದ ಶಿಷ್ಯ–ಶಿಷ್ಯೆಯರೂ ಅವರ ಮನೆಯವರೂ ಬಲು ಹಿಗ್ಗಿದರು.

ಶಿವರಾಮಯ್ಯನೂ ಹಿಗ್ಗದೆ ಇರಲಿಲ್ಲ. ದೃಷ್ಟಿಲಾಭವನ್ನು ಪಡೆದ ಕುರುಡನೊಬ್ಬನು ಹಿಗ್ಗಿದನೆಂದರೆ ಸತ್ಯದ ಮಾತಾದೀತು. ಅವನ ಹಿಗ್ಗಿದ ಹವಣನ್ನು ತಿಳಿಸುವ ಮಾತು ಯಾವುದೂ ಇಲ್ಲ. ಇದುವರೆಗೂ ಅಂತಮುರ್ಖಿಯಾಗಿದ್ದವನು ಈಗ ಬಹಿರ್ಮುಖಿಯಾಗಿ, ಮನುಷ್ಯನು ನೋಡಿ ತಣಿಯುವುದಕ್ಕಾಗಿಯೇ ಎಂತಹ ಚೆಲುವಿನ ಸೃಷ್ಟಿಯನ್ನು ಭಗವಂತನು ಸೃಷ್ಟಿಸಿದ್ದಾನೆ. ಇದುವರೆಗೆ ಈ ಚೆಲುವಿನಿಂದ ನಾನು ವಂಚಿತನಾಗಿದ್ದೆನಲ್ಲಾ ಎನ್ನಿಸಿತು ಅವನಿಗೆ. ತನಗಾದದ್ದು ದೃಷ್ಟಿಲಾಭ ಮಾತ್ರವಲ್ಲ. ಸೌಂದರ್ಯದ ದರ್ಶನಲಾಭ, ಈ ಲಾಭ ಒಂದೇ ದಿನದಲ್ಲಿ ಆಗಲಿಲ್ಲ, ಕ್ರಮಕ್ರಮೇಣ ಆಯಿತು. ಅವನು ಕಂಡ ಮೊದಲ ನೋಟ ಎಂದರೆ

ಶಿಷ್ಯನದು, ತನ್ನ ಪತ್ನಿಯದು. ದೃಷ್ಟಿ ಲಾಭದ ಮಾರನೆಯ ದಿನವೇ ಅವನ ಮುಖವನ್ನಲಂಕರಿಸಿದ್ದ ಬಣ್ಣದ ಗಾಜಿನ ಕನ್ನಡಕ ಗೂಡನ್ನು ಸೇರಿತು. ಕನ್ನಡಿಯ ಮೂಲಕ ತನ್ನ ಮುಖದ ದರ್ಶನವೇ ಆಯಿತು. ಮೊದಲ ನೋಟದಲ್ಲಿಯೇ ತಾರತಮ್ಯ ಜ್ಞಾನದಿಂದ ಅವನಿಗೆ ತನ್ನ ಮುಖ ಮಾಟದಲ್ಲಿಯೂ ಬಣ್ಣದಲ್ಲಿಯೂ ತನ್ನ ಶಿಷ್ಯನ ಮುಖಕ್ಕಿಂತಲೂ ಮೇಲೆಂದು ತೋರಿ ತೃಪ್ತಿಯಾಗಿತ್ತು. ತನ್ನ ಹೆಂಡತಿಯ ಮುಖವನ್ನು ನೋಡಿ ಹೆಣ್ಣಿನ ಮುಖ ಹಾಗೆಯೇ ಇರಬೇಕೆಂದು ಭಾವಿಸಿದ್ದ. ಅವನ ಶಿಷ್ಯೆಯರಲ್ಲಿ ಇಬ್ಬರು ಮೂವರು ಚೆಲುವೆಯರಾದ ತರುಣಿಯರೂ ಇದ್ದರು. ಅವರನ್ನೂ, ಹೊರಗೆ ಸುತ್ತಾಡಲು ಹೋದಾಗ ಬೇರೆಯ ಹೆಂಗಸರನ್ನೂ ಹೊಸ ನೋಟದ ಕುತೂಹಲ ದೃಷ್ಟಿಯಿಂದ ಕಣ್ಣಿಟ್ಟು ನೋಡಿ ನೋಡಿದಂತೆಲ್ಲಾ ಅವನ ಸ್ತ್ರೀಸೌಂದರ್ಯ ತಾರತಮ್ಯ ಜ್ಞಾನ ಕೇವಲ ಅತ್ಯಲ್ಪ ಕಾಲದಲ್ಲಿ ವೃದ್ಧಿಗೊಂಡು, ತನ್ನ ಹೆಂಡತಿ ಕುರೂಪಿ ಎಂಬ ತೀರ್ಮಾನಕ್ಕೆ ಬಂದನವನು.

ಆಹಾ! ಅಂತಹ ಸೋಜಿಗವಿದು ! ದೃಷ್ಟಿಲಾಭದಿಂದ ಹಿಗ್ಗುತ್ತಿದ್ದವನು ಕೇವಲ ಅತ್ಯಲ್ಪ ಕಾಲದಲ್ಲಿ ಕುಗ್ಗಿದನು, ಕೊರಗತೊಡಗಿದನು. ಹುಟ್ಟು ಗುರುಡನಾದ ತನಗೂ ಒಬ್ಬರು ಹೆಣ್ಣು ಕೊಟ್ಟರು, ತಾನೂ ಒಬ್ಬ ಮನುಷ್ಯನಾದೆ ಎಂದು ಹಿಗ್ಗುತ್ತಿದ್ದವನು, ದೇವರು ಕಣ್ಣನ್ನು ಕಿತ್ತುಕೊಂಡಿದ್ದರೂ ಕೈಗೊಂದು ವೀಣೆಯನ್ನು ಕೊಟ್ಟಿದ್ದಾನೆಂದು ಹಿಗ್ಗುತ್ತಿದ್ದವನು, ಸಂಗೀತ ಕಲೋಪಾಸನೆಯಿಂದ ಜೀವನೋಲ್ಲಾಸ ಮಾತ್ರವಲ್ಲದೆ ಜೀವನೋಪಾಯವೂ ಲಭಿಸಿದೆಯೆಂದು ಹಿಗ್ಗುತ್ತಿದ್ದವನು, ತಾನು ಕುರುಡನಾಗಿ ಸಂಗೀತ ಸಾಮ್ರಾಜ್ಯದಲ್ಲಿ ವಿಹರಿಸುತ್ತಿರಲಾಗಿ ಸಂಸಾರದ ಜಂಜಡವನ್ನೆಲ್ಲಾ ಹೆಂಡತಿಯೊಬ್ಬಳೇ ಹೊತ್ತಿರುವಳಲ್ಲಾ ಎಂದು ಅವಳ ಬಗ್ಗೆ ಮರುಕ ಪ್ರೇಮಗಳಿಂದ ಹಿಗ್ಗುತ್ತಿದ್ದವನು ಇಂದು ಕುಗ್ಗಿದನು, ಕೊರಗಿದನು.

ಕುರುಡನಾಗಿದ್ದ ತನಗೆ ಇಂಥ ಹೆಣ್ಣಲ್ಲದೆ ಇನ್ನೆಂಥ ಹೆಣ್ಣನ್ನು ಯಾರು ತಾನೆ ಕೊಡಲು ಮುಂದೆ ಬರುತ್ತಿದ್ದರು? ಕಪ್ಪು ಬಣ್ಣ, ಸಿಡುಬಿನ ಕಲೆಯ ಮುಖ–ಒಟ್ಟಿನಲ್ಲಿ ವಿಕಾರದ ರೂಪ, ಇಷ್ಟೆಲ್ಲಾ ಹೊರತು, ಇನ್ನು ಯಾವ ಭಾಗದಲ್ಲಿ ಅವಳಲ್ಲಿ ಕೊರತೆ ಇದೆ? ಬೇರೆ ಯಾವ ಕೊರತೆಯೂ ಇಲ್ಲ. ತಕ್ಕಮಟ್ಟಿಗೆ ಸಂಗೀತವನ್ನೂ ಕಲಿತಿದ್ದಾಳೆ. ತನ್ನ ಕುರುಡಿನ ಬಗ್ಗೆ ಕಣ್ಣು

ಮುಚ್ಚಿ, ತನ್ನ ಗುಣಭಾಗವನ್ನೇ ಸ್ವೀಕರಿಸಿದ್ದಾಳೆ. ತನಗೆ ದೃಷ್ಟಿ ಬರಲೆಂದು ಅವಳೆಷ್ಟೋ ವ್ರತ ಮಾಡಿದ್ದಾಳೆ, ಹರಕೆ ಹೊತ್ತಿದ್ದಾಳೆ, ಸಾಧು ಸನ್ಯಾಸಿಗಳನ್ನು ಆಶ್ರಯಿಸಿದ್ದಾಳೆ. ಕಡೆಗೆ ಈಗ ಸಾಫಲ್ಯ ಹೊಂದಿದ್ದಾಳೆ. ತನಗೆ ಈಗ ದೃಷ್ಟಿ ಬಂದಿರುವುದಾದರೂ ಆ ಸಾಧುವಿನ ವರಕ್ಕಿಂತ ಹೆಚ್ಚಾಗಿ ಅವಳ ವರವೇ ಅಲ್ಲವೇ? ಹೌದು, ಆದರೂ, ಇದುವರೆಗೆ ಕೇವಲ ಪ್ರೇಮಪುತ್ಥಳಿಯಂತೆ ತನ್ನ ಮನೋನಯನದ ಮುಂದೆ ಬೆಳಗುತ್ತಿದ್ದ ಅವಳ ಕಾಂತಿಮೂರ್ತಿ ತನ್ನ ಬಿಟ್ಟ ಕಣ್ಣಿಗೆ ಈಗ ವಿಕೃತರೂಪದ ಕಾಳಿಕೆಯ ಮರೆಯಲ್ಲಿ ಸಂಪೂರ್ಣವಾಗಿ ಕಾಂತಿಹೀನಳಾಗಿರುವಳಲ್ಲ? ಭಗವಂತ ತನ್ನ ಕಣ್ಣು ತೆರೆಯಿಸಿ, ಈ ಕಪ್ಪಿನ ಮುದ್ದೆಯನ್ನು ತನಗೆ ತೋರಿಸಿದನೇಕೆ? ಇದರ ಅರ್ಥವೇನು?

ಶಿವರಾಮಯ್ಯನಿಗೆ ನಿಜವಾಗಿ ಅರ್ಥವಾಗಲಿಲ್ಲ. ಬಗೆಹರಿಯಲಿಲ್ಲ. ಒಳಗೇ ಕುದ್ದುಕೊಳ್ಳುತ್ತಿದ್ದ. ತೊಳಲಾಡುತ್ತಿದ್ದ. ತನ್ನ ಅಂತರ್ಯದ ವೇದನೆಯನ್ನು ಹೊರಕ್ಕೆ ತೋರ್ಪಡಿಸಿಕೊಳ್ಳದಿರಲು ಬಹುವಾಗಿ ಪ್ರಯತ್ನಿಸುತ್ತಿದ್ದ. ಆ ಪ್ರಯತ್ನಗಳಲ್ಲಿ, ಮನೆಯಲ್ಲಿ ಹೆಚ್ಚಾಗಿ ಉಳಿಯದೆ ಹೊರಗೇ ಇರುತ್ತಿದ್ದುದು ಒಂದು. ಮನೆಗೆ ಬರುತ್ತಿದ್ದ ಕೆಲವು ಶಿಷ್ಯೆಯರ ಮನೆಗಳಿಗೆ ತಾನೇ ಪಾಠಕ್ಕೆ ಹೋಗಲು ಮೊದಲು ಮಾಡಿದ. ದೃಷ್ಟಿಯು ಬಂದ ಮೇಲೂ ಮನೆಯಲ್ಲಿಯೆ ಕುಳಿತಿರುವುದೆಂದರೇನು? ಹೀಗೆ ಮಾಡುವುದೇ ಸರಿ, ಸಹಜ–ಎಂದು ಶಾರದಮ್ಮನೂ ಗಂಡನ ಮಾರ್ಪಟ್ಟ ದಿನಚರಿಯ ಬಗ್ಗೆ ತೃಪ್ತಿಗೊಂಡು, ಅದಕ್ಕೆ ಹೊಂದಿಕೊಂಡಳು. ಹೊರಗೆ ಸುತ್ತಾಡಲು ಅವಕಾಶವಿಲ್ಲದವನಾಗಿ ಶಿವರಾಮಯ್ಯ ದಿನವೆಲ್ಲವನ್ನೂ ಮನೆಯಲ್ಲಿಯೇ ಕಳೆಯಬೇಕಾಗಿದ್ದುದರಿಂದ, ಇನ್ನೇನೂ ಮಾಡಲು ಕೆಲಸವಿಲ್ಲದೆ ಸಂಗೀತ ವಿದ್ಯೆಯನ್ನು ಚೆನ್ನಾಗಿ ಸಾಧನೆ ಮಾಡಿದ್ದನು. ವೀಣಾವಾದನದಲ್ಲಿಯೇ ವಿಶೇಷವಾಗಿ ಪರಿಶ್ರಮ ಮಾಡಿದ್ದರೂ, ಬಾಯಿ ಹಾಡಿಕೆಯನ್ನೂ ಪಿಟೀಲು ಬಾರಿಸುವುದನ್ನೂ ಚೆನ್ನಾಗಿ ಅಭ್ಯಾಸ ಮಾಡಿದ್ದನು. ಸಂಗೀತ ಕಛೇರಿಗಳನ್ನು ಮಾಡಿರಲಿಲ್ಲವಾದ್ದರಿಂದ ಇವನ ಸಂಗೀತ ವೈದುಷ್ಯ ಹೆಚ್ಚಾಗಿ ಪ್ರಚಾರವಾಗಿರಲಿಲ್ಲ. ಪಾಠ ಹೇಳಿಸುವವರು ಮತ್ತು ಹತ್ತಾರು

ಮಂದಿ ಗೆಳೆಯರು, ಇವರಿಗೆ ಮಾತ್ರ ಗೊತ್ತಿತ್ತು. ಶಿಷ್ಯರಿಗೆ ಪಾಠ ಹೇಳುವುದರಿಂದ ಮಾತ್ರ ತಕ್ಕಮಟ್ಟಿನ ಸಂಪಾದನೆಯಾಗುತ್ತಿದ್ದಿತು.

ಈಗ ತಿರುಗಾಡಬಲ್ಲವನಾಗಿ ಎಂದಿನ ಪಾಠಗಳಲ್ಲದೆ ಹೆಚ್ಚು ಪಾಠಗಳನ್ನು ಒಪ್ಪಿಕೊಂಡವನು. ಗೆಳೆಯರ ಪ್ರೋತ್ಸಾಹದಿಂದ ಹಲವು ಕಡೆ ಕಚೇರಿಗಳನ್ನೂ ಮಾಡಿ ಒಬ್ಬ ಗಣ್ಯನಾದ ಸಂಗೀತ ವಿದ್ವಾಂಸನೆನಿಸಿಕೊಂಡನು. ಸಂಪಾದನೆಯೂ ಹೆಚ್ಚುತ್ತ ಬಂದಿತು. ಬೆಲೆ ಬಾಳುವ ಉಡುಪುಗಳನ್ನು ಧರಿಸುತ್ತ ಬಂದನು; ತನ್ನ ಅಂತಸ್ತಿಗೆ ತಕ್ಕಂತೆ ಮನೆಯನ್ನು ಸಿಂಗರಿಸತೊಡಗಿದನು. ಕಣ್ಣಿಗೆ ಹಬ್ಬವಾಗುವ ಹಲವು ಕಡೆ ಅವನ ಮನಸ್ಸು ಹರಿಯತೊಡಗಿತು. ತನ್ನ ಬಾಳನ್ನೇ ಈಗ ಹಬ್ಬವಾಗಿಸಿದ್ದ ಹೆಂಡತಿಯ ಕಡೆ ಮಾತ್ರ ಗಮನ ದಿನದಿನಕ್ಕೆ ಕಡಿಮೆಯಾಗುತ್ತ ಬಂದಿತು. ಹಾಗೆ ಇವನಿಗೆ ಕಣ್ಣಿಗೆ ಹಬ್ಬವಾದವರಲ್ಲಿ ಇವನ ಹೊಸ ಶಿಷ್ಯ ಲಲಿತೆ ಒಬ್ಬಳು. ಅವಳು ವೇಶ್ಯಾಪುತ್ರಿಯೆಂಬುದು ಮೊದಲು ಅವನಿಗೆ ತಿಳಿದಿರಲಿಲ್ಲ. ಅವನು ತನ್ನ ಶಿಷ್ಯೆಯರಲ್ಲಿ ಕೆಲವರ ಚೆಲುವನ್ನು ನೋಡಿ ನೋಡಿಯೇ ಹಿಗ್ಗಿ ತೃಪ್ತಿಪಡುತ್ತಿದ್ದನು; ತನ್ನ ಹೆಂಡತಿಯೂ ಅವರ ಹಾಗೆ ಇದ್ದಿರಬಾರದಾಗಿತ್ತೆ ಎಂದು ಪರಿತಪಿಸುತ್ತಿದ್ದನು. ಆದರೆ, ಅವರ ವಿಚಾರದಲ್ಲಿ ಅವನ ಮನಸ್ಸು ತಪ್ಪುದಾರಿಗೆ ಹೋಗಲು ಅನೇಕ ನಿರ್ಬಂಧಗಳಿದ್ದುವು. ಆದರೆ, ಲಲಿತೆ ವೇಶ್ಯೆಯ ಮಗಳು ಎಂದು ತಿಳಿದ ಮೇಲೆ ಅವನ ಮನಸ್ಸು ಅವಳ ಚೆಲುವಿಗೆ ಸೆರೆಸಿಕ್ಕಿತು. 'ಸೂಳೆ ಮಗಳಿಗೆ ಪಾಠ ಹೇಳುತ್ತಾನೆ' ಎಂಬ ಕೆಲವರ ಆಡಿಕೆಗೆ ಆಗಲೇ ಮೊದಲಾಗಿತ್ತು. ಇದು ಅವನ ಕಿವಿಗೂ ಬಿದ್ದು ಮೊದಲು ತುಸು ವ್ಯಥೆಯೂ ಕಳವಳವೂ ಆದರೂ, ಹಿಡಿಯಬಾರದ ಹಾದಿಯನ್ನು ಹಿಡಿಯಲು ಅವನಿಗೆ ಪ್ರೋತ್ಸಾಹವನ್ನೇ ಕೊಟ್ಟಿತ್ತು. 'ನಾನು ನಿರ್ದೋಷಿಯಾಗಿದ್ದರೂ ಜನ ಆಡಿಕೊಳ್ಳುವುದು ತಪ್ಪುವುದಿಲ್ಲ. ಇನ್ನು ದೋಷ ಮಾಡಿದರೆ ತಾನೆ ಏನು?' ಎಂಬ ಧೈರ್ಯ ಮೂಡಿ, ಅವನ ಮನಸ್ಸು ಲಲಿತೆಯ ಸಹವಾಸವನ್ನೂ ಬಯಸಿತು. ಪ್ರಾಪಂಚಿಕ ಜ್ಞಾನವೂ, ಪ್ರಣಯ ವ್ಯವಹಾರದ ಕುಶಲತೆಯೂ ಇಲ್ಲದ ಬಡ ಶಿವರಾಮಯ್ಯ ಲಲಿತೆಯನ್ನು ಬಯಸಿ ಅವಳ ತಾಯಿಯ ಬಲೆಗೆ ಬಿದ್ದ; ಹೂವನ್ನು ಬಯಸಿ ಮುಳ್ಳುಪೊದೆಗೆ ಕೈಯಿಟ್ಟ.

"ಭಾಗ್ಯಮ್ಮ, ಲಲಿತೆಯಿಲ್ಲದೆ ನಾನು ಬದುಕಲಾರೆ"

"ಏಕೆ? ನಾನಿಲ್ಲವೇ"

"ನೀನು ಲಲಿತೆಯಲ್ಲ"

"ನಾನು ಅವಳ ತಾಯಿ, ಬಲ್ಲವಳು. ಅವಳು ಏನೂ ಅರಿಯದ ಕೂಸು".

"ನನಗೇ ಆ ಮಗಳೇ ಆಗಬೇಕು"

"ನಾನು ನಿಮಗೆ ಸುಖವನ್ನು ಕೊಟ್ಟಿಲ್ಲವೆ?"

"ಮನಸ್ಸು ಒಂದನ್ನು ಬಯಸುತ್ತಿರುವಾಗ ಇನ್ನೊಂದನ್ನು ನೀಡಿದರೆ ಅದರಿಂದ ಸುಖವಾದೀತೇ?"

"ಇನ್ನು ಕೆಲವು ಕಾಲ ತಾಳಿ ಅವಳಿಗೆ ನೀವು ಸಂಪೂರ್ಣವಾಗಿ ಸಂಗೀತ ಶಿಕ್ಷಣ ಕೊಟ್ಟು ಮುಗಿಸಿದ ಮೇಲೆ ನಿಮಗೆ ಗುರುದಕ್ಷಿಣೆ ಕೊಡಬೇಕಷ್ಟೆ? ಅವಳೇ ಗುರುದಕ್ಷಿಣೆ !"

ಶಿವರಾಮಯ್ಯ ಪೂರ್ತಿಯಾಗಿ ಭಾಗ್ಯಮ್ಮನ ಬಲೆಗೆ ಬಿದ್ದುಬಿಟ್ಟ. ಸುವರ್ಣ ಪುತ್ಥಳಿ ಲಲಿತೆಯನ್ನು ಮುಂದೆ ಎಂದೋ ಪಡೆಯುವ ಹುಸಿ ನೆಚ್ಚಿಕೆಯಿಂದ ಇಂದು ಇಷ್ಟವಿಲ್ಲದಿದ್ದರೂ ಭಾಗ್ಯಮ್ಮನನ್ನು ಒಲಿಸಿಕೊಳ್ಳಲು ಪರಿಪರಿಯಲ್ಲಿ ಪ್ರಯತ್ನಿಸತೊಡಗಿದ. ಅವಳ ಮನೆಯಲ್ಲಿಯೇ ಹೆಚ್ಚು ಹೊತ್ತನ್ನು ಕಳೆಯತೊಡಗಿದ. ಇವನ ಈ ದುರ್ವ್ಯಸನವನ್ನು ತಿಳಿದ ಕೆಲವರು ಆಗಲೇ ಇವನಿಂದ ತಮ್ಮ ಹೆಣ್ಣುಮಕ್ಕಳಿಗೆ ಪಾಠ ಹೇಳಿಸುವುದನ್ನು ನಿಲ್ಲಿಸಿಬಿಟ್ಟರು; ಅಪವ್ಯಯಕ್ಕೇ ಹೊತ್ತು ಸಾಲದೆ ಅವನು ತಾನಾಗಿಯೇ ಕೆಲವು ಪಾಠಗಳನ್ನು ಬಿಟ್ಟ ಅವನ ಸಂಪಾದನೆ ಶೂನ್ಯವಾಗುತ್ತ ಬಂತು. ಮನೆಯಲ್ಲಿ ಕಾರ್ಪಣ್ಯದ ಜೀವನಕ್ಕೆ ಮೊದಲಾಯಿತು. ಬರುಬರುತ್ತ ಮನೆಯಲ್ಲಿ ಒಂದು ಹೊತ್ತಿನ ಊಟಕ್ಕೂ ಕಷ್ಟವಾಗುತ್ತ ಬಂತು. ಇದು ಏಕೆ ಹೀಗೆಂದು ಕೇಳಲು ಶಾರದಮ್ಮನಿಗೆ ಧೈರ್ಯವಾಗಲಿಲ್ಲ. ಗಂಡನ ದೇಹ ದಿನದಿನಕ್ಕೆ ಬಡವಾಗುತ್ತಿದೆ; ಮುಖದ ಕಳೆ ಬತ್ತುತ್ತಿದೆ; ಹೊಸದಾಗಿ ಬಂದ ಕಣ್ಣಿನ ಹೊಳಪು ಮಾಸುತ್ತಿದೆ; ಮಾತು ಕತೆಯಲ್ಲಿ ಸಿಡುಕು, ಅಸಮಾಧಾನ ಕಾಣಿಸಿಕೊಳ್ಳುತ್ತಿದೆ; ಏನೆಂದು ಅವಳಿಗೆ ಅರ್ಥವಾಗಲಿಲ್ಲ; ಗಾಳಿಯ

ವರ್ತಮಾನವನ್ನು ಕೇಳಿದ್ದ ಶಂಕರನಿಗೆ ವಿಷಯವನ್ನು ಗುರುಪತ್ನಿಗೆ ತಿಳಿಸಲು ಭಯ, ಸಂಕೋಚ.

ಒಂದು ದಿನ ತುಸು ಧೈರ್ಯವಹಿಸಿ ಶಾರದಮ್ಮ ನಯವಾಗಿಯೇ ಕೇಳಿದಳು :

"ಏಕೋ ದಿನದಿನಕ್ಕೆ ಬಡವಾಗುತ್ತಿದ್ದೀರಿ. ಸ್ವಲ್ಪ ದೇಹದ ಕಡೆ ಗಮನ ಕೊಡಬಾರದೇ? ಅಲ್ಲಿಗೆ ಇಲ್ಲಿಗೆ ಸುತ್ತಾಡುವುದು ಸ್ವಲ್ಪ ಕಡಿಮೆ ಮಾಡಿದರೆ ಒಳ್ಳೆಯದು ಅಂತ ಕಾಣುತ್ತೆ".

ಶಾರದಮ್ಮನ ಸರಳವಾದ ಮಾತುಗಳಲ್ಲಿ ವ್ಯಂಗ್ಯವಾದ ಅರ್ಥ ಹೊಳೆಯಿತು ಶಿವರಾಮಯ್ಯನಿಗೆ. ಕೆರಳಿ ನುಡಿದನವನು.

"ಅಲ್ಲಿಗೆ ಇಲ್ಲಿಗೆ ಎಂದು ಕೊಂಕು ಮಾತೇಕೆ? ಸ್ಪಷ್ಟವಾಗಿ ಹೇಳಿ ಬಿಡು. ಹೌದು, ನಾನು ಸೂಳೆಯ ಮನೆಗೆ ಹೋಗುತ್ತೀನಿ ನಿನ್ನನ್ನು ನೋಡಿಕೊಂಡು ಮನೆಯಲ್ಲಿ ಕುಳಿತಿರಲೇನು?

"ಕೋಪ ಯಾಕೆ? ನಾನು ಹಾಗೆಂದನೆ? ಬಿಸಿಲಿನಲ್ಲಿ ಅಲೆದಾಡಿದರೆ ಮೈಗೂ ಒಳ್ಳೆಯದಲ್ಲ, ಕಣ್ಣಿಗೂ ಕೆಡುಕಾದೀತು ಅಂತ ಹಾಗೆ ಹೇಳಿದೆ. ಅಷ್ಟೆ".

"ನನ್ನ ಕಣ್ಣು ಹೋದರೆ ಹೋಗಲಿ. ಕಣ್ಣು ಹೋದರೆ ಮತ್ತೆ ಮನೆಯಲ್ಲಿಯೇ ಕುಳಿತುಕೊಳ್ಳುತ್ತೇನೆ. ಆಗ ನೀನು ಸುಖವಾಗಿರಬಹುದು.

ಈಗಲೀಗ ಗಂಡನ ನಡತೆಯ ಬಗ್ಗೆ ಶಾರದಮ್ಮನಿಗೂ ತುಸು ಸಂಶಯಕ್ಕೆ ಮೊದಲಾಯಿತು. ಸರ್ವಕಾಲ ಬಂಧುವಾಗಿದ್ದ ಶಂಕರನಲ್ಲಿ ತನ್ನ ಸಂಶಯವನ್ನು ಸೂಚಿಸಿ, ದುಃಖವನ್ನು ತೋಡಿಕೊಂಡು, "ಅಪ್ಪಾ, ಶಂಕರಾ, ಅವರಿಗೆ ಕಣ್ಣಿಲ್ಲದಿರುವಾಗ ನೀನು ಅವರ ಕೈ ಹಿಡಿದು ನಡೆಸಿದೆ. ಅವರು ಏನೇ ಆಗಲಿ, ಅವರ ಕೈ ಬಿಡಬೇಡ, ಕಂಡೆಯಾ" ಎಂದು ಬೇಡಿಕೊಂಡಳು. ಅದಕ್ಕೆ ಶಂಕರ, "ತಾಯಿ, ದೇವರಿದ್ದಾನೆ. ನೀವು ಯೋಚನೆ ಮಾಡಬೇಡಿ. ಕೈ ಹಿಡಿದು ನಡೆಸುವವನು ಅವನು" ಎಂದು ಸಮಾಧಾನ ಹೇಳಿದ.

ಶಾರರದಮ್ಮ ದೇವರಲ್ಲಿ ನಿತ್ಯವೂ ಮೊರೆಯಿಡತೊಡಗಿದಳು; 'ದೇವರೇ, ಅವರಿಗೆ ಕಣ್ಣು ಕೊಟ್ಟೆ. ಒಳ್ಳೆಯ ಬುದ್ದಿಯನ್ನು ಕೊಡು. ಒಂದು ದಿನ ತನ್ನ ಕನಸಿನಲ್ಲಿ ಅವಳು ಹಿಂದೆ ಸಂದರ್ಶಿಸಿದ್ದ ಸಾಧುವನ್ನು ಕಂಡಳು; ಅವನಲ್ಲಿಯೂ ಅದೇ ಬೇಡಿಕೆಯನ್ನು ಬೇಡಿದಳು. ಸಾಧು ಹೀಗೆ ಹೇಳಿದಂತೆ ಅವಳಿಗೆ ಭಾಸವಾಯಿತು : 'ಎರಡೂ ಹೇಗೆ ಸಾಧ್ಯ ತಾಯಿ? ಕಣ್ಣು ಬಯಸಿದೆ, ಕಣು ಬಂತು; ಬುದ್ದಿ ಕೆಟ್ಟಿತು. ಇದ್ದದ್ದರಲ್ಲಿ ತೃಪ್ತಿಪಟ್ಟುಕೊಳ್ಳಬೇಕು ತಾಯಿ. ಎಷ್ಟೋ ವೇಳೆ ಇಲ್ಲದ ವಸ್ತುವಿಗೆ ಅತ್ಯಾಶೆಪಟ್ಟರೆ ಒಂದು ಹೋಗಿ ಇನ್ನೊಂದಾಗುತ್ತದೆ'.

3

ಇಂದು ಕಾರ್ತಿಕ ಹುಣ್ಣಿಮೆ. ಶಾರದಮ್ಮ ಸಾಧುವನ್ನು ಸಂದರ್ಶಿಸಿ ಸರಿಯಾಗಿ ಮೂರು ವರ್ಷಗಳು, ಮನೆಯಲ್ಲಿ ಶಿವರಾಮಯ್ಯ ರೋಗಗ್ರಸ್ತನಾಗಿ ಮತ್ತೆ ದೃಷ್ಟಿಶೂನ್ಯನಾಗಿ, ಹಾಸಿಗೆ ಹಿಡಿದು ಮಲಗಿದ್ದಾನೆ. ಗಂಡನ  ಯಿಂದಾಗಿ, ಶಾರದಮ್ಮನಿಗೆ ಸಾಧುವಿನ ನೆನಪು ಇಂದು ತಪ್ಪದೆ ಆಯಿತು. ತಾನು ಆತನ ಬಳಿಗೆ ಹೋಗುವುದಕ್ಕೆ ಲಜ್ಜೆಗೊಂಡವಳಾಗಿ ತನ್ನ ಪರವಾಗಿ ಶಂಕರನ್ನು ಕಳಿಸಿಕೊಟ್ಟಳು.

ಅದೇ ಸ್ಥಳದಲ್ಲಿ, ಅದೇ ಮಂಟಪದಲ್ಲಿ, ಸಾಧು ಇಳಿದುಕೊಂಡಿದ್ದನು. ಅವನು ಇಲ್ಲಿಗೆ ಬಂದು ತಂಗಿ ಕೆಲವಾರು ದಿನಗಳಾಗಿದ್ದುವು. ಹಿಂದಿನಂತಲ್ಲದೇ ಅನೇಕ ಮಂದಿ ಅವನ ಸಂದರ್ಶನಕ್ಕಾಗಿ ಹೋಗಿ ಬರುತ್ತಿದ್ದರು. ಶಂಕರ ಅಲ್ಲಿಗೆ ಹೋದಾಗಲೂ ಕೆಲವರು ಸಾಧುವಿನ ಬಳಿ ತಮ್ಮ ಕಷ್ಟ ನಿಷ್ಟುರಗಳನ್ನು ಹೇಳಿಕೊಳ್ಳುತ್ತಿದ್ದರು. ಎಲ್ಲರೂ ಹೊರಟು ಹೋಗುವವರೆಗೂ ಶಂಕರ ಕಾದಿದ್ದನು.

"ಏನಪ್ಪ, ಬಹಳ ಹೊತ್ತಿನಿಂದ ಕಾದಿದ್ದೀಯೆ? ನಿನಗೇನಾಗಬೇಕು?"

"ನಿಮ್ಮ ಆಶೀರ್ವಾದದಿಂದ, ನನಗೇನೂ ಕೊರತೆಯಿಲ್ಲ. ನನ್ನ ಗುರುಗಳಿಗೋಸ್ಕರ ಬಂದಿದ್ದೇನೆ".

"ಯಾರು ನಿಮ್ಮ ಗುರುಗಳು?"

"ಸಂಗೀತ ಕಲಿಸುವ ಗುರುಗಳು?"

"ಸಂಗೀತ ಕಲಿಸುವ ಗುರುಗಳೆ?"

"ಹೌದು".

"ಅವರೇ ಬರಬಹುದಾಗಿತ್ತಲ್ಲ?"

"ಅವರು ಬರುವ ಸ್ಥಿತಿಯಲ್ಲಿಲ್ಲ. ರೋಗದಿಂದ ನರಳುತ್ತ ಹಾಸಿಗೆ ಹಿಡಿದು ಮಲಗಿದ್ದಾರೆ. ಅಲ್ಲದೆ ಇದ್ದಕ್ಕಿದ್ದ ಹಾಗೆ ಬಂದ ಕಣ್ಣು ಮತ್ತೆ ಹೋಗಿದೆ".

'ಬಂದ ಕಣ್ಣು ಮತ್ತೆ ಹೋಗಿದೆಯೇ? ಹಿಂದೆ ಕುರುಡಾಗಿದ್ದು ಕಣ್ಣು ಬಂದಿತ್ತೇನು?'

"ಹೌದು, ತಮ್ಮ ಅನುಗ್ರಹದಿಂದಲೇ ಅವರಿಗೆ ಕಣ್ಣು ಬಂದಿತ್ತು. ಅವರ ಹೆಂಡತಿ ತಮ್ಮಲ್ಲಿ ಬೇಡಿ, ತಮ್ಮಿಂದ ಔಷಧ ಪಡೆದು ಹೋಗಿದ್ದರಂತೆ. ಆ ಔಷಧದ ಮಹಿಮೆಯಿಂದಲೇ ಅವರಿಗೆ ಕಣ್ಣು ಬಂದದ್ದು. ಇದ್ದಕ್ಕಿದ್ದಹಾಗೆ ಬಂದ ಕಣ್ಣು ಹೊರಟುಹೋಗಿದೆ".

"ಇದ್ದಕ್ಕಿದ್ದಹಾಗೆ ಹೋಗಿರಲಾರದು. ಏನೋ ಕಾರಣವಿರಬೇಕು".

"ಅದು ಏನು ಕಾರಣವೋ ನನಗೆ ತಿಳಿಯದು".

"ಕಣ್ಣು ಬರುವುದಕ್ಕೆ ಮುಂಚೆ ಹೇಗಿದ್ದರು? ಆಮೇಲೆ ಹೇಗಾದರು? ಆಮೇಲೆ ಅವರ ನಿತ್ಯದ ಕಾರ್ಯಕ್ರಮಗಳಲ್ಲಿ ಏನಾದರೂ ವ್ಯತ್ಯಾಸವಾಯಿತೆ?"

"ಮೊದಲು ಮನೆಯಲ್ಲಿಯೇ ಇರುತ್ತಿದ್ದರು. ಕಣ್ಣು ಬಂದ ಮೇಲೆ ಹೊತ್ತುಗೊತ್ತೆನ್ನದೆ ಸುತ್ತಾಡಲು ಮೊದಲು ಮಾಡಿದರು".

"ಕೇವಲ ಸುತ್ತಾಟದಿಂದ ಕಣ್ಣು ಹೋದೀತೆ? ಅದಲ್ಲ ಕಾರಣ ಅವರಿಗೆ ಇನ್ನೇನೋ ಖಾಯಿಲೆಯಿದೆಯೆಂದೆಯಲ್ಲ? ಏನು ಖಾಯಿಲೆ?"

ಶಂಕರ ಮೌನವಾಗಿದ್ದ.

"ಸ್ವಲ್ಪ ವಿವರಿಸಿ ಹೇಳಬೇಕಪ್ಪ. ಇಲ್ಲದಿದ್ದರೆ ನಾನು ಏನು ಮಾಡಲಾದೀತು?"

ಏನೇ ಮಾಡಿರಲಿ, ಎಷ್ಟೇ ಕೆಟ್ಟಿರಲಿ – ಶಿವರಾಮಯ್ಯ ತನ್ನ ಗುರು; ಸಾಧುವಿನ ಮುಂದೆ ತನ್ನ ಗುರುವಿನ ದುರ್ವ್ಯಸನದ ದುಷ್ಪರಿಣಾಮದ ಕತೆಯನ್ನು ಅತಿ ಸಂಗ್ರಹವಾಗಿಯೇ ಆದರೂ ಹೇಳುವುದರಲ್ಲಿ ಅವನ ಕೊರಲು ಕಟ್ಟಿಬಂದಿತ್ತು. ಕಣ್ಣು ಹನಿಗೂಡಿತ್ತು. ಶಂಕರನ

ಮಾತನಿಂದ ಶಿವರಾಮಯ್ಯನ ದೃಷ್ಟಿನಾಶಕ್ಕೆ ಸದ್ಯದ ಕಾರಣ ಏನು ಎನ್ನುವುದು ಸಾಧುವಿಗೆ ಮನದಟ್ಟಾಯಿತು.

"ದೃಷ್ಟಿಯ ವಿಚಾರ ಹಾಗಿರಲಿ. ಮೈಗೆ ಅಂಟಿದ ರೋಗಕ್ಕೆ ಏನಾದರೂ ಚಿಕಿತ್ಸೆ ಮಾಡಿಸಿದೆಯೋ"?

"ಇಲ್ಲ. ವೈದ್ಯರಿಗೆ ತಮ್ಮ ಖಾಯಿಲೆ ವಿಚಾರ ಹೇಳಿಕೊಳ್ಳುವುದಕ್ಕೆ ಅವರು ಲಜ್ಜೆಪಟ್ಟಿದ್ದಾರೆ. ಸುಮ್ಮನೆ ಹಾಸಿಗೆಯ ಮೇಲೆ ಬಿದ್ದುಕೊಂಡು ನರಳುತ್ತಿದ್ದಾರೆ".

"ಇದು ಸ್ವಯಂಕೃತಾಪರಾಧವಪ್ಪ. ನಾನೇನೂ ಮಾಡುವುದಕ್ಕಾಗುವುದಿಲ್ಲ. ದೈವಸಂಕಲ್ಪ ಹೀಗಿತ್ತು; ಆಯಿತು. ಆದರೆ, ದೈವಸಂಕಲ್ಪ ಎಂದು ಮೈಗೆ ಅಂಟಿದ ರೋಗವನ್ನು ಬಲಿಯಗೊಡಬಾರದು. ಇಂಥಾದ್ದಕ್ಕೆಲ್ಲ ನನ್ನ ಬಳಿ ಮದ್ದಿಲ್ಲ; ನಮ್ಮ ಗುರುಗಳು ಉಪದೇಶ ಮಾಡಿಲ್ಲ, ನಿನ್ನ ಗುರುವಿನಲ್ಲಿ ನಿನಗೆ ಭಕ್ತಿಯಿದ್ದ ಪಕ್ಷದಲ್ಲಿ, ನಾನು ಹೇಳಿದ ಹಾಗೆ ಕೇಳು; ಮೊದಲು ಅವರಿಗೆ ತಕ್ಕ ವೈದ್ಯ ಚಿಕಿತ್ಸೆಗೆ ಏರ್ಪಾಡು ಮಾಡು; ಅವರು ತಂದುಕೊಂಡ ರೋಗಕ್ಕೆ ದೃಷ್ಟಿ ಹೋದದ್ದು ಆಶ್ಚರ್ಯವಲ್ಲ, ಬುದ್ಧಿ ಕೆಡದೆ ಇದ್ದದ್ದು ಪುಣ್ಯ. ರೋಗ ಗುಣವಾದರೆ ಕಣ್ಣು ಮತ್ತೆ ಬಂದರೂ ಬಂದೀತು ! ನಾನು ಹೀಗೆ ಹೇಳಿದೆನೆಂದು ನಿಮ್ಮ ಗುರುಗಳ ಪತ್ನಿಗೆ ಹೇಳು. ಆಕೆಗೆ ದೇವರು ಒಳ್ಳೆಯದು ಮಾಡಲಿ"

"ಅಪ್ಪಣೆಯಾದರೆ ನಾನು ಹೋಗಿಬರುತ್ತೇನೆ".

"ಒಳ್ಳೆಯದು"

ನೆಮ್ಮದಿಗೆ ನೆಲೆಯಾಗಿದ್ದ ಶಿವರಾಮಯ್ಯನ ಮನೆ ಇಂದು ಬೀಡಾಗಿತ್ತು. ಪಾಠಗಳೆಲ್ಲಾ ತಾವಾಗಿಯೇ ಕಳಚಿಕೊಂಡಿದ್ದುವು. ಶಂಕರನ್ನೂ ಸುಲಭವಾಗಿ ಕಳಚಿಕೊಳ್ಳಬಹುದಾಗಿತ್ತು; ಆದರೆ ಕಳಚಿಕೊಳ್ಳಲಿಲ್ಲ. ಗುರುಸೇವೆಗಾಗಿ ಸೊಂಟಕಟ್ಟಿ ನಿಂತ. ಅವರಿವರ ಕೈಕಾಲು ಕಟ್ಟಿ ಕೆಲವರು ಶ್ರೀಮಂತರ ಮನೆಗಳಲ್ಲಿ ಸಂಗೀತ ಪಾಠಗಳನ್ನು ದೊರಕಿಸಿಕೊಂಡ. ಅವರಿಂದ ಮುಂಗಡವಾಗಿ ಹಣ ಬೇಡಿ, ವೈದ್ಯ ಚಿಕಿತ್ಸೆಗೆ ಏರ್ಪಾಡು ಮಾಡಿದ, ವೈದ್ಯರು ಮನೆಗೇ ಬಂದು ಕೆಲವು ಇಂಜೆಕ್ಷನ್‌ಗಳನ್ನು ಕೊಟ್ಟ ಮೇಲೆ, ಉಲ್ಬಣವಾಗುವುದರಲ್ಲಿದ್ದ ಶಿವರಾಮಯ್ಯನ ಕೆಟ್ಟ

ಖಾಯಿಲೆ ಗುಣಮುಖವಾಗುತ್ತ ಬಂದಿತು. ಆದರೆ ಮತ್ತೆ ಕಣ್ಣು ಬರುವ ಸೂಚನೆ ಸ್ವಲ್ಪವೂ ಕಂಡುಬರಲಿಲ್ಲ. ಕೆಲವಾರು ತಿಂಗಳುಗಳಲ್ಲಿ ಶಿವರಾಮಯ್ಯನ ಖಾಯಿಲೆ ಸಂಪೂರ್ಣವಾಗಿ ಗುಣವಾಗಿತ್ತು. ಒಳಗೂ ಹೊರಗೂ ತಿರುಗಾಡುವ ಮಟ್ಟಿಗಾಗಿತ್ತು. ಆದರೆ ಕಣ್ಣು ಮಾತ್ರ ಬರಲೇ ಇಲ್ಲ. ಕೈಗೆ ಕೋಲೂ, ಕಣ್ಣಿಗೆ ಬಣ್ಣದ ಗಾಜಿನ ಕನ್ನಡಕವೂ ಮತ್ತೆ ಬಂದಿದ್ದುವು. ಮತ್ತೆ ಕೆಲವು ಶಿಷ್ಯರು ದೊರೆತು, ಶಿವರಾಮಯ್ಯ ತನ್ನ ವಿದ್ಯೆಯಿಂದ ಗಳಿಸುವ ಸ್ಥಿತಿಗೆ ಬಂದ. ಇಷ್ಟೆಲ್ಲಾ ಆಗಲು ಒಂದೆರಡು ವರ್ಷವೇ ಹಿಡಿಯಿತು.

ಶಂಕರನಿಗೆ ಯಾರೋ ಹೆಣ್ಣು ಕೊಡಲು ಬಂದಿದ್ದರು. ಅವನು ತನ್ನ ಗುರುಗಳು ಒಪ್ಪಿದರೆ ಆಗಬಹುದು ಎಂದು ಹೆಣ್ಣಿನವರಿಗೆ ಉತ್ತರ ಕೊಟ್ಟಿದ್ದ. ಹೆಣ್ಣಿನ ತಂದೆ ಹೆಣ್ಣನ್ನೂ ಕರೆದುಕೊಂಡು ಒಂದು ದಿನ ಶಿವರಾಮಯ್ಯನ ಮನೆಗೇ ಬಂದು ಮದುವೆಯ ಪ್ರಸ್ತಾಪ ಮಾಡಿದರು. ಕೆಲವು ಪೀಠಿಕೆಯ ಮಾತುಗಳ ಬಳಿಕ, ಹೆಣ್ಣಿನ ತಂದೆ ಹೇಳಿದರು.

"ಶಿವರಾಮಯ್ಯನವರೆ, ನಿಮ್ಮ ಶಿಷ್ಯರಿಗೆ ನಾನು ಹೇಳಿ ಕೇಳಿ ಎಲ್ಲ ಆಯಿತು. 'ನಾನು ತಂದೆ ತಾಯಿಯಿಲ್ಲದ ತಬ್ಬಲಿ, ಮನೆಯಿಲ್ಲ ಮಠವಿಲ್ಲ, ಸಂಪಾದನೆ ಮೊದಲೇ ಇಲ್ಲ. ನಾನು ಒಲ್ಲೆ' ಎನ್ನುತ್ತಾರೆ. ಇನ್ನು ನೀವು ಒಂದು ಮಾತು ಹೇಳಬೇಕು".

ಶಿವರಾಮಯ್ಯ ಶಂಕರನ್ನು ಕುರಿತು ಹೇಳಿದ: "ಶಂಕರಾ, ನೀನು ತಂದೆತಾಯಿ ಇಲ್ಲದ ತಬ್ಬಲಿಯೆ? ನಾನು, ಅವಳು ಏನಾದೆವು ಅಂತ ತಿಳಿದೆ?"

"ನಾನು ಹಾಗೆ ಹೇಳಿದ್ದು ತಪ್ಪಾಯಿತು ಗುರುಗಳೆ, ನನ್ನ ಅಭಿಪ್ರಾಯ ಅದಲ್ಲ. ನನ್ನ ಒಬ್ಬನ ಹೊಟ್ಟೆ ಹೊರೆಯುವುದಕ್ಕೆ ನಿಮ್ಮನ್ನು ಆಶ್ರಯಿಸಿಕೊಂಡಿದ್ದೇನೆ. ಇನ್ನು ಹೆಂಡತಿಯೊಬ್ಬಳನ್ನು ಹೇಗೆ ಸಾಕಲಿ ಅಂತ?" ಶಂಕರ ವಿನಯದಿಂದ ಹೇಳಿದ.

"ಅಪ್ಪಾ, ಕಷ್ಟಕಾಲದಲ್ಲಿ ನಮ್ಮಿಬ್ಬರನ್ನು ಕಾಪಾಡಿದವನಿಗೆ ಹೆಂಡತಿಯನ್ನು ಸಾಕುವುದು ಕಷ್ಟವೆ?"

"ಹಾಗಲ್ಲ, ಗುರುಗಳೆ. ನಾನು ಮದುವೆಯಾದರೆ, ಇವತ್ತಲ್ಲ ನಾಳೆ ನಿಮ್ಮನ್ನು ಬಿಟ್ಟು ಹೋಗಬೇಕಾಗುತ್ತದೆ, ಅದಕ್ಕೋಸ್ಕರ..."

"ಓಹೋ, ಅದಕ್ಕೋಸ್ಕರ ಚಿಂತೆ ಮಾಡುತ್ತೀದ್ದೀಯೋ ಹೋಗುವ ಯೋಚನೆ ಏಕೆ ಮಾಡುತ್ತೀ? ನೀನು ಮದುವೆಯಾದರೆ ನಿನ್ನ ಹೆಂಡತಿ ನಮ್ಮ ಮನೆಗೆ ಸೊಸೆಯಾಗಿ ಬರುತ್ತಾಳೆ".

"ನೀವು ಹೇಳಿದ್ದು ನಾನು ಒಪ್ಪಿದೆ, ಶಿವರಾಮಯ್ಯನವರೆ. ಈಗ ಯಾವ ಕೊರೆತೆಯೂ ಇಲ್ಲದ ಹಾಗಾಯಿತು. ನಿಮ್ಮ ಶಿಷ್ಯರು 'ಹೆಣ್ಣು ಒಪ್ಪಿದ್ದೇನೆ' ಅಂತ ಒಂದು ಮಾತು ಹೇಳಿಬಿಟ್ಟರೆ, ಎಲ್ಲ ಒಪ್ಪಿದ ಹಾಗೆಯ ಅಲ್ಲವೆ?" ಎಂದರು ಹೆಣ್ಣಿನ ತಂದೆ ಹಿಗ್ಗುತ್ತ.

"ನೀವು ಒಪ್ಪಿದರೆ ಆಗಲಿ ಗುರುಗಳೆ" ಎಂದ ಶಂಕರ.

"ಓಹೋ, ನಾನು ಒಪ್ಪಬೇಕೋ, ಅಂದರೆ ನಾನು ಹೆಣ್ಣನ್ನು ನೋಡಿ ಒಪ್ಪಬೇಕು ಎಂದಾಯಿತು. ಏಕಾಗಬಾರದು? ಆಗಲಿ. ನನ್ನ ಪರವಾಗಿ ಅವಳೇ ನೋಡಿ ಒಪ್ಪಿಬಿಡಲಿ. ಅವಳೇ ನನ್ನ ಕಣ್ಣು" ಎಂದ ಶಿವರಾಮಯ್ಯ, ಹಾಗೆ ಹೇಳಿದಾಗ, ಅವನ ಅಂತರಾಳದಲ್ಲಿ ಅನಿರ್ವಚನೀಯವಾದ ಆನಂದವೊಂದು ಮೂಡಿ ಮಂದಹಾಸವಾಗಿ ಅವನ ಮುಖದಲ್ಲಿ ಅರಳಿತು.

"ಪಾಪ, ಪಾಪ, ಅವರು ಹೇಗೆ ನೋಡಿಯಾರು? ಅವರು ಹೇಳಿದ್ದು ಸರಿ. ನೀವು ನೋಡಿ ನಿಮಗೆ ಒಪ್ಪಿಗೆಯಾದರೆ ತಿಳಿಸಿಬಿಡಿ. ಎಲ್ಲರೂ ಒಪ್ಪಿದ ಹಾಗಾಯಿತು" ಎಂದು ಹೆಣ್ಣಿನ ತಂದೆ ಶಾರದಮ್ಮನ ಕಡೆಗೆ ತಿರುಗಿ ಕೇಳಿದರು.

ಇದುವರೆಗೂ ಮೌನವಾಗಿ ಬಾಗಿಲು ಬಳಿ ನಿಂತಿದ್ದ ಶಾರದಮ್ಮ ಮೆಲ್ಲಗೆ ನುಡಿದಳು: "ಯಾರ ಕಣ್ಣಿಗೆ ಹೇಗೆ ಕಂಡರೇನು ಶಂಕರಾ ! ಮುಖ್ಯವಾಗಿ, ಮನಸೊಪ್ಪಬೇಕು. ನಿನ್ನ ಮನಸ್ಸಿಗೆ ಒಪ್ಪಿ ಬಂದರೆ, ಒಪ್ಪಿಕೊಂಡುಬಿಡು".

"ಅವಳು ಹೇಳಿದ್ದು ಸರಿ, ಶಂಕರ. ಹೊರಗಿನ ಕಣ್ಣು ಮೋಸ ಮಾಡುತ್ತೆ; ನನಗೆ ದೃಷ್ಟಿಲಾಭವಾದದ್ದು ಕಣ್ಣು ಬಂದಾಗ ಅಲ್ಲ, ಅದು ಹೋದಾಗ ಶಂಕರಾ. ಅವಳು ಮನಃಪೂರ್ವಕವಾಗಿ ಒಪ್ಪಿಗೆ ಕೊಟ್ಟಿದ್ದಾಳೆ. ನೀನು ಒಪ್ಪಿಕೊ" ಎಂದ ಶಿವರಾಮಯ್ಯ.

"ಆಗಬಹುದು" ಎಂದ ಶಂಕರ.

***

## ಕವಿ ಪರಿಚಯ

**ಮೈಸೂರು ವೆಂಕಟದಾಸಪ್ಪ ಸೀತಾರಾಮಯ್ಯ ಅಥವಾ ಎಂ. ವಿ. ಸೀ** ಸಂಪಾದಕ ಮತ್ತು ಅನುವಾದಕ. ಅರವತ್ತು ವರ್ಷಗಳ ವೃತ್ತಿಜೀವನದ ಮೂಲಕ, ಅವರು ಸಣ್ಣ ಕಥೆಗಳು, ಕವನಗಳು, ಕಾದಂಬರಿಗಳು ಮತ್ತು ನಾಟಕಗಳನ್ನು ವ್ಯಾಪಿಸಿರುವ 100 ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದರು. ಅವರ ಕೆಲವು ಗಮನಾರ್ಹ ಕೃತಿಗಳಲ್ಲಿ ಶ್ರೀ ವಿಜಯನ ಕವಿರಾಜಮಾರ್ಗ, ಶಾಸ್ತ್ರೀಯ ಕವಿರಾಜಮಾರ್ಗದ ಪುನರಾವರ್ತನೆ, ಉದಯಾದಿತ್ಯಲಂಕಾರ, ಕನ್ನಡ ಕಾವ್ಯಶಾಸ್ತ್ರದ ಕೃತಿ, ಮತ್ತು ಪ್ರಾಚೀನ ಕನ್ನಡ ಭಾಷಾ ವ್ಯಾಕರಣದ ಇತರ ಕೃತಿಗಳು ಸೇರಿವೆ.

ಸೀತಾರಾಮಯ್ಯ ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಗಳಿಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಪ್ರಶಸ್ತಿಗೆ ಭಾಜನರಾಗಿದ್ದರು. ಅವರು ಬೆಂಗಳೂರು ಮೂಲದ ಬಿ.ಎಂ.ಶ್ರೀ ಪ್ರತಿಷ್ಠಾನ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು, ಇದು ಕನ್ನಡ ಭಾಷಾ ಸಾಹಿತ್ಯ ಅಧ್ಯಯನವನ್ನು ಮುಂದುವರಿಸುವತ್ತ ಗಮನಹರಿಸಿದೆ.

ಉದಯಾದಿತ್ಯಲಂಕಾರಂ (1970), ಪ್ರಾಚೀನ ಕನ್ನಡ ವ್ಯಾಕರಣಗಳು (1980), ಭಾರತದ ಕಾವ್ಯಮೀಮಾಂಸೆಗೆ ಕನ್ನಡ ಕವಿಗಳ ಕೊಡುಗೆ (1970), ಶಾಸ್ತ್ರ ಸಾಹಿತ್ಯ (1975), ಸಾಮಾನ್ಯನಿಗೆ ಸಾಹಿತ್ಯಚರಿತ್ರೆ ಗಂಡು (1975), ಶ್ರೀವಿಜಯ ಕೃತ ಕವಿರಾಜಮಾರ್ಗ (1968),

ಕನ್ನಡ ಸಾಹಿತ್ಯದಲ್ಲಿ ಶಾಂತರಸ (1970), ಧೀಮಂತ: ಡಿ.ವಿ.ಗುಂಡಪ್ಪ ಅವರ ಜೀವನ ಚರಿತ್ರೆ (1988), ಅರ್ಚನಾ, ಶ್ರೀ ಕೃಷ್ಣ ಲೀಲಾಮೃತ, ಕೀರ್ತನಾ ಕುಸುಮಾಂಜಲಿ.

## 2. ಮೋಚಿ

– ಭಾರತೀಪ್ರಿಯ

"ಬನ್ನಿ, ಮಾಸಾಮಿ."
"ಏನೋ, ಸರಿಯಾಗಿ...?"
"ವೂ.. ಬುಡಿ ನನ್ನೊಡ್ಯ, ಕಳ್ಳಿ"

"ಎಷ್ಟು ಕೊಡ್ಬೇಕೋ?"

"ಐ.. ಕೆಲ್ಸ ನೋಡ್ಬಾರ್ದಾ ಶಿವ?"

"ಅದಿಲ್ಲ, ನೀ ಹೇಳೋ."

"ತಮ್ಸಂತೋಸ ಬುದ್ದೀ."
"ಲೇ ಲೇ... ಆ ಕೊನೆ ಸ್ವಲ್ಪ ಚೆನ್ನಾಗಿ..."
"ವೊಸಿ ಸುಮ್ಕಿರಿ ದ್ಯಾವ್ರೇ."

"ಅಲ್ಲಿ. ಅದ್ನೋಡು... ಎಡಗಡೆ."

"ವೂ ಸರಿಯಾಯ್ತು. ನನ್ನೊಡ್ಯಾ"

"ಎಷ್ಟು ಕೊಡಲೋ?"

"ನಾ ಯೋಳ್ಳಿಲ್ವಾ ಬುದ್ದೀ?"

"ಏನೂ?"

"ತಮ್ಮ ಖುಸಿ ಅಂತ."
"ಹ್ಞ... ತೊಗೋ."
"ಸರಿ ಶಿವ, ನಾ ಕೇಳ್ಬ್ಯಾಕಾ ಇದ್ಕೆ?"

"ನಿನ್ನ ಹೆಸರೇನೋ?"

"ಯಾಕ್ಬುದ್ದೀ?"

"ಅಲ್ಲ, ಕೇಳಿದೆ ಸುಮ್ಮೆ."

"ರಾಜಾ ಬುದ್ದೀ, ರಾಜಾಂತ."

* * * * * * * * * * *

ಇದ್ದಕಿದ್ದ ಹಾಗೆ ಎಚ್ಚರವಾಯಿತು. ಗಾಬರಿಯಾಗಿ ಕಣ್ಣುಬಿಟ್ಟು ನೋಡಿದೆ. ಪಕ್ಕದಲ್ಲಿ ಕಮಲು! ಮುಸಿಮುಸಿ ನಗುತ್ತ–

"ಅದೇನೂಂದ್ರೆ?"

"ಏನು?"

"ಅಲ್ಲಾ, ನೀವಂತಾ ಇದ್ದದ್ದು?"

"ಏನೇ ಹಾಗಂದ್ರೇ?"

"ಅಲ್ಲಾ, ಅದೇನೋ ರಾಜ, ದೊರೆ ಅಂತ..."

"ನಿಂಗೆ ಬುದ್ದಿ ಇಲ್ಲ ಅಂತ –ಮಲಕ್ಕೊ ಸುಮ್ಮನೆ.

"ಇಲ್ಲಾಂದ್ರೆ ನಿಜವಾಗಲೂ."

"ನೋಡಿದಿಯಾ, ಅವಳ್ನ..."

"ಸರಿ, ಕನವರಿಸಿಕೊಳ್ಳುತಾ ಇದ್ದಿರಿ ಅಂದ್ರೇ..."

"ಹೋಗೇ, ಹುಚ್ಚುಚ್ಚಾಗಿ ಮಾತಾಡಬೇಡ."

ಕಮಲು ಸುಮ್ಮನೆ ಮಲಗಿಕೊಂಡಳು. ನನಗೆ ಪುನಃ ನಿದ್ದೆ ಹತ್ತಲಿಲ್ಲ. ಹಾಗೇ ಕಣ್ಣು ಮುಚ್ಚಿಕೊಂಡೆ... ಹಿಂದಿನ ಸಂಜೆ ನಾನು ಜೋಡು ಹೋಲಿಸುವುದಕ್ಕೆ ಹೋದದ್ದು ಥಟ್ಟನೆ ಜ್ಞಾಪಕಕ್ಕೆ ಬಂದಿತು. ನಾನು ಹೋಗುತ್ತಿದ್ದಾಗ ದಾರಿಯಲ್ಲಿ ಮೋಚಿಯೊಬ್ಬನು ಕೆಲಸವಿಲ್ಲದೆ ಕುಳಿತು ತನ್ನ ಸಣ್ಣ ಹಾರೆಗಳನ್ನು ಒಂದಕ್ಕೊಂದು ಬಡಿದು ತಾಳದಂತೆ ಕುಟ್ಟುತ್ತ ಅದೇನೋ ಕುರುಕಲು ಪದ ಹೇಳಿಕೊಳ್ಳುತ್ತಿದ್ದದ್ದು; ನನ್ನನ್ನು ಕಂಡು ನಗುತ್ತ ಹಾರೆಗಳನ್ನು ಕೆಳಗಿಟ್ಟು, "ಬನ್ನಿ ಮಾಸಾಮಿ" ಎಂದದ್ದು; ಕಡೆಗೆ ನಾನು ಕೊಟ್ಟ ಅರ್ಧಾಣೆಯಲ್ಲೇ ತೃಪ್ತನಾದದ್ದು... ಎಲ್ಲಾ ಜ್ಞಾಪಕಕ್ಕೆ ಬಂದಿತು. ಒಂದು ಸಲ ಪಕ್ಕಕ್ಕೆ ಹೊರಳಿ ನೋಡಿದೆ. ನನ್ನವಳು ಗಾಢ ನಿದ್ರೆಯಲ್ಲಿದ್ದಂತೆ ತೋರಿದಳು. ಅದೆಂಥ ಚೆಲುವು! ತಲೆಯೆತ್ತಿ ಅವಳ ಮುಖವನ್ನೇ ದಿಟ್ಟಿಸಿ ನೋಡಿದೆ. ನನ್ನನ್ನು ಮಾತಾಡಿಸಿದಾಗ ಅರಳಿದ್ದ ನಗೆಮುಗುಳು ಇನ್ನೂ ಅವಳ ತುಟಿಯಮೇಲೆ ಲಾಸ್ಯವಾಡುವಂತಿತ್ತು. ದೂರ ಸರಿದು ಒಂದು ಪಕ್ಕಕ್ಕೆ ತಿರುಗಿ ಕಣ್ಣು ಮುಚ್ಚಿಕೊಂಡೆ. ಅದೇ ಚಿತ್ರ; ತಾಳ ಕುಟ್ಟುತ್ತಿದ್ದ, ಕೆದರಿದ ತಲೆಯ, ಬಿಸಿಲಿನಿಂದ ಬೆಂದ ಮುಖದ ರಾಚ! ಅವನದೇ ನಗು ಮೊಗ. ಪುನಃ ನನ್ನನ್ನೇ ನೋಡುತ್ತಾ "ಬನ್ನಿ ಮಾಸಾಮಿ" ಎಂದ ಹಾಗಾಯಿತು!

ರಾಚ ತನ್ನ ಮನೆಯಲ್ಲಿ ಮುರುಕು ಗುಡಿಸಿಲಿನಲ್ಲಿ ಮಲಗಿರಬಹುದಲ್ಲವೆ? ಅವನು, ಅವನ ಹೆಂಡತಿ, ಅವನ ಮಕ್ಕಳು?.. ನನ್ನ ಹಾಗೆ? ಛೇ, ಎಲ್ಲಿಯ ಸಾಮ್ಯ! ನಾನೆಲ್ಲಿ ಅವನೆಲ್ಲಿ? ಜೋಡು ಹೊಲಿಯುವ ರಾಚ ಅವನು... ಇಲ್ಲಿ ನಾನು ನನ್ನವಳು. ಸೊಗಸಾದ ಮನೆ; ಮೆತ್ತನೆಯ ಹಾಸುಗೆ; ಬೇಕು ಬೇಕಾದ ಪದಾರ್ಥಗಳು. ಇದು ಅವನಿಗಿಲ್ಲ – ಇಲ್ಲ; ಹೌದು – ಅವನ ಕರ್ಮ. ನಾನೆಂಥ ಹುಚ್ಚ! ಅವನು ಯಾರು? ನಾನು ಯಾರು?.... ಬಡತನ...! ಬಡತನ... ಅವನು ಕೇಳಿಕೊಂಡು ಬಂದದ್ದು... ಅವನ ಜೀವನ ಅದು... ಕೇವಲ ವಿಧಿಲಿಖಿತ. ಆದರೂ... ಆದರೂ... ಇದೇನು? ನನ್ನ ಕಣ್ಣಿಂದ ನೀರು!... ಕಂಬನಿಯನ್ನು ಚಿಮ್ಮಿದೆ; ಬಗೆ ಹರಿಯಲಿಲ್ಲ.

2

ಬೆಳಗ್ಗೆ ಬಹಳ ಹೊತ್ತಾಗಿ ಎದ್ದೆ. ಅವೊತ್ತೆಲ್ಲಾ ಅದೇಕೋ ಮನಸ್ಸೇ ಸಮಾಧಾನ ಸ್ಥಿತಿಯಲ್ಲಿರಲಿಲ್ಲ. ಏನು ಮಾಡುವುದಕ್ಕೂ ಬೇಸರ. ಹೊತ್ತು ಹೇಗೆ ನೂಕಿದೆನೋ ಅರಿಯೆ. ಸಾಯಂಕಾಲ ದೀಪ ಹೊತ್ತಿಸುವ ಹೊತ್ತಿಗೆ ಅದೇ ಸ್ಥಳಕ್ಕೆ ಹೋದೆ, ರಾಚನನ್ನು ಹುಡುಕಿಕೊಂಡು. ದೂರದಲ್ಲಿ ಅವನು ಕುಳಿತಿದ್ದುದನ್ನು ಕಂಡು ಬೇಕೆಂತಲೇ ಜೋಡಿನ ಒಂದು ಕೊನೆಯನ್ನು ಕಿತ್ತುಬಿಟ್ಟೆ. ರಾಚ ಹರಡಿದ ಚರ್ಮದ ಚೂರುಗಳ ನಡುವೆ, ಒಂದು ಹರಕಲು ಗೋಣಿಚೀಲದ ಮೇಲೆ ಕುಳಿತದ್ದ.

"ರಾಚ!" ಎಂದೆ.

"ಆ.. ಏನು ಮಾಸಾಮಿ?"

"ಕಿತ್ತುಹೋಯಿತು..."

"ಐ, ಇದ್ಯಾನಾ ಬುದ್ದಿ... ನೆನ್ನೆ ವೊಲ್ದಿದ್ದಲ್ವಾ?"

"ಹೌದು; ಇವತ್ತೂ ಹೊಲಿ!"

ರಾಚ ನನ್ನ ಮುಖವನ್ನು ಕ್ಷಣಕಾಲ ದಿಟ್ಟಿಸಿ ನೋಡಿದ. ಕೈಲಿದ್ದ ಹಾರೆಗಳನ್ನು ಮೆಲ್ಲನೆ ಕೆಳಗಿಟ್ಟು ನಾನು ಅವನ ಮುಂದೆ ಬಿಟ್ಟಿದ್ದ ಜೋಡನ್ನು ತೆಗೆದುಕೊಂಡು ಹಿಂದೆ ಮುಂದೆ ತಿರುಗಿಸಿ ನೋಡಿ ನೀರಿನಲ್ಲಿ ಅದ್ದಿದ. ತಲೆ ಬಗ್ಗಿಸಿಕೊಂಡು ಮಂಡಿಯ ಮೇಲೆ ಕೈ ಊರಿಕೊಂಡು ಹೊಲಿಯತೊಡಗಿದ. ಹೊಲಿಗೆಯೆಲ್ಲಾ ಆದಮೇಲೆ–

"ಏನು ಕೊಡ್ಬೇಕೋ?" ಎಂದೆ.

"ಯಾನು ಬ್ಯಾಡಿ ಬುದ್ದೀ" ಎಂದ ನಗುತ್ತ, ಸ್ವಲ್ಪ ಹೊತ್ತು ನೀರವ. ನಾನು ಮೆಲ್ಲನೆ ಜೇಬಿಗೆ ಕೈಹಾಕಿ ಒಂದು ರೂಪಾಯಿ ಈಚೆಗೆ ತೆಗೆದೆ. ಅವನು ಅದನ್ನು ಕಂಡು ಆಶ್ಚರ್ಯಚಕಿತನಾಗಿ ನನ್ನನ್ನೇ ದಿಟ್ಟಿಸಿ ನೋಡಿದ–

"ತೊಗೋ, ರಾಚ."

"............"

"ಏನೂ ದಿಗಿಲುಪಡಬೇಡ, ತೊಗೋ."

"ಬ್ಯಾಡಿ ಬುದ್ದೀ."

"ಯಾಕೋ?"

"ತಾವು ದ್ಯಾವ್ರಂಗೆ ನನ್ನೊಡ್ಯಾ, ತಮ್ತಾವ ಇಸ್ಕಳ್ಳದಾ?"

"ಪರ್ವಾ ಇಲ್ಲ, ತೊಗೋ."

"ಇದ್ಯಾಕ್ಬುದ್ದೀ?"

"ನೀ ತೊಗೋ, ನಾ ಹೇಳುತೀನಿ."

ರಾಚ ಕೈಯೊಡ್ಡಿ ನಟ್ಟದಿಟ್ಟಿಯಿಂದ ನನ್ನ ಮುಖವನ್ನೇ ನೋಡಿದ. "ಏಳು. ನನ್ನ ಹಿಂದೆ ಬಾ" ಎಂದೆ. ಅವನು ಎದ್ದು ಭಯಗೊಂಡವನಂತೆ ಒಂದು ಹೆಜ್ಜೆ ಹಿಮ್ಮೆಟ್ಟಿ ನಿಂತ. ನನಗೆ ಅರ್ಥವಾಯಿತು. "ಹೆದರಬೇಡ ರಾಚ, ನಿನಗೇನೂ ಮಾಡೊಲ್ಲ" ಎಂದೆ. ಅವನು ತನ್ನ ಹರಕಲು ಗೋಣಿಚೀಲವನ್ನು ಹೆಗಲಮೇಲೆ ಹಾಕಿಕೊಂಡು ಕೊಡತಿ, ಮೊಳೆ ಮುಂತಾದುವನ್ನು ಒಂದು ಚರ್ಮದ ಚೀಲದಲ್ಲಿ ಹಾಕಿ ಹೆಗಲಿಗೇರಿಸಿದ. ನನ್ನೊಡನೆ ಬರುವುದಕ್ಕೆ ಸಿದ್ಧನಾದ. ಒಂದು ಸಲ ಸುತ್ತ ತಿರುಗಿ ನೋಡಿದೆ. ಕತ್ತಲು; ಮಸಕು, ಮಸಕು; ಎತ್ತೆತ್ತಲೂ ಮೌನ; ಚಳಿಗಾಳಿ.

"ರಾಚ" ಎಂದೆ.

"ಏನ್ಬುದ್ದೀ?"

"ನಿನ್ನ ಮನೆ ಎಲ್ಲಿ?"

"ಅಲ್ಲಿ ದೂರ್ದಲ್ಲಿ, ಆ ಒಂಗೇ ಮರಗಳ ತಟಾಸಿ."

'ಮನೆಯೋ ಗುಡಿಸಿಲೋ?"

"ಗುಡ್ಲು ಬುದ್ದೀ ಗುಡ್ಲು."

"ನೀನು ನಡಿ ಮುಂದೆ. ಅಲ್ಲಿಗೆ ಬರುತೀನಿ."

"ಅದ್ಯಾಕ್ನನ್ನೊಡ್ಯಾ?"

"ನೀನೇನೂ ಹೆದರಬೇಡ ರಾಚ, ನಿನ್ನ ಮನೆ ನೋಡಬೇಕು, ಅಷ್ಟೆ"

"ಬ್ಯಾಡಿ ದ್ಯಾವ್ರೇ."

"ಯಾಕೋ?"

"ತಾವು.. ನೋಡಾರ್ದು ಬುದ್ದೀ ಗರೀಬನ್ಗುಡ್ಲು."

"ನೋಡಬಹುದು, ಎಲ್ಲಾ ನೋಡಬಹುದು."

"ಏನ್ಮಾಡ್ಬೇಕ್ಬುದ್ದೀ... ಅಲ್ಲಿ?"

ನಾನು ಉತ್ತರ ಕೊಡಲಿಲ್ಲ. ಸ್ವಲ್ಪ ಹೊತ್ತು ಬಿಟ್ಟು

"ರಾಚ" ಎಂದೆ.

"ಜ್ಞ "

"ನಿನಗೆಷ್ಟು ಮಕ್ಕಳು?"

"ಅವೆ ಬುದ್ದೀ. ನಾಕೈದವೆ."

"ನಿನ್ನ ಹೆಂಡತಿ?"

"ಇಲ್ಲಾ ದ್ಯಾವೆ, ಓದ್ಲು."

"ಏನು ಹಾಗಂದ್ರೆ?"

"ಓದ್ದು ಬುದ್ದೀ, ತೀಕೊರ್ಂಡು."

"ಎಷ್ಟು ವರ್ಷವಾಯಿತು?"

"ಬಾಳ ದೂರ ಬುದ್ದಿ – ಗೆಪ್ತಿ ಇಲ್ಲ."

" ಮಕ್ಕಳು ದೊಡ್ಡವೋ ಚಿಕ್ಕವೋ?"

"ಪಿಳ್ಳೆಗಳು ನನ್ನೊಡ್ಯಾ."

ಮಾತಾಡುತ್ತ ದೂರದಲ್ಲಿ ಒಂದು ಸಣ್ಣ ಮುರುಕು ಗುಡಿಸಿಲನ್ನು ಕಂಡೆ. ರಾಚ ಬೇಗ ಬೇಗನೆ ನಡೆದ. ಹತ್ತು ಮಾರು ಮುಂದೆ ಹೋದವನು ನಿಂತು ಹಿಂತಿರುಗಿ "ಅದೇ ಬುದ್ದೀ ನನ್ಮನೆ" ಎಂದ. ಏರುತ್ತಿದ್ದ ಕತ್ತಲಲ್ಲಿ ಆ ಗುಡಿಸಿಲನ್ನು ನೋಡಿದೆ. ಬಹಳ ಹಳೆಯದು. ಮುಂಭಾಗವೆಲ್ಲಾ ಕುಸಿದು ಬೀಳುವಂತಿತ್ತು. ಒಂದು ಚಾಪೆಯ ತಡಿಕೆ ಬಾಗಿಲಾಗಿತ್ತು. ಒಳಗಣಿಂದ ಮಂಕು ಬೆಳಕು ಹೊರಚೆಲ್ಲುತ್ತಿತ್ತು. ರಾಚ ಮುಂದೆ ಹೋಗಿ ಬಾಗಿಲನ್ನು ಹಿಂದಕ್ಕೆ ನೂಕಿದ. ಒಳಗಣಿಂದ ಹರಕಲು ಬಟ್ಟೆಯ, ಬಡತನ ನಿರಾಶೆಗಳು ಮೂರ್ತಿವೆತ್ತಂತಿದ್ದ ಮಕ್ಕಳೆರಡು ಹೊರಗೆ ಬಂದುವು. ರಾಚ ಮಕ್ಕಳ ಕಡೆ ತಿರುಗದೆ ನನ್ನನ್ನು ನೋಡಿ –

"ತಾವ್ಮಂದ್ಬರ್‍ಬಾರ್ದು ಬುದ್ದೀ" ಎಂದ.

"ಯಾಕೋ?"

"ನಾನು ಮೋಚಿ ಬುದ್ದಿ... ಎಡಕೈನವ."

ಸ್ವಲ್ಪ ಹೊತ್ತು ನಿಂತು ಯೋಚಿಸಿದೆ; ಮನಸ್ಸು ಬರಿದಾಗಿತ್ತು.

"ರಾಚ" ಎಂದೆ.

"ಎನ್ಬುದ್ದೀ?"

"ಇದು ತಗೋ."

"ಅದ್ಯಾನ್ಬುದ್ದೀ?"

"ತೊಗೋ, ದುಡ್ಡು ತೊಗೋ, ನಿನ್ನ ಮಕ್ಕಳಿಗೆ...",

"ಬ್ಯಾಡಿ, ನನ್ನೊಡ್ಯಾ."

"ಇಲ್ಲ, ನೀ ತೊಗೋ."

ಸ್ವಲ್ಪ ಹೊತ್ತು ನೀರವ, ರಾಚ ನಿಷ್ಪಂದನಯನಗಳಿಂದ ನನ್ನನ್ನೇ ನೋಡುತ್ತ

"ಇವೊತ್ತು ಬ್ಯಾಡಿ ದ್ಯಾವ್ರೇ, ನಾಳೆ ಕೊಡಿ" ಎಂದ.

ಆ ಧ್ವನಿಯಿಂದ ಅವನು ರುದ್ಧಕಂಠನಾಗಿದ್ದಂತೆ ಬೋಧೆಯಾಯಿತು. ನಾನು ಒಂದೆರಡು ಹೆಜ್ಜೆ ಹಿಂದಿಟ್ಟು ನಿಧಾನವಾಗಿ ಹಿಂದೆ ತಿರುಗಿದೆ.

"ಕಾವಳ ಯೆಚ್ಚು ಬುದ್ದೀ, ನಾನೂ ಒಂದಿಗೇ ಬತ್ತೀನಿ" ಎಂದ.

"ಏನೂ ಬೇಡ, ನೀನು ಯಾಕೆ?" ಎಂದೆ.

ಆದರೆ ಅವನು ಕೇಳಲಿಲ್ಲ.

3

ಮಾರನೆಯ ಸಂಜೆ ಕತ್ತಲೇರುತ್ತಿದ್ದಂತೆ ರಾಚನನ್ನು ಹುಡುಕಿಕೊಂಡು ಅವನು ಕುಳಿತುಕೊಳ್ಳುವ ಸ್ಥಳಕ್ಕೆ ಹೋದೆ. ಅಲ್ಲಿ ಅವನಿರಲಿಲ್ಲ. ಹಾಗೇ ಅವನ ಗುಡಿಸಿಲ ಕಡೆ ತಿರುಗಿದೆ. ಒಬ್ಬನೇ ನಡೆದೆ. ದಾರಿ ಗೊತ್ತಿತ್ತು. ಗುಡಿಸಿಲೂ ಕಾಣಿಸಿತು. ಆದರೆ ಒಳಗಣಿಂದ ಬೆಳಕು ಬರುತ್ತಿರಲಿಲ್ಲ– "ರಾಚ" ಎಂದೆ ಗಟ್ಟಿಯಾಗಿ ಉತ್ತರವಿಲ್ಲ. ಇನ್ನೂ ಮುಂದೆ ಹೋಗಿ ಬಾಗಿಲ ಹತ್ತಿರ ನಿಂತುಕೊಂಡೆ. ಪುನಃ ಕೂಗಿದೆ... ನೀರವ, ನೀರವ, ಗುಡಿಸಲ ಬಾಗಿಲು ತೆರೆದಿತ್ತು. ಕೂಗುತ್ತ ಒಳಗೆ ಕಾಲಿಟ್ಟೆ. ತಣ್ಣನೆಯ ಗಾಳಿ ಒಳಗಣಿಂದ ಸುತ್ತಿಕೊಂಡು ಸುತ್ತಿಕೊಂಡು ಹೊರಗೆ ಬಂದಿತು. ಗುಡಿಸಲ ಒಳಗೆ–ಹೊರಗೆ ಎತ್ತಲೂ ಕತ್ತಲು ತಾನೇತಾನಾಗಿತ್ತು. ಸುತ್ತ ಹುಡುಕಿದೆ; ಕೂಗಿದೆ; ನಿಶ್ಯಬ್ದ! "ರಾ..ಚ ಇ...ಲ್ಲ.." ಎಂದುಕೊಂಡೆ. ಹೊರಗೆ ಬಂದೆ. ಬಾಗಿಲಲ್ಲಿ ನಿಂತು ತಲೆಯೆತ್ತಿ ಮೇಲೆ ನೋಡಿದೆ. ಮನದೊಳಗೇ "ರಾಚ ಇಲ್ಲ" ಎಂದು ನುಡಿದೆ. ಬಹುದೂರದ ಅನಂತ ಅತೀತ ಕಾಲಿಮಾಮಯ ಶೂನ್ಯದಿಂದ– "ರಾ..ಚ... ಇ..ಲ್ಲ" ಎಂದು ಮಾರ್ದನಿ ಬಂದಂತಾಯಿತು. ಒಂದು ಗಳಿಗೆಯವರೆಗೆ ನೀರವವಾಗಿ, ನಿಷ್ಪಂದಯನಗಳಿಂದ ಆ ಶೂನ್ಯವನ್ನೇ ನೋಡುತ್ತ ಶಿಲಾಮೂರ್ತಿಯಂತೆ ನಿಂತೆ.

ರಾತ್ರಿ ಹಾಸುಗೆಯ ಮೇಲೆ ಮಲಗಿಕೊಂಡಾಗ ಕಮಲು ಬಂದು ಹತ್ತಿರ ನಿಂತುಕೊಂಡಳು. ಬಾಹ್ಯಶೂನ್ಯನಾದಂತಿದ್ದೆ. ಹೃದಯದಾಳದಲ್ಲಿ ಅಂದು ಸಂಜೆ ನಡೆದುದೆಲ್ಲಾ ಗಾಢತರವಾಗಿ ಚಿತ್ರಿತವಾಗಿತ್ತು. ಸಹಿಸಲಾರದೆ ಅಳಿಸುವುದಕ್ಕೆ ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ. ನಾನೆಂಥ ಹುಚ್ಚ! ಅವನ ಕೈ ಹಿಡಿದೆತ್ತಬೇಕೆಂದು ಬಗೆದೆ. ಅವನ ದಾರಿದ್ರದ ಅಳಲನ್ನು ತಣಿಸುವುದಕ್ಕೆ ತವಕಗೊಂಡೆ. ನಾನು ಯಾರು ಅದನ್ನು ಮಾಡುವುದಕ್ಕೆ? ನನ್ನಿಂದ ತನಗೆ ತೊಂದರೆಯಾಗಬಹುದೆಂದು ಅವನು ಭಾವಿಸಿದನೆ? ನಾನು ಅದನ್ನು ಕನಸಿನಲ್ಲಿಯೂ ಎಣಿಸಿರಲಿಲ್ಲವಲ್ಲ. ಇದು ಅವನಿಗೆ ತಿಳಿಯದೆ ಹೋಯಿತೆ? ತಿಳಿದರೂ ಬೇಡವಾಯಿತೊ?

ಹೌದು; ಬೇಡವಾಯಿತು. ನನ್ನ ಉಪಕಾರದ ಹೊರೆ ಅವನಿಗೆ ಬೇಡವಾಯಿತು. ಅವನದು ನಿಃಸ್ವಾರ್ಥಜೀವನ; ದುಡಿದು ಹೊಟ್ಟೆಹೊರೆಯುವ ಬಗೆ; ನೊಂದು ನೋವನ್ನು ನುಂಗಿಕೊಳ್ಳುವ ಸ್ವಭಾವ. ಅವನ ಬಗೆಗೆ ನಾನು ತುಂಬ ವ್ಯತಿರಿಕ್ತವಾಗಿ ನಡೆದೆ. ನನ್ನಿಂದ ಅವನು ಈ ಸ್ಥಳವನ್ನು ಬಿಟ್ಟು ಹೊರಟುಹೋದ.. ಎಲ್ಲಿಗೆ?

ಈ ನೆನಹು ಹೃದಯವನ್ನು ಹಿಂಡಿಬಿಟ್ಟಿತು. ಬಹುದೂರದಲ್ಲೆಲ್ಲೋ ತುಮುಲ ವಿಪ್ಲವವಾಗುತ್ತಿರುವಂತೆ ಬೋಧೆಯಾಗುತ್ತಿತ್ತು. ಮನಸ್ಸು ಕ್ಷತವಿಕ್ಷತವಾಗಿತ್ತು. ಮೆಲ್ಲನೆ ಕಣ್ಣೆರೆದೆ. ಕಮಲು ಮಂಚವನ್ನು ಒರಗಿ ನಿಂತು ಬಾಷ್ಪಪೂರಿತಲೋಚನಳಾಗಿದ್ದಳು. ಅಂತಃಕರಣ ಕರಗಿತು. ಒಳಗೊಂದು ಚಿತ್ರ; ಹೊರಗೊಂದು ಚಿತ್ರ. ಒಂದಕ್ಕೊಂದು ವಿರುದ್ಧ. ಅವಳನ್ನು ನೋಡುತ್ತ ಮೆಲ್ಲನೆ ನುಡಿದೆ:

"ಅವನ ಲೀಲೆ!"

***

**ಲೇಖಕರ ಪರಿಚಯ**

## ಭಾರತೀಪ್ರಿಯ (1911 – 1982)

ಮೈಸೂರಿನಲ್ಲಿ ಜನಿಸಿದ ಲೇಖಕ ಎಸ್ ವೆಂಕಟರಾವ್ ಅವರ ಕಾವ್ಯನಾಮ 'ಭಾರತೀಪ್ರಿಯ' ಕನ್ನಡ ಪ್ರಿಕಾರಂಗದಲ್ಲಿ ಸುಮಾರು 45 ವರ್ಷಗಳ ಕಾಲ ತಮ್ಮನ್ನು ತೊಡಗಿಸಿಕೊಂಡಿದ್ದ ಭಾರತೀಪ್ರಿಯರು ಜನವಾಣಿ, ಮಾತೃಭೂಮಿ, ಪೌರವಾಣಿ, ದೇಶಬಂಧು, ತಾಯಿ ನಾಡು, ಸಂಯುಕ್ತ ಕರ್ನಾಟಕ, ಉತ್ಥಾನ ಪತ್ರಿಕೆಗಳಲ್ಲಿ ಗಮನೀಯ ಸೇವೆ ಸಲ್ಲಿಸಿದ್ದರು. 'ರುದ್ರವೀಣೆ' ಇವರ ಕಥಾ ಸಂಕಲನ. ರಾಗಿಣಿ, ರೂಪಸರ್ಪಿಣಿ, ಚತುರ ಚಾಣಕ್ಯ –

ಕಾದಂಬರಿಗಳು. ಮಾಗಿ ಬಂದರೆ, ನಿರ್ದೋಷಿಗಳು ಹಾಗು ಮಂಜಿನ ಮುಸುಕು ಇವು ಇಂಗ್ಲೀಷ್ ಕನ್ನಡಕ್ಕೆ ಅನುವಾದಿಸಿದ ಕಾದಂಬರಿಗಳಾಗಿದೆ. ಕನ್ನಡದ ಪ್ರಗತಿಶೀಲ ಕಥಾ ಸಂದರ್ಭದ ಜನಪ್ರಿಯ ಕಥೆಗಳಲ್ಲಿ 'ಮೋಚಿ'ಯೂ ಒಂದಾಗಿದೆ.

# 3. ನಾಲ್ಕು ಮೊಳ ಭೂಮಿ

– ಚದುರಂಗ

ಅಂಚೆಯ ಪೇದೆ. "ಮನಿಯಾರ್ಡರ್, ಸಾರ್" ಎಂದು ಕೂಗಿದುದು ಅವನಿಗೆ ಕೇಳಿಸಲಿಲ್ಲ. ಅವನ ಮನಸ್ಸು ಬಿಚ್ಚಿದ ಕಾಗದದ ಸುರುಳಿಯಾಗಿತ್ತು. ಮನೆಯಲ್ಲಿ ಹೆಂಡತಿಯಿಲ್ಲ; ಹೃದಯದೊಳಗೆ ನಲಿವಿಲ್ಲ. ವ್ಯಾಜ್ಯದ ಕಟ್ಟುಗಳನ್ನು ಮೇಜಿನ ಮೇಲೆ ಹರಡಿಕೊಂಡೇ ಅವನು ಯೋಚನೆಯ ವ್ಯೂಹದೊಳಗೆ ಸಿಕ್ಕಿದ್ದ. 'ಹಾಳು ಕೆಲಸ. ಇದಕ್ಕೆಂದಿಗೆ ಕೊನೆ?' ಎಂದು ಬೇಸರದ ಒಳದನಿ ಕೂಗಿ ಕೇಳುತ್ತಿತ್ತು. 'ವ್ಯಾಜ್ಯ, ವ್ಯಾಜ್ಯ, ವ್ಯಾಜ್ಯ...' ಈ ಈ ವ್ಯಾಜ್ಯಗಳಿಗೆ ಮುಕ್ತಾಯವೇ ಇಲ್ಲವೆ? – ಬೆಳಗಾಯಿತೆಂದರೆ ಕೋರ್ಟು, ಕಚೇರಿ ಈ ವ್ಯವಹಾರಗಳಲ್ಲೇ ಜೋಕಾಲಿಯಾಡುವುದೆಂದರೆ ಬದುಕಿಗೆ ಯಾವ ಸೊಗಸು? ಎಂದು ಅಂತರ್ಯ ತರ್ಕದ ತುರಿಮಣೆಯ ಮೇಲೆ ಗಾಸಿಗೊಂಡಿತ್ತು.

ಮನಿಯಾರ್ಡರ್, ಸಾರ್

"ನಾಲ್ಕು ಮೊಳ ಭೂಮಿ.. ನಾಲ್ವೇ ನಾಲ್ಕು ಮೊಳ ಭೂಮಿಗಾಗಿ ಎಂಥೆಂಥ ಕಲಹ ಗಳು, ಎಂಥೆಂಥ ಅಕೃತ್ಯಗಳು ನಡೆಯುತ್ತವೆ! ಮಾನವನ ಸುಗುಣಗಳು ಕರಗಿಹೋಗಿ ಸ್ವಾರ್ಥದ ಹುಚ್ಚುಕಳ್ಳಿ ತನಗೆ ತಾನಾಗಿ ಬೆಳೆಯುತ್ತದೆ... ಸ್ವಾರ್ಥ! ಭೂಮಿಯ ಹಂಬಲ!!... ನ್ಯಾಯಾಲಯಕ್ಕೆ ಬರುವ ವ್ಯಾಜ್ಯಗಳಲ್ಲಿ ಹೆಚ್ಚಿನ ಸಂಖ್ಯೆ ಭೂಮಿಗೆ ಸಂಬಂಧಪಟ್ಟವು.... ಭೂಮಿ – ಭೂಮಿ – ಭೂಮಿ... ಎಂಥ ಹುಚ್ಚು?

"ಮನಿಯಾರ್ಡರ್, ಸಾರ್"

ಈಗಲೀಗ ಪೇದೆಯ ಸ್ವರ ಸ್ಪಷ್ಟವಾಗಿ ಕೇಳಬಂದಿತು. ಕುಳಿತಲ್ಲಿಯೇ ಬಾಗಿದ ಬೆನ್ನು ನೇರವಾಯಿತು. ಮನಿಯಾರ್ಡರ್!... ಎಲ್ಲಿಂದ ಬಂದಿದೆ ಈ ಮನಿಯಾರ್ಡರ್?

ಎದ್ದು ಹೋಗಿ ಬಾಗಿಲನ್ನು ತೆರೆದ. ಮುಖವನ್ನು ಅಂಟವಾಳದ ಕಾಯಿಯ ಹಾಗೆ ಸೊಟ್ಟಗೆ ಮಾಡಿಕೊಂಡು ಅಂಚೆಪೇದೆ ಮನಿಯಾರ್ಡರ್ ಫಾರ್ಮನ್ನು ಮುಂದೆ ಹಿಡಿಯುತ್ತ ಅಮ್ಮಾವರು ಇದ್ದಾರೆಯೇ, ಸಾರ್?" ಎಂದ.

ಸೋಜಿಗದ ತೆರೆಯ ಮೇಲೆ ನಡೆದಂತಾಯಿತು. ತನ್ನ ಹೆಂಡತಿಗೆ ಮನಿಯಾರ್ಡರ್ – ಅವಳಿಗೆಲ್ಲಿಂದ ಬಂದಿದೆ?

"ಇಲ್ಲವೇ, ಸಾರ್?"

"ಇಲ್ಲ ಅವರು ತೌರಿಗೆ ಹೋಗಿದಾರೆ"

"ಯಾವಾಗ ಬರ್ತ್ತಾರೆ, ಸಾರ್?" "ನಾಳೆ ಬರ್ತೀನಿ ಅಂತ ಪತ್ರ ಬರೆದಿದಾರಪ್ಪ."

"ಬರುವುದು ಖಂಡಿತವೇ, ಸಾರ್"

"ಬಹುಶಃ ತಪ್ಪಲಾರದು."

"ಹಾಗಿದ್ದರೆ ಇದನ್ನು ನಾಡಿದ್ದು ತರ್ತ್ತೇನೆ, ಸಾರ್?"

"ಆಗಲಿ" ಎಂದವನು, ಪೇದೆ ನಾಲ್ಕು ಹೆಜ್ಜೆ ಹೋಗುವುದರೊಳಗೆ, ಏನೋ ಯೋಚಿಸಿ ಕೊಂಡು, ಚಪ್ಪಾಳೆ ತಟ್ಟಿ, "ಪೋಸ್ಟ್‌ಮನ್ – " ಒಂದು ಕರೆದೆ. ಪೇದೆ ಮುಖವನ್ನು ಮತ್ತೂ ಕಸಿವಿಸಿ ಮಾಡಿಕೊಂಡೇ ಬಂದ. "ಎಲ್ಲಯ್ಯಾ – ಆ ಮನಿಯಾರ್ಡರ್ ಫಾರಮ್ಮನ್ನ ಇಲ್ಲಿ ಕೊಡು. ಅದು ಎಲ್ಲಿಂದ ಬಂದಿದೆ ಎಂತ ಓದಿ ನೋಡಿಕೊಳೇನೆ." ಪೇದೆ ಫಾರಂನ್ನು ಬೇಸರದಿಂದಲೇ ತೆಗೆದುಕೊಟ್ಟ. ಸೂಕ್ಷ್ಮವಾಗಿ ಫಾರ್ಮಿನ ಅಕ್ಷರಗಳ ಮೇಲೆ ಅವನ ದೃಷ್ಟಿ ಓಡಾಡಿತು. ಒಡನೆಯೇ ಅವನಿಗೆ ವಿಚಿತ್ರವೆನಿಸಿತು. ತನ್ನ ಹೆಂಡತಿಗೆ ಮನಿ ಯಾರ್ಡರ್ ಬಂದಿದೆ. ಎಂದು ಮೊದಲೇ ಅವನಿಗೆ ಆಶ್ಚರ್ಯವಾಗಿತ್ತು. ಆ ಮನಿ ಯಾರ್ಡರ್ ಎಲ್ಲಿಂದ, ಏತಕ್ಕಾಗಿ ಬಂದಿದೆ ಎಂದು ತಿಳಿದ ಮೇಲಂತೂ ಅವನು ಮೂಕ – ನಾದ. ಸೋಜಿಗದ ಅಲೆ

ಅವನನ್ನು ತನ್ನ ಮೇಲೆ ನಿಲ್ಲಿಸಿ, ಎತ್ತರ, ಎತ್ತರ ಎತ್ತಿಕೊಂಡು ಹೋಗಿ ಶಿಖರಾಗ್ರಕ್ಕೆ ಎಸೆದಂತಾಯಿತು–

ಹೆಂಡತಿಗೆ ಮನಿಯಾರ್ಡರ್ ಬಂದಿದೆ. ಇನ್ನೂರು ರೂಪಾಯಿಗಳಷ್ಟು ಭಾರಿ ಮೊಬಲಗು ಅದೂ ಅವಳು ಬರೆದ ಒಂದು ಕಥೆಗಾಗಿ!!

ಪೇದೆ ಹೊರಟು ಹೋಗಿ ಎಷ್ಟೋ ವೇಳೆ ಕಳೆದಮೇಲೂ ಆತ ಹಾಗೆಯೇ ಸ್ತಂಭೀ ಭೂತನಾಗಿ ನಿಂತಿದ್ದ... ಒಂದು ಕಥೆಗೆ ಇನ್ನೂರು ರೂಪಾಯಿ... ಅದೂ ಕನ್ನಡ ಭಾಷೆ ಯಲ್ಲಿ ತಾನು ಕೋರ್ಟಿನಲ್ಲಿ ಐದು ಕೇಸುಗಳನ್ನು ನಡೆಸಿದರೂ ಅಷ್ಟು ಹಣ ಗಳಿಕೆ ಯಾಗದು... ಕಾಲ ಸಹಜವಾಗಿಯೂ ಅತಿ ತೀವ್ರಗತಿಯಲ್ಲಿ ಪರಿವರ್ತನೆಗೊಳ್ಳುತ್ತಿದೆ. " ಕೆಲವು ವರ್ಷಗಳ ಹಿಂದೆ ಕನ್ನಡ, ತಾಯಿಯಿಲ್ಲದ ತಬ್ಬಲಿ. ಅದನ್ನು ಕೇಳುವವರೇ ಇಲ್ಲ. ಒಂದು ಸಾವಿರ ಪ್ರತಿಗಳು ಖರ್ಜಾಗಬೇಕಾದರೆ ಏಳೆಂಟು ವರ್ಷ. ಆದರೆ ಇಂದು? ನಾಲ್ಕೈದು ಸಾವಿರ ಪ್ರತಿಗಳನ್ನು ಅಚ್ಚು ಹಾಕುವ ಸಾಹಸವನ್ನು ಕನ್ನಡ ಪ್ರಕಟನಕಾರರು ಮಾಡುತ್ತಿದಾರಂತೆ. ಅಷ್ಟು ಪ್ರತಿಗಳೂ ಹೆಚ್ಚೆಂದರೆ ಎರಡು ವರ್ಷಗಳಲ್ಲಿ ಪೂರ್ತಿಯಾಗಿ ಮಾರಾಟವಾಗುತ್ತವಂತೆ... ಹಿಂದೆಯೂ ಕಥಾಸ್ಪರ್ಧೆಗಳು ನಡೆಯುತ್ತಿದ್ದವು. ಅವುಗಳ ಪ್ರಥಮ ಬಹುಮಾನ ಉಪಚಾರದ ಬೆನ್ನು ತಟ್ಟುವ ಮಾತು. ಆದರೆ ಈಗ ನಡೆಯುವ ಕಥಾಸ್ಪರ್ಧೆಗಳು ನೂರಾರು ರೂಪಾಯಿಗಳ ಬಹುಮಾನವನ್ನು ಕೊಡುವ ಯೋಗ್ಯತೆ ಪಡೆದಿವೆ.

ಯಾರೋ ಕಕ್ಷಿಗಾರರು ಬಂದರು. ಅವರುಗಳ ಅಹವಾಲು ಕೇಳಿ ತಿಳಿದುಕೊಂಡು, ಅವರಿಗೆ ಆಡಬೇಕಾದ ಮಾತು ಆಡಿ. ಅವರನ್ನು ಕಳಿಸಿಕೊಟ್ಟು, ಬಾಕಿಯಾಗಿದ್ದ ಇನ್ನೂ ಕೆಲವು ರೆಕಾರ್ಡುಗಳನ್ನು ಪರಿಶೀಲಿಸಿ, ಊಟಕ್ಕೆದ್ದ. ಹೋಟಲಿನ ಊಟ ಏಕೋ ರುಚಿಸಲಿಲ್ಲ. ಪ್ರಾಯಶಃ ಮಾರನೆಯ ದಿನವೇ ಬರಲಿದ್ದ ನಲ್ಲೆಯ ಆಗಮನ ಇದಕ್ಕೆ ಕಾರಣವಿರಬಹುದು. ಅಂತೂ ಹೇಗೋ ಊಟದ ಶಾಸ್ತ್ರ ಮುಗಿಸಿ ಕೋಣೆಗೆ ನಡೆದ. ಆ ದಿನ ಕೋರ್ಟಿಗೆ ರಜವಿದ್ದುದರಿಂದ ವಿರಾಮ, ಮುಗಿಯದ ರಸ್ತೆಯಾಗಿತ್ತು. ಹೋಗಿ ಮಂಚದ ಮೇಲೆ

ಉರುಳಿಕೊಂಡ. ಮತ್ತೊಮ್ಮೆ ಕೆಲಸವಿಲ್ಲದ ಮನಸ್ಸು ಆಲೋಚನೆಯ ಸರೋವರದಲ್ಲಿ ಈಜತೊಡಗಿತು...ತನ್ನ ಹೆಂಡತಿಗೆ ಬಹುಮಾನ! ಕಥಾಸ್ಪರ್ಧೆಯಲ್ಲಿ ಅವಳು ಬರೆದ ಒಂದು ಕಥೆಗೆ ಪ್ರಥಮ ಸ್ಥಾನ!!... ಅವನ ಹೃದಯ ಮುದಗೊಂಡು ಅರಳಿದ ಹೂವಾಯಿತು. ಚಿತ್ರ ನೆನಪಿನ ಕುದುರೆಯೇರಿ ಹೊರಟಿತು... ಹಿಂದೆ ವಿವಾಹದ ತರುಣದಲ್ಲಿ, ಅವರಿಬ್ಬರ ನಡುವೆಯೂ ನಡೆದ ಒಂದು ಸಂಗತಿಯ ಸ್ಮೃತಿ ಹಠಾತ್ತನೆ ಜಾಗ್ರತವಾಯಿತು–

ಒಂದು ಮಧ್ಯಾಹ್ನ – ಹೀಗೇ ಕೋರ್ಟಿಗೆ ರಜವಿದ್ದ ಒಂದು ದಿನ ಮಧ್ಯಾಹ್ನ. ಭೋಜನ ಮುಗಿಸಿ ತಾನು ನಿದ್ದೆಹೋಗಿದ್ದೆ. ಮಗ್ಗಲು ಸೇರಿದ್ದ ತನ್ನಾಕೆಯೂ ತನ್ನಂತೆ ನಿದ್ದೆ ಮಾಡುವಳೆಂದು ಯೋಚಿಸಿದ್ದ. ಆದರೆ ನಿದ್ದೆಯ ಆಲಿಂಗನದಿಂದ ಮುಕ್ತನಾಗಿ ಎದ್ದಾಗ ಮಡದಿ ಪಕ್ಕದಲ್ಲಿಲ್ಲದುದನ್ನು ಕಂಡು ಚಕಿತನಾದ. ನಿಶ್ಯಬ್ದವಾಗಿ ಎದ್ದು ಮನೆಯನ್ನೆಲ್ಲಾ ಆರಸಿದ. ಅವಳು ತನ್ನ ಕೋಣೆಯಲ್ಲಿ ಏನನ್ನೋ ಬರೆಯುವುದರಲ್ಲಿ ತಲ್ಲೀನಳಾಗಿದ್ದಳು. ಅವನ ವಿಸ್ಮಯಕ್ಕೆ ಉಪ್ಪರಿಗೆ ಬಂದಂತಾಯಿತು. ನಿದ್ದೆ ಮಾಡದೆ ಅವಳು ಏನನ್ನು ಬರೆಯುತಿರಬಹುದು?... ತಂದೆಗೋ, ಅಣ್ಣನಿಗೋ ಪತ್ರ ಬರೆಯುತ್ತಿರಬಹುದೇ?

ಅವನು ಕೆಮ್ಮಿದ ಸದ್ದು ಕೇಳಿ ಅವಳು ಹೊರಳಿ ನೋಡಿದಳು. ಭಾವಸಮಾಧಿಯಿಂದ ಎಚ್ಚೆತ್ತವರಂತೆ ಇತ್ತು ಅವಳ ನೋಟ. ಸಮೀಪಕ್ಕೆ ಹೋಗಿ, "ನೀನೆಲ್ಲಿ ಹೊರಟು ಹೋದೆಯೋ ಎಂತ ದಿಗಿಲಾಗಿತ್ತು" ಎಂದು ನಕ್ಕ. ಅವಳ ಕಣ್ಣುಗಳೂ ನಗುತ್ತಿದ್ದವು.

"ನೀವೂ ಸರಿ. ನಾನೆಲ್ಲಿ ಹೋಗ್ತೇನೆ?"

“ಅದೇನು ಬರೀತಾ ಇದೀಯೆ? – ಪತ್ರವೋ?

“ಹೌದು. ಪ್ರೇಮಪತ್ರ" ಎನ್ನುತ್ತ ತುಂಟತನವನ್ನು ಕುಡಿಗಣ್ಣಿನಿಂದ ಚೆಲ್ಲಿದಳು. “ಪ್ರೇಮಪತ್ರ!–ಯಾರಿಗೆ ಎಂತ ಕೇಳಬಹುದೆ?” ಅವನೂ ಚೆಲ್ಲಾಟವಾಡುತ್ತಿದ್ದ.

ಅದಕ್ಕುತ್ತರವಾಗಿ, ಬಲಹಸ್ತದ ಬೆರಳುಗಳನ್ನು ಮೋಹಕವಾಗಿ ತಿರುವುತ್ತ, ಸಾಭಿನಯ ಪೂರ್ವಕ ಅವಳು,

"ಯಾ–ರಿ–ಗೊ..." ಎಂದಳು. ಆದರೊಡನೆ ಕಂಡೂ ಕಾಣದಂತೆ ನಕ್ಕಾಗ ಅವಳ ಶರೀರ ಸುಳಿಗಾಳಿಗೆ ಬಳಕುವ ತಾವರೆಯ ದಂಟಿನಂತೆ ಅಲುಗಾಡಿತು.

ಅವಳ ಹುಡುಗಾಟಿಕೆ ಅವನಿಗೆ ಯಾವಾಗಲೂ ಪ್ರಿಯವಾದುದು. ಅದಕ್ಕೆ ಉಚಿತವಾದ ಪ್ರತಿಫಲ ಕೊಟ್ಟು, ಏನು ಬರೆದಿರಬಹುದೆಂದು ಮೇಜಿನ ಮೇಲೆ ಬಾಗಿ ನೋಡಿದ.

"ಏನಿದು?... ಪ್ರೇಮಪತ್ರ–ಸಣ್ಣ ಕಥೆ –... ಓ. ಕಥೆ ಬರೀತಾ ಇದೀಯೋ! ಯಾವಾಗಿನಿಂದ ಹಿಡೀತು ಈ ಗೀಳು ನಿನಗೆ?"

“ಯಾಕ್ರೀ ಗೀಳು ಅಂತೀರಾ? ಕಥೆ ಬರೆಯೋದು ಗೀಳೆ?"

“ಒಂದು ಅರ್ಥದಲ್ಲಿ ಅದು ಗೀಳೇ?”

"ಹೇಗೆ?"

“ಕಥೆ ಎಂದರೆ ಕಗ್ಗ. ಅದರಿಂದ ಯಾರಿಗೆ ಪ್ರಯೋಜನ?”

"ಪ್ರಯೋಜನವಾಗುವುದಾದರೆ ಒಂದು ಕೆಲಸ ಮಾಡಬೇಕು. ಇಲ್ಲದಿದ್ದರೆ ಕೂಡದು ಎಂತಲೋ ನಿಮ್ಮ ಅಭಿಪ್ರಾಯ?”

"ಹೌದು, ನಿಷ್ಪ್ರಯೋಜಕ ಕಾರ್ಯದಲ್ಲಿ ನನಗೆ ಆಸಕ್ತಿಯಿಲ್ಲ."

"ಭೇಷ್, ಭೇಷ್ ವಕೀಲಿವೃತ್ತಿಗೆ ಯುಕ್ತವಾದ ರೀತೀಲಿ ಮಾತು ಆಡ್ತಾ ಇದ್ದೀರ. ಪರವಾಗಿಲ್ಲ."

"ನೋಡಿದೆಯಾ, ನನ್ನ ಮಾತನ್ನ ನೀನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. "ಕಥೆಗೂ ಜೀವನಕ್ಕೂ ನಿಕಟ ಸಂಬಂಧ ಬೇಡವೆ. ನೀನೇ ಹೇಳು. ವಿಪುಲವಾಗಿ ಈಗ ಪ್ರಕಟವಾಗ್ತಾ ಇರುವ ಕಥೆಗಳು ಕನ್ನಡ ಜನಪದದ ಬದುಕಿನ ಕೊಂಚವನ್ನಾದರೂ ಮುಟ್ಟಿವೆಯೇ... ಅದಕ್ಕಾಗಿ ಅಷ್ಟು ಕಠೋರವಾಗಿ ನುಡಿದೆ. ಅಷ್ಟೆ...ನನ್ನ ರಾಣಿ ಕಥೆ ಬರೀತಾಳೆ ಅಂದರೆ ನನಗೆ ಸಂತೋಷವಲ್ಲವೆ? ನಿನಗೆ ನಿಜ ಹೇಳಬೇಕಾದರೆ ನಾನು ಹೆಮ್ಮೆಯಿಂದ ಹಿಗ್ಗಿ ಹೋಗಿದೇನೆ."

ಅವನ ರಾಣಿಯ ಆ ಮಾತು ಕೇಳಿ ಹಿಗ್ಗಿ ಹೋದಳು.

"ಆದರೆ ನನ್ನ ರಾಣಿಯೂ ಇತರರಂತೆ ಕಗ್ಗ ಬರೆದರೆ ನನಗೆ ಪ್ರಿಯವಾಗದು. ಬಾಳನ್ನು ಕಣ್ಣು ತೆರೆದು ನೋಡಿ, ವಿವೇಚಿಸಿ, ಅರ್ಥಮಾಡಿಕೊಂಡು ಬರೆಯಬೇಕು. ಆಗ – ಕಥೆ ಜೊಳ್ಳಾಗುವುದಿಲ್ಲ; ನಾದವಿಲ್ಲದ ಕೊಳಲಾಗುವುದಿಲ್ಲ – ಎಂತ ನನ್ನ ಭಾವನೆ."

"ನವಾಬರ ಆಜ್ಞೆಯನ್ನು ಪಾಲಿಸಲು ಪ್ರಯತ್ನಿಸುತ್ತೇನೆ" ಎನ್ನುವಾಗ ಅವಳ ಮೇಲ್ತುಟಿಯ ಅಂಚು ಹುಸಿನಗೆಯಿಂದ ಬಿಲ್ಲಿನಂತೆ ಮೇಲೆದ್ದು ಬಾಗಿತು.

ಈ ಸಂಗತಿ ನಡೆದಮೇಲೆ ವಕೀಲಿವೃತ್ತಿ ಅವನ ಕಾಲವನ್ನೂ ಬುದ್ದಿಯನ್ನೂ ಪೂರ್ಣ ವಾಗಿ ಉಪಯೋಗಿಸಿಕೊಂಡಿತ್ತು. ಹೆಂಡತಿ ಬರೆಯುತ್ತಿದ್ದಾಳೆಯೇ? ಏನನ್ನು ಕುರಿತು ಬರೆಯುತ್ತಿದ್ದಾಳೆ? ಅವಳು ಬರೆಯುತ್ತಿರುವ ಕಥೆಗಳಲ್ಲಿ ಏನಾದರೂ ನಾವೀನ್ಯತೆ ಮತ್ತು ಸತ್ಯಗಳು ಅಡಕವಾಗಿವೆಯೇ? – ಎಂದು ವಿಚಾರ ಮಾಡಿ ಅರಿಯಲು ಅವನಿಗೆ ಬಿಡುವೇ ಸಿಗಲಿಲ್ಲ...

ಯೋಚಿಸುತ್ತ ಯೋಚಿಸುತ್ತ, ಅವನು ಒಂದು ಮಗ್ಗಲಿನಿಂದ ಇನ್ನೊಂದು ಮಗ್ಗಲಿಗೆ ಹೊರಳಿದ. ಏನು ಮಾಡಿದರೂ ನಿದ್ದೆ ಬಾರದು. ಕೊನೆಗೆ ಬೇಸತ್ತು ಯಾವುದಾದರೊಂದು ಪುಸ್ತಕವನ್ನೋದುವುದೆಂದು ಎದ್ದು ಹೋಗಿ ಪುಸ್ತಕದ ಕಪಾಟಿಗೆ ಕೈಯಿಟ್ಟು ತನಗೆ ಪ್ರಿಯನಾದ

ಜಿನ್ ಕ್ರಿಸ್‌ಟೋಫ್ ಕಾದಂಬರಿಯನ್ನು ತೆಗೆದುಕೊಂಡು ಹತ್ತಿರವೇ ಇದ್ದ ವಿರಾಮ ಕುರ್ಚಿಯ ಮೇಲೆ ಕುಳಿತ. ಆ ಹೊತ್ತಗೆಯ ಹಾಳೆಗಳನ್ನು ಮಗುಚಿದಾಗ ಒಳಗೆ ಮಡಿಸಿಟ್ಟ ಕೆಲವು ಹಾಳೆಗಳು ಕಂಡವು. ಕುತೂಹಲದಿಂದ ಆ ಹಾಳೆಗಳನ್ನು ಬಿಚ್ಚಿ ನೋಡಿದ. ಅವು ತನ್ನ ಹೆಂಡತಿ ಬರೆದ ಕಥೆಯ ಮನುಸ್ಮೃತಿಯಾಗಿತ್ತು. ಕಥೆಯ ಹೆಸರು : "ನಾಲ್ಕು ಮೊಳ ಭೂಮಿ."

ಸಿಳ್ಳುಹಾಕಿ ಅವಳ ಕಥೆಯನ್ನು ಓದಲಾರಂಭಿಸಿದ–

ವೈಶಾಖದ ಸುಡುಬಿಸಿಲಿನ ಕಥಕ್ಕಳಿ, ಅದರ ರಿಂಗಣಗುಣಿತಕ್ಕೆ ಮರದ ಎಲೆಗಳು ಹಸುರು ಹಣ್ಣಾಗುತ್ತಿವೆ. ಆ ಹೊತ್ತಿನಲ್ಲಿ ಕಾಳಿಂಗಯ್ಯ ಶಿರಬಾಗಿ ಉಳುತ್ತಿದ್ದಾನೆ. ಪಕ್ಕ ದಲ್ಲೇ ಅವನನ್ನು ಅನುಸರಿಸಿ ಹೆಜ್ಜೆ ಹಾಕುವ ಅವನ ಪಾವನ ನೆರಳು. ಆ ಬೆಳಕಿನ ಝಳಕ್ಕೆ ಕಣ್ಣು ಕತ್ತಲಾಗುವುದು. ದೇಹಕ್ಕಂತೂ ಬೆವರಿನ ಕಾವೇರೀಸ್ನಾನ.

ನೇಗಿಲು ನಿಧಾನವಾಗಿ ಆದರೆ ದೃಢವಾಗಿ – ಭೂಮಿಗೆ 'ತೆರೆ'ಯ ಬೈತಲೆಗಳನ್ನು ತೆಗೆಯುತ್ತ ಸಾಗಿದೆ. ನೇಗಿಲ ನೊಗಕ್ಕೆ ಕಟ್ಟಿದ ಬಿಳಿ ಬಣ್ಣದ ಎತ್ತುಗಳು, ಅವನ ಕಪ್ಪು ದೇಹ, ಆ ದೇಹಕ್ಕೆ ಸುತ್ತಿದ ಬಿಳಿಯ ತುಂಡು ಪಂಚೆ, 'ಪೇಟ', ಹಿಂಬದಿಗಿದ್ದ ಗುಡ್ಡದ ಸಾಲಿನ ಮಂಕು ನೀಲಿ – ಹಸುರಿನ ಹಿನ್ನೆಲೆಯಲ್ಲಿ ಆ ನೋಟವನ್ನು ದೂರದಿಂದ ನೋಡು ವವರಿಗೆ, ಚಿತ್ರಪಟದಂತೆ – ಪಟದೊಳಗಿನ ಚಿತ್ರ ಚಲಿಸುವಂತೆ – ಅದು ತೋರುವುದು. ಆದರೆ ಆ ದೃಶ್ಯದ ಒಂದು ಅಂಶವಾಗಿದ್ದ ಕಾಳಿಂಗಯ್ಯನಿಗೆ ಮಾತ್ರ ಅದರ ಸೌಂದರ್ಯ ವನ್ನು ಸವಿಯುವುದು ಸಾಧ್ಯವಿರಲಿಲ್ಲ. ಅವನು ಕೇವಲ ಉಳುವ ಯಂತ್ರವಾಗಿದ್ದ. ಸೂರ್ಯನೇಳುವ ಮುನ್ನ ಎದ್ದು 'ಆರು' ಕಟ್ಟಿದನೆಂದರೆ ಹೊಲದಿಂದ ಅವನು ಮತ್ತೆ ಮನೆಗೆ ಮರಳುವುದು ಸಾಯಂಕಾಲವೇ!

ಕಾಳಿಂಗಯ್ಯ ಉಳುತ್ತಲೇ ಇದ್ದ. ಅವನ ಮನಸ್ಸು ಸಾಧಾರಣವಾಗಿ ನೀರಿಲ್ಲದ ಮಡಕೆಯಂತೆ ಬರಿದು. ಆದರೆ ಇಂದು ಮಾತ್ರ ಆ ಮಡಕೆಯಲ್ಲಿ ಚಿಂತೆಯ ಸಣ್ಣ ಕಲ್ಲೊಂದು ಬಿದ್ದಿದೆ. ಚಿಂತೆಗೆ ಕಾರಣ– ನಾಲ್ಕು ಮೊಳ ಭೂಮಿ.

ನಾಲ್ಕು ಮೊಳ ಭೂಮಿ!

ಕೇವಲ ನಾಲ್ಕೆ ನಾಲ್ಕು ಮೊಳ ಭೂಮಿ!!

ಕಾಳಿಂಗಯ್ಯನ ಮುದಿಗಣ್ಣುಗಳ ದೃಷ್ಟಿ ಯಾವುದೋ ಅವ್ಯಕ್ತ ಭೀತಿಯ ಆಗರವಾದಂತಿತ್ತು.

ತಾನು ಚಿಕ್ಕವನಾಗಿದ್ದಾಗ ಹರಿಕಥೆ ದಾಸನೊಬ್ಬ ನೆರೆಹಳ್ಳಿಯಲ್ಲಿ ಕಥೆ ಮಾಡುತ್ತಿ ದ್ದಾಗ ನುಡಿದಿದ್ದ : ಭೂಮಿಗೆ ವಿಪರೀತವಾಗಿ ಆಸೆಪಡಬೇಡಿ. ಅದರ ದೆಸೆಯಿಂದಲೇ ಕುರುವಂಶ ನಿರ್ನಾಮವಾಯಿತು."

ಅಹುದಲ್ಲವೆ? ಪಾಂಡವರ ಪರವಾಗಿ ಶ್ರೀಕೃಷ್ಣ ಪರಮಾತ್ಮ ಕೊನೆಗೆ ಐದೇ ಐದು ಗ್ರಾಮಗಳನ್ನು ಪಾಂಡವರಿಗೆ ಬಿಟ್ಟುಕೊಟ್ಟರೂ ರಾಜಿಮಾಡಿಸುವುದಾಗಿ ಆಶ್ವಾಸನೆ ಕೊಡಲಿಲ್ಲವೆ? ಆಗಲೂ ಅವಿವೇಕಿ ದುರ್ಯೋಧನ ಸೊಕ್ಕಿನಿಂದ ಐದು ಗ್ರಾಮಗಳ ಮಾತು ಹಾಗಿರಲಿ, ಐದು ಹೆಜ್ಜೆ ಭೂಮಿಯನ್ನೂ ಸಹ ಪಾಂಡವರಿಗೆ ಕೊಡಲಾರೆ' ಎಂದು ಹಟ ಹಿಡಿದು ಸರ್ವನಾಶ ಮಾಡಿಕೊಳ್ಳಲಿಲ್ಲವೆ?

ಹಾಗೆಯೇ ತನ್ನ ವರ್ತನೆಯೂ ಮುಂದಿನ ದಿನಗಳಲ್ಲಿ ಅವಿಚಾರದ ಜಾರುಬಂಡೆಯ ಮೇಲೆ ಹೆಜ್ಜೆಯಿಟ್ಟಿತ್ತು. ಹೌದು, ಕೇವಲ ನಾಲ್ಕು ಮೊಳ ಭೂಮಿಗಾಗಿ, ನಾ ನಾಲ್ಕು ಮೊಳ ಭೂಮಿಗಾಗಿ.

ಕೌರವರ ಕಥೆಯೇನೋ ಎಂದೋ ಮುಗಿಯಿತು. ಆದರೆ ತನ್ನ ಕಥೆ? ಇದರ ಮುಕ್ತಾಯ ಹೇಗೋ? ತಾನುಮಾಡಿದ ಯಃಕಶ್ಚಿತ್ ಕೆಲಸ ಯಾವ ದಂಡವನ್ನು ತೆಗೆದುಕೊಳ್ಳಲಿರುವುದೊ?

ಕಾಳಿಂಗಯ್ಯ ಉಳುತ್ತಲೇ ಇದ್ದ. ನೇಗಿಲು ಮುಂದುವರಿದಂತೆ ಭೂಮಿ ಬಾಯಿ ತೆರೆದಂತಾಗಿ ಎರಡೂ ಪಕ್ಕಕ್ಕೆ ಕೆಂಪು ಮಣ್ಣಿನ ರಾಶಿ ರಾಶಿ ಬೀಳುತ್ತ ಹೋಗುವುದು. ಅವನು ಅದನ್ನು ನೋಡುತ್ತಲೇ ನಡೆದಿದ್ದ. ಓ, ಕುಂಕುಮದಂತಹ ಆ ಮಣ್ಣು. ಅವನ ಕಣ್ಣಿಗೆ ಅದೆಷ್ಟು ಹಿತಕರ! ಅದನ್ನೇ ದಿಟ್ಟಿಸುತ್ತಿದ್ದಂತೆ, ಒಮ್ಮೊಮ್ಮೆ ತನ್ನ ಮನೆಯನ್ನೇ ನಗೆ ಲೋಕವನ್ನೇ ಅವನು ಮರೆಯುತ್ತಿದ್ದುದುಂಟು.

ನಾಲ್ಕು ಮೊಳ ಭೂಮಿ! ಇನ್ನೊಬ್ಬನಿಗೆ ಸೇರಿದ ಭೂಮಿ. ಅದಕ್ಕೆ ತಾನು ಆಸೆಪಟ್ಟಿದ್ದ. ಇನ್ನೊಬ್ಬನ ತೆಂಗಿನಮರದ ಆಸೆಪಟ್ಟಂತೆ (ಅಹಲ್ಯಗೆ ಆಸೆಪಟ್ಟ ಇಂದ್ರ)... ಪಕ್ಕದ ಭೂಮಿ ಹಟ್ಟಿ ದೇವಪ್ಪನದು. ಅದರಲ್ಲಿ ತಾನು ನಾಲ್ಕು ಮೊಳ ಭೂಮಿಯನ್ನು ಶ್ರೀ ಬಲಾತ್ಕಾರದಿಂದ, ಅಕ್ರಮವಾಗಿ ಉತ್ತು, 'ಒತ್ತುವರಿ' ಮಾಡಿಕೊಂಡಿದ್ದ. ದೇವಪ್ಪನಿಗಿದ್ದ ಜಮೀನೆಲ್ಲಾ ಒಟ್ಟು ಮೂರು ಎಕರೆ ಚಿಲ್ಲರೆ ಆಗುವುದು – ಹೆಚ್ಚು ಕಡಿಮೆ ತನ್ನ ಜಮೀನಿ ನಷ್ಟೇ. (ಇದು ಮೈಸೂರಿನ, ಕನ್ನಡ ದೇಶದ, ಭಾರತದ ಬಹುಸಂಖ್ಯೆಯ ರೈತರ ಜಮೀನಿನ ಕಥೆ) ಇಂಥ ಅಲ್ಪ ಜಮೀನಿನಲ್ಲೂ ಆದ ಈ ಆಕ್ರಮಣದಿಂದ ದೇವಪ್ಪ ದಿಕ್ಕುಗೆಟ್ಟ ನಾವಿಕನಂತಾದ. ಬೈಗಳ ಮಳೆ ಸುರಿಸಿದ. ಕೊನೆಗೆ ತಾಳಲಾರದೆ ಇಳಿಜಾರಿನಲ್ಲಿ ಬ್ರೇಕ್ ಕೆಟ್ಟು ಹೋದ ಮೋಟಾರಿನಂತೆ ಜಗಳಕ್ಕೇ ಬಂದ. ಕೈಗೆ ಕೈ ಮಿಲಾಯಿಸಿತು (ಭೀಮ– ದುರೋಧನರ ಕಾಳಗ), ಕಾಳಿಂಗಯ್ಯ ಭೀಮಕಾಯ, ಅವನಿಗೇ ಜಯ ಲಭಿಸಿತು. ದೇವಪ್ಪ ಗ್ರಾಮ ಪಂಚಾಯಿತಿಗೆ ದೂರು ಕೊಟ್ಟ, ನಮ್ಮ ಹಳ್ಳಿಗಳಲ್ಲಿ ಗ್ರಾಮ ಪಂಚಾ ಯಿತಿಯ ನ್ಯಾಯವೆಂದರೆ ಬಲಾಢ್ಯನ ಬಾಯಿಗೇ ಬೀಳುವ ದೋಸೆ. ನ್ಯಾಯ ಕಾಳಿಂಗ ನಂತೆಯೇ ಆಯಿತು. ಆದರೆ ಅದಕ್ಕೂ ಧೃತಿಗೆಡದೆ ದೇವಪ್ಪ ಅಮಲ್ದಾರರಿಗೆ ದೂರು ಕೊಟ್ಟ. ಮೋಜುಂದಾರರು ಅಳತೆಗೆ ಬಂದರು. ಹೊಲಕ್ಕೆ ಅಳತೆಗೆ

ಹೋಗುವ ಮುನ್ನ ಕಾಳಿಂಗ ಮೋಜುಂದಾರರ ದೇವರಿಗೆ ಮನೆಯಲ್ಲಿ ಉಪ್ಪಿಟ್ಟು ಕಾಫಿ ಪೂಜೆಮಾಡಿ ಐದು ರೂಪಾಯಿಯ ನೈವೇದ್ಯ ಮಾಡಿದ. ಈ ವಿಶೇಷ ಪೂಜೆಯಿಂದ ತೃಪ್ತರಾದ ಮೋಜುಂದಾರರು ಕಾಳಿಂಗಯ್ಯ ಒತ್ತುವರಿ' ಮಾಡಿದ್ದ ನಾಲ್ಕು ಮೊಳ ಭೂಮಿಯ ಪ್ರದೇಶವನ್ನು ಉದ್ದಕ್ಕೂ ಅಳತೆ ಮಾಡಿ, ಅವನ ಜಮೀನಿಗೆ ಸೇರಿಸಿ, ಕಲ್ಲು ನೆಡಿಸಿಬಿಟ್ಟರು... ಕಾಳಿಂಗಯ್ಯ ಉಳುತ್ತಲೇ ಇದ್ದ. ಮೇಲೆ ಉರಿಯುವ ಸೂರ್ಯ: ಒಳಗೆ ಕುದಿಯುವ ವಿಷಾದದ ಲಾವರಸ–

ಕಲ್ಲು ನೆಡೆಸಿಬಿಟ್ಟರು. ದೇವಪ್ಪನ ಎದೆಗೆ ಗುರಿಯಿಟ್ಟು ಹೊಡೆದ ಶಿಲೆ. ದೇವಪ್ಪ ದಿಗ್ಭ್ರಾಂತನಾದ. ಸೂರ್ಯಚಂದ್ರರಷ್ಟೇ ಶಾಶ್ವತವೆಂದು ಅವನು ನಂಬಿದ್ದ ಭೂಪ್ರದೇಶ ಇನ್ನು ಅವನದಲ್ಲ. ದೇಶದ ಕಾನೂನು ಹಾಗೆ ಹೇಳಿಬಿಟ್ಟಿದೆ. ಮುಂದೇನು ಮಾಡುವುದು? ಬುದ್ಧಿ ಕುಂಠಿತವಾಗಿದೆ. ಎದುರಿಗೆ ವಿಸ್ತಾರವಾಗಿ ಹರಡಿರುವ ಶೂನ್ಯದ ಕಡಲು. ದೇವಪ್ಪ ಕೊರಗಿನಿಂದ ಹಾಸಿಗೆ ಹಿಡಿದ.

ಕಾಳಿಂಗಯ್ಯ ಉಳುತ್ತಲೇ ಇದ್ದ. ಅವನ ಕಾಲುಗಳು ಸಣ್ಣಗೆ ನಡುಗುತ್ತಿದ್ದವು ಹಾಸಿಗೆ ಹಿಡಿದ. ಪುನಃ ಮೇಲೆ ಏಳಲೇ ಇಲ್ಲ...

ಕಾಳಿಂಗಯ್ಯನ ಕಾಲುಗಳೂ ಮೊಳೆ ಹೊಡೆದಂತಾಗಿ ಮುಂದೆ ಏಳಲೇ ಇಲ್ಲ. ಅವನ ನೇತ್ರಗಳು ಮಿಂಚು ಕಂಡಂತೆ ಮಂಜಾದವು. ತಲೆ ಗಿರಗಿರನೆ ಸುತ್ತುವ ಬುಗುರಿ–

"ನನ್ನ ನೆಲ ತಕ್ಕೊಂಬುಟ್ಟಿಯಾ?... ಆ ಮಟ್ಟಿಗೆ ನನ್ನ ರಕ್ತ ಸುರಿಸಿತ್ನಿ ಕಣೋ ಪಾಪಿ. ದೇವರು ನಿಂಗೆ ಏಳಿಗೆ ಕೊಟ್ಟಾನಾ? – ನನ್ನ ವಡವೇಗೆ ಅಪೇಕ್ಷೆ ಮಾಡಿ ನನ್ನ ಜೀವ ಕೊಂಡುಬಿಟ್ಟಿದ್ದೀಯೆ. ಇರಲಿ. ನನ್ನ ಮಗ ನಿಚ್ಚಯವಾಗಿ ಸೇಡು ತೀರಿಸಿಕೊತ್ತಾನೆ. ನೆಪ್ಪಿಡು. ರಕ್ತಕ್ಕೆ ರಕ್ತ ಕೆಡವಿ ನೆಲಾನ ಸಂಪಾದ್ರೆ ಮಾಡ್ತಾನೆ... ಹುಸಾರು, ಗೆದ್ದೆ ಅಂದುಕೊ ಬ್ಯಾಡ. ನಿನ್ನ ಕತೆ ಮುಗಿದ ಹೊರತೂ ನನ್ನ ಕತೆ ಮುಗಿಯಾಕಿಲ್ಲ, ಗೊತ್ತಾಯಿತಾ?.

ಸತ್ತ ದೇವಪ್ಪನ ಧ್ವನಿಯೇ ನಿಸ್ಸಂದೇಹವಾಗಿಯೂ, ಮುದುಕ ಕಾಳಿಂಗಯ್ಯ ಥರಥರನೆ ಕ್ರೀ ನಡುಗಲಾರಂಭಿಸಿದ. ಅವನ ಕಣ್ಣು ಹೆದರಿ ಹೆದರಿ ಪಕ್ಕದ ಹೊಲದಲ್ಲೇ ಉಳುತ್ತಿದ್ದ – ದೇವಪ್ಪನ ಮಗನ ವಜ್ರಕಾಯವನ್ನು ನೋಡಿತು... "ನಾನು ಮುದುಕನಾದೆ, ಮಕ್ಕಳು (ಇಲ್ಲ. ದೇವಪ್ಪನ ಮಗ ಈಗ ಬಲವಾಗಿದಾನೆ. ಅವನು ಖಂಡಿತವಾಗಿಯೂ ಸೇಡು ತೀರಿಸಿ ಕೊಳ್ಳುತ್ತಾನೆ. ಆ ಜಮೀನನ್ನ ನಾನು ಮಾಡಿದ ಹಾಗೆ ಜುಲುಮೆಯಿಂದ ಉತ್ತು ತನ್ನ ವಶಪಡಿಸಿಕೊಳ್ತಾನೆ. ವರಪಡಿಸಿಕೊಂಡೇ ಬಿಡ್ತಾನೆ. ಸಕ್ತಿ ಇದ್ದೋನ ಕಾರ್ಯ. ಮುಗಿದು ಹೋಯ್ತು. ಎಲ್ಲಾ ಮುಗಿದುಹೋಯ್ತು... ಆ ಮೋಜುಂದಾರನಿಗೆ ಅನ್ಯಾಯವಾಗಿ ಐದು ರೂಪಾಯಿ ಕಳೆದೆನಲ್ಲಾ?... ಆಯ್ಯೋ, ಐದು ರೂಪಾಯಿ ಕಳೆದೆನಲ್ಲಾ?... ಅಯ್ಯೋ ಕೆಟ್ಟೆ, ಕೆಟ್ಟೆ.

ಕಾಳಿಂಗಯ್ಯ ತೂರಾಡಿ ತೂರಾಡಿ ಕೆಳಗೆ ಬಿದ್ದುದನ್ನು ಕಂಡು ದೇವಪ್ಪನ ಮಗ 'ಆರು' ನಿಲ್ಲಿಸಿ ಧಾವಿಸಿ ಬಂದ. ಕಾಳಿಂಗಯ್ಯನಿಗೆ ಪ್ರಜ್ಞೆ ಹೋದಂತಿತ್ತು. ಒಡನೆಯೇ ಕೆರೆಗೆ ಓಡಿ ಹೋಗಿ ನೀರು ತಂದು ಶುಶೂಷೆ ಮಾಡಿದ. ಸ್ವಲ್ಪ ಹೊತ್ತಿನ ಮೇಲೆ ಕಾಳಿಂಗಯ್ಯ ಕಣ್ಣು ತೆರೆದ. ದೇವಪ್ಪನ ಮಗನ ಮುಖವನ್ನು ಕಂಡು ಮೃತ್ಯು ದರ್ಶನವನ್ನು ಮಾಡಿದವನಂತಾದ (ಗರುಡನನ್ನು ನೋಡಿದ ಹಾವು) ಬಿಟ್ಟ ಕಣ್ಣು ಥಟ್ಟನೆ ಮುಚ್ಚಿಹೋಯಿತು. ಬಾಯಿ ದುರ್ಬಲವಾಗಿ ಆಡಿತು: "ನಾಕು ಮೊಳ ಭೂಮಿ ನಾಕೇ ನಾಕು ಮೊಳ ಭೂಮಿ... ಕೋಪ ಮಾಡಕೋ ಬ್ಯಾಡ. ಸಂಸಾರ ಸಾಕಕ್ಕೆ ಆ ಕೆಲಸ ಮಾಡಬುಟ್ಟೆ ಕನಪ್ಪಾ – ಸಂಸಾರ ಸಾಕಕ್ಕೆ..." ದೇವಪ್ಪನ ಮಗ ಏನೊಂದೂ ಅರ್ಥವಾಗದೆ ಮಿಕಿ ಮಿಕಿ ನೋಡುತ್ತಿದ್ದ. ಮುಚ್ಚಿದ ಕಣ್ಣು ತೆರೆಯಲೇ ಇಲ್ಲ.

ಕತೆಯನ್ನು ಓದಿ ಲಾಯರು ತಲೆದೂಗಿದ. ಆದರೆ ಏಕೋ ಅವನಿಗೆ ಸಂಶಯ ವಾಯಿತು. ಮನುಸ್ಕ್ರಿ ಗಂಡಸಿನ ಕೈಬರಹದಂತಿತ್ತು. ಸೂಕ್ಷ್ಮವಾಗಿ ಪರೀಕ್ಷಿಸಿದಾಗ ಕೊನೆಯಲ್ಲಿ ಪುಟ್ಟದಾಗಿ 'ಸಂಜೀವಿ' ಎಂದು ಬರೆದಿತ್ತು. ಅದನ್ನು ಶಾಯಿಯಿಂದ ಚೆನ್ನಾಗಿ ಹೊಡೆದಿತ್ತು.

ಲಾಯರ ಸಂಶಯ ದೃಢವಾಯಿತು... ಸಂಜೀವ – ತನ್ನ ಹೆಂಡತಿಯ ಸೋದರ ಮಾವ. ಅವನು ಮೊನ್ನೆ ಮೊನ್ನೆ ಮೃತನಾದ. ಅವನು ಲಲಿತಳನ್ನು ಬಹುವಾಗಿ ಪ್ರೀತಿಸುತಿದ್ದನೆಂದು ಅವಳೇ ಆಗಾಗ ಹೇಳುತ್ತಿದ್ದಳು. ಹಾಗಾದರೆ ಅವನ ಕಥೆಗಳನ್ನೇ ತನ್ನ ಹೆಸರಿನಲ್ಲಿ ಪ್ರಕಟಿಸುತ್ತಿದ್ದಳೇ ಲಲಿತ?... ನಾಲ್ಕು ಮೊಳ ಭೂಮಿ! ಇದು ಅವನು ಬರೆದ ಕಥೆಯೇ?

***

## ಚದುರಂಗ (ಎಂ. ಸುಬ್ರಹ್ಮಣ್ಯರಾಜೆ ಅರಸು) 1916-1998

ಸಣ್ಣ ಕಥೆಗಾರ, ಕಾದಂಬರಿಗಾರ, ನಾಟಕಕಾರರಾದ ಚದುರಂಗರು ಕನ್ನಡದ ಮಹತ್ವದ ಲೇಖಕರಲ್ಲಿ ಒಬ್ಬರು. ಸರ್ವಮಂಗಳ, ಉಯ್ಯಾಲೆ, ವೈಶಾಕ, ಹೆಜ್ಜಾಲ ಇವು ಇವರ ಕಾದಂಬರಿಗಳು. ಸ್ವಪ್ನ ಸುಂದರಿ, ಶವದ ಮನೆ ಇಣುಕು ನೋಟ, ಬಂಗಾರದ ಹೆಜ್ಜೆ, ಮೀನಿನ ಹೆಜ್ಜೆ, ಕ್ವಾಟೆ, ಮೃಗಯ ಇತ್ಯಾದಿ ಕಥಾ ಸಂಕಲನಗಳು. ಕುಮಾರ ರಾಮ, ಇಲಿಬೋನು, ಬಿಂಬ ಇವು ಇವರ ನಾಟಕಗಳು. ಇವರಿಗೆ ಕರ್ನಾಟಕ ಸಾಹಿತ್ಯ ಆಕಾಡೆಮಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಕ್ರೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇವರಿಗೆ ಲಭಿಸಿದೆ. ಭಕ್ತಕುಂಬಾರ ಚಿತ್ರದ ಕಥಾ ಲೇಖಕರು, ಇಂಗ್ಲೀಷಿನ ಮಾಯಾ ಚಿತ್ರದ ಸಹ ನಿರ್ದೇಶಕರಾಗಿದ್ದರು. ಇವರೇ ತಯಾರಿಸಿದ 'ಸರ್ವಮಂಗಳ' ಚಿತ್ರಕ್ಕೆ ರಾಜ್ಯ ಚಲನಚಿತ್ರ ಪ್ರಶಸ್ತಿ ದೊರೆತ್ತಿದೆ. 'ಉಯ್ಯಾಲೆ; ಚಿತ್ರಕ್ಕೆ ಉತ್ತಮ ಚಿತ್ರಕಥಾ ಲೇಖಕರ ಪ್ರಶಸ್ತಿ ಲಭಿಸಿದೆ. ರಾಷ್ಟ್ರಕವಿ ಕುವೆಂಪು, ನಾಟ್ಯ ವಿಶಾರದೆ ವೆಂಕಟಲಕ್ಷ್ಮಮ್ಮನವರನ್ನು ಕುರಿತು ಸಾಕ್ಷ್ಯಾ ಚಿತ್ರವನ್ನು ರಚಿಸಿದ್ದಾರೆ.

# ಸಂಕೀರ್ಣ ಲೇಖನಗಳು

## 1. ಅಣು ಚಳಿಗಾಲ : ಅಡಗಲು ಸ್ಥಳವೆಲ್ಲಿ?

– ನಾಗೇಶ ಹೆಗಡೆ

ಶಕ್ತ ರಾಷ್ಟಗಳು ಅಕಸ್ಮಾತ್ ಯುದ್ಧಕ್ಕಿಳಿದರೆ ನಾವೆಲ್ಲ ಒಂದೇ ಏಟಿಗೇನೂ ನಿರ್ನಾಮವಾಗಿ ಹೋಗುವುದಿಲ್ಲ. ಅಳಿವು–ಉಳಿವಿನ ಮಧ್ಯೆ ನಾವು ಸುದೀರ್ಘ ಸೆಣಸಾಟ ನಡೆಸಬೇಕಾಗುತ್ತದೆ. ಭೂಮಿಯ ಮೇಲಿನ ಜೀವರಾಶಿಯೆಲ್ಲ ನಂದಿಹೋಗುವ ಮುಂಚೆ ಉತ್ತರ ಗೋಳಾರ್ಧವೆಲ್ಲ ಹೊಗೆ ಧೂಳುಕಣಗಳಿಂದ ಮುಚ್ಚಿಹೋಗುತ್ತದೆ. ಸೂರ್ಯರಶ್ಮಿ ನೆಲಕ್ಕೆ ತಾಗದೆ ವರ್ಷವೆಲ್ಲ ಅಂಧಕಾರ ಕವಿದು, ಚಳಿ ಅತಿಯಾಗಿ ವ್ಯಾಪಕ ಹಿಮಪಾತವಾಗುತ್ತದೆ. ಹವಾಮಾನ–ಮಳೆಬೆಳೆಯೆಲ್ಲ ಆಯತಪ್ಪಿ ಜೀವ ಜಂತುಗಳೆಲ್ಲ ಕ್ರಮೇಣ ಸಾವಪ್ಪುತ್ತವೆ. ಈ 'ಅಣು ಚಳಿಗಾಲ'ದ ವಿವಿಧ ಮುಖಗಳು ಹೇಗಿರುತ್ತವೆ ? ಬದುಕುಳಿಯಲು ಎಂಥ ಸಿದ್ಧತೆ ಬೇಕು ?

ಪ್ರತಿದಿನ ಹತ್ತು ಸಾವಿರ ವಾಹನಗಳು ಓಡಾಡುತ್ತಿದ್ದ ಮಾಂಡವಿ ಸೇತುವೆ ಕುಸಿದಾಗ ಇಡೀ ಪಣಜಿ ನಗರಕ್ಕೆ ಲಕ್ವ ಹೊಡೆದಂತಾಯಿತು. ವಿದ್ಯುತ್ ಪೂರೈಕೆ ನಿಂತಿತು. ಟೆಲಿಫೋನ್ ಸಂಪರ್ಕ ಕಡಿದುಹೋಯಿತು. ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತ ವಾಯಿತು. ವಿದ್ಯುತ್ ಪೂರೈಕೆ ನಿಂತಿದ್ದರಿಂದ ನೀರು ಪೂರೈಕೆ ನಿಂತಿತು. ಸಾರಿಗೆ ಸಂಪರ್ಕ ಕಡಿದುಹೋದದ್ದರಿಂದ ಹಾಲು, ಸೀಮೆಎಣ್ಣೆ, ಅಡಿಗೆ ಅನಿಲ ಸರಬರಾಜೂ ನಿಂತಿತು. ಅಡುಗೆ ಬೇಯಿಸಲೆಂದು ಸೌದೆ ಡಿಪೋ ಬಳಿ ನಿಂತ ಕೆಲವರಿಗಂತೂ ಕಾಲವೇ ಅರ್ಧ ಶತಮಾನದಷ್ಟು ಹಿಂದೆ ಸರಿದಂತಾಯಿತು.

ಭೋಪಾಲ್‌ನಲ್ಲಿ ಮೂವತ್ತು ಅಡಿ ಉದ್ದದ ಎರಡು ವಿಷಾನಿಲ ಪೀಪಾಯಿ ಸೋರಿದಾಗ ಎರಡು ಲಕ್ಷ ಮಂದಿಗೆ ಬದುಕು ನರಕವಾಯಿತು. ಅವರ ಶರೀರಕ್ಕೆ ಸೇರಿದ ನಂಜನ್ನು ಇಳಿಸುವಲ್ಲಿ ಇಡೀ ರಾಜ್ಯದ ವೈದ್ಯಕೀಯ ವ್ಯವಸ್ಥೆಯೇ ಸೋತು ಕೈಚೆಲ್ಲಬೇಕಾಯಿತು. ಭೂಮಿಯ ಇನ್ನೊಂದು ಮಗ್ಗುಲಿನಲ್ಲಿ ಕಾರ್ಬೈಯಿಡ್ ಕಾರ್ಖಾನೆಗಳ ಎದುರು ಪೊಲೀಸರ ಅಶ್ರುವಾಯುವಿಗೆ ಜನಸಾಮಾನ್ಯರು ಕಣ್ಣೀರಿಳಿಸ ಬೇಕಾಯಿತು.

ಧನ್‌ಬಾದ್‌ನಲ್ಲಿ ರೈಲುಸಿಬ್ಬಂದಿ ಮುಷ್ಕರ ಹೂಡಿದ್ದರಿಂದ ಕಲ್ಲಿದ್ದಲ ಸಾಗಾಣಿಕೆ ಸ್ಥಗಿತವಾಯಿತು. ದಿಲ್ಲಿಯ ಶಾಖೋತ್ಪನ್ನ ವಿದ್ಯುದಾಗಾರಕ್ಕೆ ಇಂಧನ ಅಭಾವವಾಗಿ ಬ್ಲ್ಯಾಕ್ ಔಟ್ ಘೋಷಿಸಬೇಕಾಯಿತು. ವಿದ್ಯುತ್ ಅಭಾವದಿಂದಾಗಿ ಇಲೆಕ್ಟ್ರಿಕ್ ಟ್ರೇನ್‌ಗಳು ನಿಶ್ಚಲವಾಗಿ ಸಾರಿಗೆ ವ್ಯವಸ್ಥೆ ಅಧ್ವಾನವಾಯಿತು.

ಚೆರ್ನೋಬಿಲ್‌ನಲ್ಲಿ ಅಣುಸ್ಥಾವರ ಆಸ್ಫೋಟನೆಗೊಂಡು ಪೋಲಂಡ್ ದೇಶದಲ್ಲಿ ಹಣ್ಣು ಹಂಪಲು ಬೆಳೆಯುವವರು ಭೂಮಿಕಾಣಿ ತ್ಯಾಗಮಾಡಿ ದಿವಾಳಿ ತೆಗೆಯ ಬೇಕಾಯಿತು. ನಾರ್ಡಿಕ್ ದೇಶಗಳಲ್ಲಿ ಹಾಲನ್ನು ಕಾಲುವೆಗೆ ಸುರಿಯಬೇಕಾಯಿತು. ಫಿನ್‌ಲ್ಯಾಂಡ್ ಐದುಸಾವಿರ ಮಹಿಳೆಯರು ತಾವೆಂದೂ ಗರ್ಭ ಧರಿಸುವುದಿಲ್ಲವೆಂದು ಘೋಷಿಸಬೇಕಾಯಿತು.

ಚೆರ್ನೋಬಿಲ್‌ನಿಂದ ಒಂದುಸಾವಿರ ಕಿಲೊಮೀಟರ್ ದೂರದವರೆಗಿನ ಎಲ್ಲ ಪ್ರದೇಶಗಳಿಂದಲೂ ಹಾಲು ಮತ್ತು ತಾಜಾ ಆಹಾರ ಪದಾರ್ಥಗಳು ಮಾರುಕಟ್ಟೆಗೆ ಬಾರದಂತೆ ತಡೆಹಿಡಿಯಲಾಯಿತು. ಆರೋಗ್ಯ ಹಾನಿ ಎಷ್ಟೆಂಬುದು ಗೊತ್ತಾಗ ದಿದ್ದರೂ ಪೋಲಂಡ್ ದೇಶ ಎಪ್ಪತ್ತು ಕೋಟಿ ರೂಪಾಯಿ, ಇಟಲಿ ಇನ್ನೂರು ಕೋಟಿ ರೂಪಾಯಿ ಹಾಗೂ ಪಶ್ಚಿಮ ಜರ್ಮನಿ ಆರುನೂರಐವತ್ತು ಕೋಟಿ ರೂಪಾಯಿ ಆರ್ಥಿಕ ಹಾನಿ ಅನುಭವಿಸಬೇಕಾಯಿತು.

ಒಂದು ಸೇತುವೆ, ಒಂದು ಪೀಪಾಯಿ, ಒಂದು ಪೈಪ್‌ಲೈನ್, ಒಂದು ರೈಲು ಮಾರ್ಗ, ಒಂದು ರಿಯಾಕ್ಟರ್ ವಿಫಲವಾದರೂ ಲಕ್ಷಾಂತರ ಮಂದಿಯ ಜೀವನ ವ್ಯವಸ್ಥೆ

ಅಲ್ಲೋಲಕಲ್ಲೋಲವಾಗುತ್ತದೆ. ಅವಘಡ ನಡೆದಲ್ಲಷ್ಟೇ ಅಲ್ಲ, ಯಾವುದೋ ರಾಷ್ಟ್ರದಲ್ಲಿ ಎಷ್ಟೋ ದಿನಗಳವರೆಗೆ ಯಾವುದೇ ತಪ್ಪಿಲ್ಲದಿದ್ದರೂ ಜನ ತೊಳಲಾಡ ಬೇಕಾಗುತ್ತದೆ. ಪ್ರಪಂಚ ತೀರ ಸಂಕುಚಿತವಾಗಿಬಿಟ್ಟಿದೆ. ಆಧುನಿಕ ಪ್ರಪಂಚ ನಾಜೂಕಾಗಿಬಿಟ್ಟಿದೆ.

ನಾವು ನಿರ್ಮಿಸಿಕೊಂಡ ಈ ನಾಜೂಕು ಹಂದರದ ಒಂದು ಎಳೆ ಕುಸಿದರೂ ಇಷ್ಟೆಲ್ಲ ಅವಘಡ ಆಗುತ್ತದೆಂದಾದರೆ ಅಕಸ್ಮಾತ್ ಮೂರನೇ ವಿಶ್ವಸಮರದ ಘೋಷಣೆ ಯಾಗಿ ಹಿರೋಶಿಮಾ ಬಾಂಬ್‌ನ ಮೂರುಲಕ್ಷ ಪಟ್ಟು ಸಾಮರ್ಥ್ಯದ ಅಣು ಬಾಂಬ್ ಗಳು ಸಿಡಿದರೆ ಏನಾದೀತು? ನಾವೆಲ್ಲ ದಿನೊಪ್ಪತ್ತಿನಲ್ಲಿ ಸತ್ತೇ ಹೋಗುತ್ತೇವೆ ; ಪ್ರಪಂಚದಾದ್ಯಂತ ಮೊಳ ಕಾಲೆತ್ತರದ ಬೂದಿರಾಶಿ ಬಿದ್ದು ಭೂಮಿ ಎಂಬುದು ಬರಡುಗೋಳವಾಗುತ್ತದೆ : ಇತ್ಯಾದಿ ಭಯಾನಕ ಕಲ್ಪನೆಗಳು ನಮ್ಮಲ್ಲಿ ಬೇರೂರಿವೆ. 'ಸತ್ತರೆ ಎಲ್ಲ ಒಟ್ಟಿಗೇ ಸಾಯುತ್ತೇವಲ್ಲ–ಭವಿಷ್ಯ ಅದಕ್ಕಿಂತ ಭಯಾನಕವಾಗಲು ಸಾಧ್ಯವೆ?' ಎಂಬ ಹುಂಬ ನಿಶ್ಚಿಂತೆಯಿಂದ ನಮ್ಮ ನಿತ್ಯದ ಕೆಲಸದಲ್ಲಿ ನಿರತರಾಗುತ್ತೇವೆ.

ಮೂರನೆಯ ವಿಶ್ವ ಸಮರ ನಡದರೆ ಒಂದೇ ಏಟಿಗೆ ಎಲ್ಲರೂ ಸಾಯುವುದಿಲ್ಲ ; ಬದಲಿಗೆ ಇಡೀ ವಿಶ್ವದ ನಾಗರಿಕತೆ ಕ್ರಮೇಣ ಹೀನಸ್ಥಿತಿಗೆ ಇಳಿಯುತ್ತ ಶಿಲಾಯುಗಕ್ಕೆ ಮರಳಿ ಹತ್ತಾರು ವರ್ಷಗಳ ಪರ್ಯಂತ ನರಕಯಾತನೆ ಅನುಭವಿಸಿ ನಂದಿಹೋಗು ಇದೆ ಎಂಬುದು ಅರಿವಿಗೆ ಬಂದಾಗ ಸುಶಿಕ್ಷಿತ ಜಗತ್ತು ದಿಗಿಲುಗೊಂಡಿತು. ಈಗಿರುವ ಬಾಂಬ್‌ಗಳ ಪೈಕಿ ಶೇಕಡಾ ಇಪ್ಪತ್ತು–ಮೂವತ್ತರಷ್ಟು ಆಸ್ಫೋಟಗೊಂಡರೂ ಭೂಮಿಯ ವಾತಾವರಣ ಮೊದಲಿನಂತಾಗಲು ಶತಮಾನಗಳೇ ಬೇಕು ಎಂಬುದು ಅರಿವಿಗೆ ಬಂದಾಗ ಒಂದೊಂದು ರಾಷ್ಟ್ರವೂ ತನ್ನ ಪ್ರಜೆಗಳ ಹಿತರಕ್ಷಣೆ ಹೇಗೆಂಬ ಬಗ್ಗೆ ಚಿಂತೆ ವ್ಯಕ್ತಪಡಿಸಿತು. ಅದಕ್ಕೆಂದೇ ಪ್ರತ್ಯೇಕ ಅಧ್ಯಯನ ಕೈಗೊಳ್ಳಲು 'ಸ್ಕೋಪ್' (ಸೈಂಟಿಫಿಕ್ ಕಮಿಟಿ ಆನ್ ಪ್ರಾಬ್ಲಮ್ಸ್ ಆಫ್ ಎನ್‌ವಿರಾನ್ಮೆಂಟ್) ಎಂಬ ಸಮಿತಿ ರಚಿಸಲು ಎಪ್ಪತ್ತೊಂದು ರಾಷ್ಟ್ರಗಳ ಪ್ರತಿನಿಧಿಯಾದ

ವಿಜ್ಞಾನಸಂಘಗಳ ಅಂತಾರಾಷ್ಟ್ರೀಯ ಮಂಡಳಿಗೆ ಆದೇಶ ನೀಡಲಾಯಿತು. ಮೂವತ್ತು ದೇಶಗಳ ಮುನ್ನೂರಕ್ಕೂ ಹೆಚ್ಚು ವಿಜ್ಞಾನಿಗಳು ಸೇರಿ ಪರಿಸರದ ಮೇಲಾಗುವ ಪರಿಣಾಮ, ತೃತೀಯ ವಿಶ್ವದ ಬಡ ತಟಸ್ಥ ದೇಶಗಳ ಆರ್ಥಿಕ ಸ್ಥಿತಿಗತಿಯ ಮೇಲಾಗುವ ಪರಿಣಾಮಗಳನ್ನು ಅತ್ಯಂತ ಕೂಲಂಕಷವಾಗಿ ವಿಶ್ಲೇಷಿಸಿ ಈ ವರ್ಷ [1986] ಮಾರ್ಚ್ ನಲ್ಲಿ ಪ್ರಕಟಿಸಿದರು. 1986ನ್ನು 'ಅಂತಾರಾಷ್ಟ್ರೀಯ ಶಾಂತಿ ವರ್ಷ' ವೆಂದು ಆಚರಿಸಲು ವಿಶ್ವಸಂಸ್ಥೆ ಕರೆ ನೀಡಿದ್ದರಿಂದ ಅಣುಸಮರ ಪರಿಣಾಮಗಳ ಬಗ್ಗೆ 'ಸ್ಕೋಪ್' ನಡೆಸಿದ ಅಧ್ಯಯನ ಆದಷ್ಟು ಹೆಚ್ಚು ಜನರನ್ನು ತಲುಪುವಂತೆ ಕ್ರಮ ಕೈಗೊಳ್ಳಬೇಕೆಂದೂ ಸಲಹೆ ನೀಡಲಾಯಿತು.

ಒಂದು ಮೆಗಾಟನ್ (ಅಂದರೆ ಹಿರೋಶಿಮಾ ಬಾಂಬ್‌ನ ಎಂಬತ್ತು ಪಟ್ಟು) ಸಾಮರ್ಥದ ಅಣುಬಾಂಬ್ ಸಿಡಿಯಿತೆಂದರೆ ಧೂಳು ರಾಸಾಯನಿಕ ಕಣಗಳೆಲ್ಲ ಒಂದೇ ನೆಗೆತಕ್ಕೆ ಹನ್ನೆರಡು ಕಿಲೊಮೀಟರ್ ಎತ್ತರಕ್ಕೆ ಚಿಮ್ಮಿ ನಂತರ ನಿಧಾನವಾಗಿ ಮೂವತ್ತು ಕಿಲೊಮೀಟರ್ ಎತ್ತರಕ್ಕೆ ಪಸರಿಸುತ್ತ ಹೋಗುತ್ತದೆ. ನೆಲಹಂತದಲ್ಲಿ ಬೆಂಕಿಯ ಕೆನ್ನಾಲಗೆ ಪ್ರತಿ ಸೆಕೆಂಡ್‌ಗೆ ಎಪ್ಪತ್ತೈದು ಮೀಟರ್ ವೇಗದಲ್ಲಿ ಚಾಚುತ್ತ ಭಾರೀ ಸುಂಟರಗಾಳಿಯನ್ನು ಆಹ್ವಾನಿಸುತ್ತದೆ. ಮೇಲೆದ್ದ ಮೋಡ ಕ್ರಮೇಣ ಕೊಡೆಯಾಕಾರದಲ್ಲಿ ಬಿಚ್ಚಿಕೊಂಡು, ಅದೇ ಅಕ್ಷಾಂಶದಗುಂಟ ಭೂಮಿಗೆ ಬಳೆಯಾಕಾರ ದಲ್ಲಿ ಸುತ್ತಿಕೊಳ್ಳುತ್ತದೆ. ಭೂಮಿಗೆ ಸೂರ್ಯಕಿರಣ ತಲುಪಲು ವಿಫಲವಾದರೂ, ವಾತಾವರಣದ ಓಸೋನ್ ರಕ್ಷಾಕವಚ ಭಗ್ನವಾಗಿ, ಘಾತುಕ ಅತಿನೇರಳೆ ಕಿರಣ ಹಾಗೂ ವಿಶ್ವಕಿರಣಗಳು ನೆಲಮುಟ್ಟುತ್ತವೆ. ಮುಂದಿನ ಹತ್ತು ದಿನಗಳಲ್ಲಿ ಇಡೀ ಉತ್ತರ ಗೋಲಾರ್ಧಕ್ಕೆ ಕತ್ತಲು ಮುಸುಕುತ್ತದೆ. ಸಾವಿರ ಮೆಗಾಟನ್ ಬಾಂಬ್ ಬಿದ್ದರೆ ಮಾಮೂಲು ಸೂರ್ಯರಶ್ಮಿಯ ಶೇ. ಒಂದರಷ್ಟು ಮಾತ್ರ ನೆಲ ತಲುಪುವಂತಾಗು ಇದೆ. ನೀರು ಹೆಪ್ಪುಗಟ್ಟುತ್ತದೆ. ದಕ್ಷಿಣಭಾಗದಿಂದ ಬಿರುಗಾಳಿ ಬೀಸಲಾರಂಭಿಸು ಇದೆ. ಇಪ್ಪತ್ತು ದಿನಗಳಲ್ಲಿ ಏಷ್ಯದ ದಕ್ಷಿಣ ಭಾಗದಲ್ಲಿ ತಾಪಾಂಕ ಹತ್ತು ಡಿಗ್ರಿ ಸೆಂಟಿಗ್ರೇಡ್ ಗಿಂತ ಕೆಳಗಿಳಿದು ಹಿಮಾಲಯದಿಂದ ಸಾವಿರ ಕಿಲೊಮೀಟರ್ ದಕ್ಷಿಣದ ವರೆಗೂ ನೀರು ಪೂರೈಕೆ

ಸ್ಥಗಿತವಾಗುತ್ತದೆ. ಮಳೆ ಮೋಡಗಳೆಲ್ಲ ಹಿಂಜಿದ ಹಿಮವಾಗಿ ಸಮುದ್ರದ ಮಟ್ಟ ತಗ್ಗುತ್ತದೆ. ಭೂಖಂಡಗಳು ತಂಪಾಗುವುದರಿಂದ ಹೊಸ ಮೋಡ ಗಳು ಬಾರದೆ, ಮಳೆಗಾಲವೇ ಇಲ್ಲದಂತಾಗುತ್ತದೆ. ಹಿರೋಶಿಮಾದಲ್ಲಿ ಬಾಂಬ್ ದಾಳಿ ಆದಾಗಿನ ಪರಿಸ್ಥಿಯಂತೆ ನರಕಯಾತನೆ, ಆಕ್ರಂದನಗಳು ಕೇಳಿಬಾರದಿದ್ದರೂ, ಭೀಕರ ಬರಗಾಲಕ್ಕೆ ತುತ್ತಾದ ಇಥಿಯೋಪಿಯದಂತೆ ಇಡೀ ಉತ್ತರ ಗೋಲಾರ್ಧ ಮೌನ ರೋದನದೊಂದಿಗೆ ಆಶ್ರಯ ಹುಡುಕುತ್ತ ದಕ್ಷಿಣ ದಿಕ್ಕಿಗೆ ಗುಳಿ ಹೊರಡಬೇಕಾಗುತ್ತದೆ. ಮೊದಲ ದಾಳಿಗೆ ಮರುದಾಳಿ ನಡೆದರೆ ಆ ಅವಕಾಶವೂ ಮೊಟಕಾಗುತ್ತದೆ.

ದಟ್ಟ ಕಪ್ಪುವಿಕಿರಣ ಮೋಡಗಳು ಕ್ರಮೇಣ ದಕ್ಷಿಣಕ್ಕೆ ಬಂದಂತೆ (ಅಂದರೆ ಆಫ್ರಿಕ ಹಾಗೂ ದಕ್ಷಿಣ ಅಮೆರಿಕದ ಭೂಮಧ್ಯರೇಖೆಯನ್ನು ದಾಟಿದಂತೆಲ್ಲ) ವಿರಲ ವಾಗುತ್ತವೆ. ಮೊದಲ ಆರು ತಿಂಗಳ ಕಾಲ ಕೇವಲ ಸುಂಟರಗಾಳಿ, ಶೀತಕಾಲವನ್ನಷ್ಟೇ ಅನುಭವಿಸಿದ್ದ ಅಲ್ಲಿನ ಪ್ರಕೃತಿ ಈಗ ಮಧ್ಯಾಹ್ನದಲ್ಲೇ ಸೂರ್ಯಾಸ್ತವನ್ನು ನೋಡು ವಂತಾಗುತ್ತದೆ. ಸುದೀರ್ಘ ಕಾಲದವರೆಗೆ ಮಂಜು ಮುಸುಕಿ ಋತುಮಾನಗಳೆಲ್ಲ ಅಧ್ವಾನವಾಗುತ್ತದೆ. ಅತಿನೇರಳೆ ಕಿರಣಗಳೂ ಅಣು ವಿಕಿರಣಗಳೂ ಅಳಿದುಳಿದ ಜೀವಜಾಲಕ್ಕೆ ದಾಳಿಯಿಡಲಾರಂಭಿಸುತ್ತವೆ.

**ಜೀವ ಜಂತು ಸ್ಥಿತಿ**

ಭೂಮಿಯ ಮೇಲಿನ ಹಸಿರು ಸಸ್ಯಗಳೆಲ್ಲ ಸೂರ್ಯಕಿರಣಗಳನ್ನೇ ಅವಲಂಬಿಸಿರುವುದರಿಂದ ಅಣು ಚಳಿಗಾಲದ ಪರಿಣಾಮ ವ್ಯಾಪಕವಾಗಲಿಕ್ಕಿದೆ. ಉತ್ತರ ಗೋಲಾರ್ಧದಲ್ಲಿ ಸೂರ್ಯಕಿರಣ ಶೇಕಡಾ ಒಂದರಿಂದ ಹತ್ತರಷ್ಟು ಮಾತ್ರ ನೆಲ ತಲುಪುತ್ತದೆ. ಅಲ್ಪಾವಧಿಯ ವಾರ್ಷಿಕ ಸಸ್ಯಗಳು, ಅದರಲ್ಲೂ ವಿಶೇಷವಾಗಿ ಬತ್ತ, ಗೋಧಿ, ರಾಗಿ, ಜೋಳ ಇವೆಲ್ಲ ಬಿಸಿಲಿನ ಅಭಾವದಿಂದಾಗಿ ಸಾಯುತ್ತವೆ, ಗಿಡಮರಗಳಲ್ಲಿ ಶಕ್ತಿಸಂಗ್ರಹ ಸಾಕಷ್ಟಿರುವುದರಿಂದ ಅವೆಲ್ಲ

ಬದುಕುಳಿಯುತ್ತವೆ. ದಕ್ಷಿಣ ಗೋಲಾರ್ಧದಲ್ಲಿ ಆಹಾರಸಸ್ಯಗಳು ಏಕಾಏಕಿ ಸಾಯದಿದ್ದರೂ ಮಂದ ಬೆಳಕು ಹಾಗೂ ತೀವ್ರ ಚಳಿಯಿಂದಾಗಿ ಇಳುವರಿ ತುಂಬ ಕಮ್ಮಿಯಾಗುತ್ತದೆ.

ಮೀನು, ಕಪ್ಪೆ, ಹಾವು, ಹಲ್ಲಿ, ಜೇನ್ನೊಣಗಳಂಥ ಶೀತರಕ್ತ ಪ್ರಾಣಿಗಳು ಹಂತ ಹಂತವಾಗಿ ಚಳಿ ಹೆಚ್ಚಿದಂತೆ ಅಸುನೀಗತೊಡಗುತ್ತವೆ. ಸಮುದ್ರದ ತಾಪಾಂಕ ನಿಧಾನವಾಗಿ ಕಮ್ಮಿಯಾಗುವುದರಿಂದ ಮೀನುಗಳು ಕೊಂಚ ಜಾಸ್ತಿ ಕಾಲ ಬದುಕುಳಿ ಯುತ್ತವಾದರೂ, ಕರಾವಳಿಯಿಂದ ದೂರ ಸಮುದ್ರಕ್ಕೆ ವಲಸೆ ಹೋಗುತ್ತವೆ.

ಬಿಸಿರಕ್ತದ ಪ್ರಾಣಿಗಳಾದ ಕುರಿ, ಕೋಳಿ, ದನಕರುಗಳು ಚಳಿಯಿಂದ ಕೆಲ ಮಟ್ಟಿಗೆ ಬಚಾವಾಗುತ್ತವೆ. ಆದರೆ ಮೇವು ಸಿಗುವವರೆಗೆ ಮಾತ್ರ ಅವು ಬದುಕುಳಿಯ ಬಹುದು. ಅವುಗಳ ಶರೀರದ ತಾಪಾಂಕ ಐದು ಡಿಗ್ರಿ ಸೆಂಟಿಗ್ರೇಡ್ ಕೆಳಗಿಳಿಯಿತೆಂದರೆ ಆಹಾರ ಇದ್ದರೂ ಸಾಯುತ್ತವೆ. ಆಹಾರ ಮತ್ತು ಬೆಚ್ಚಗಿನ ಆಶ್ರಯದ ಸಮಸ್ಯೆ ತೀವ್ರವಾಗುವುದರಿಂದ ಸಾಕುಪ್ರಾಣಿಗಳನ್ನು ಬಚಾವು ಮಾಡುವುದು ದುಸ್ತರ ವಾಗುತ್ತದೆ.

ಸತ್ತ ಮೀನು ಹಾಗೂ ಅಳಿದುಳಿದ ಸಾಕುಪ್ರಾಣಿಗಳ ಸಹಾಯದಿಂದ ಮನುಷ್ಯರು ಬದುಕಿ ಉಳಿಯಬಹುದು. ಆದರೆ ಇತರ ಸಾಮಾಜಿಕ ವ್ಯವಸ್ಥೆಯಲ್ಲ ಅಧ್ಯಾನವಾಗಿರುವುದರಿಂದ ಬದುಕುಳಿಯಲು ನಡೆಸುವ ಹೋರಾಟ ಅತ್ಯಂತ ದಾರುಣ ವಾಗುತ್ತದೆ. ಭಾರತದ ಮಟ್ಟಿಗೆ ಹೇಳುವುದಾದರೆ, ಉತ್ತರದ ಬಹುಭಾಗವೆಲ್ಲ ಹಿಮದಲ್ಲಿ ಮುಚ್ಚಿ ಹೋಗಿರುತ್ತದೆ. ಹಿಮ ಪಸರಿಸುತ್ತ ಬಂದಂತೆ ಉತ್ತರದಿಂದ ವಲಸೆ ಬರುವವರ ಸಂಖ್ಯೆ ಕ್ರಮೇಣ ಹೆಚ್ಚುತ್ತದೆ.

ನಮ್ಮ ಊಹಾಶಕ್ತಿ ಅತ್ಯಂತ ಚುರುಕಾಗಬೇಕು ಈಗ. ವ್ಯವಸ್ಥೆಯ ಕುಸಿತ ಎಲ್ಲಿಂದ ಪ್ರಾರಂಭ ಆಗುತ್ತದೆಂದು ಹೇಳಲು ಬರುವಂತಿಲ್ಲ. ರಾಷ್ಟ್ರದ ಆಗುಹೋಗು ಗಳನ್ನು ನಿರ್ಧರಿಸುವ ದೆಹಲಿಯಲ್ಲಿ ಹವಾಮಾನದ ವೈಪರೀತ್ಯ ಅತಿಯಾದರೆ ? ಆಡಳಿತ ನಡೆಸುವವರು, ರಾಜಕೀಯ ಧುರೀಣರು, ಮಿಲಿಟರಿ ದಂಡನಾಯಕರು, ಇವರಿಗೆಲ್ಲ ಆಧಾರಸ್ತಂಭಗಳಾಗಿರುವ ಆಪ್ತ ಸಹಾಯಕರು, ತಂತ್ರಜ್ಞರು, ಗುಮಾಸ್ತರು, ಡ್ರೈವರುಗಳು, ಲಾಂಡ್ರಿಯವರು ದೇಶವನ್ನು ಮರೆತು ತಂತಮ್ಮ ಉಳಿವಿಗಾಗಿ ಗುಳೆ ಎದ್ದು ಹೊರಡುವಂತಾದರೆ ?

ಪರಿಣಾಮ ಊಹಾತೀತವಾಗುತ್ತದೆ. ದೂರದ ಪೋಲಂಡ್‌ನಲ್ಲೋ, ತಾಪೈಂಟ್‌ನಲ್ಲೂ ಅಣುಸಮರ ನಡೆದರೆ ನಮಗೆ ಉರಿ ತಾಗದಿರಬಹುದು : ವಿಕಿರಣ ತಟ್ಟದಿರಬಹುದು ; ಸೂರ್ಯಕಿರಣ ಧಾರಾಳವಾಗಿ ಲಭ್ಯವಾಗುತ್ತಿರಬಹುದು. ಆದರೂ ಹಿಮಾಲಯಕ್ಕೆ ಹತ್ತಿರವಿರುವ ದೆಹಲಿಯಲ್ಲಿ ಚಳಿಗಾಳಿ ತೀವ್ರವಾಯಿತೆಂದರೆ ಇಡೀ ದೇಶಕ್ಕೇ ಅರಾಜಕತೆ ಹಬ್ಬಿ, ಸಮುದಾಯ ಸಮರ (ಸಿವಿಲ್‌ವಾರ್) ಪ್ರಾರಂಭ ವಾಗಬಹುದು. ಜೀವನಾವಶ್ಯಕ ಎಲ್ಲ ವಸ್ತು, ವ್ಯವಸ್ಥೆಗಳಿಗಾಗಿ ಬೀದಿಕಾಳಗ ನಡೆಸಬೇಕಾಗಬಹುದು.

ಜೀವನಾವಶ್ಯಕ ವಸ್ತುಗಳು ಯಾವುವು ? ಹಿಂದೆಲ್ಲ ಸಿವಿಲ್‌ವಾರ್ ಪ್ರಾರಂಭ ವಾದಾಗ ಕಿರಾಣಿ ಅಂಗಡಿಯ ಜೀನಸುಗಳಾದ ಅಕ್ಕಿ, ಬೇಳೆ, ಎಣ್ಣೆ, ಬೆಲ್ಲ ಇತ್ಯಾದಿ ಗಳು ಭೂಗತವಾಗುತ್ತಿದ್ದವು. ಇಂದು ನಮ್ಮನ್ನು ಕಂಗೆಡಿಸಬಲ್ಲ ಇತರ ನೂರೊಂದು ವ್ಯವಸ್ಥೆಗಳನ್ನು ನಾವು ಹೆಣೆದುಕೊಂಡಿದ್ದೇವೆ. ನೀರಿನ ಪೂರೈಕೆ ನಿಂತರೆ, ವಿದ್ಯುತ್ ಪೂರೈಕೆ ನಿಂತರೆ, ಡೇರಿ ಹಾಲು ಬಾರದೇ ಇದ್ದರೆ, ಬಸ್ ಅಥವಾ ಆಟೋ ಓಡಾಟ ಸ್ಥಗಿತವಾದರೆ, ಪೆಟ್ರೋಲ್–ಸೀಮೆಎಣ್ಣೆ ದಾಸ್ತಾನು ಮುಗಿದರೆ... ನಮ್ಮ ಕತೆ ಮುಗಿಯುತ್ತದೆ.

**ಊಹಾತೀತ**

ಅಣು ಚಳಿಗಾಲದ ವಿವಿಧ ಮುಖಗಳನ್ನು ಅಷ್ಟೆಲ್ಲ ಆಳವಾಗಿ ಅಧ್ಯಯನ ಮಾಡಿರುವ ವಿಜ್ಞಾನಿಗಳು ಪರಾವಲಂಬಿ ಮಾನವನ ಇಂಥ ವ್ಯಕ್ತಿಗತ ದುರಂತಗಳ ಬಗ್ಗೆ ಏನನ್ನೂ ಹೇಳಿಲ್ಲ. ತೃತೀಯ ಜಗತ್ತಿನ ಬಡರಾಷ್ಟ್ರಗಳ ಆಯಾತ ನಿರ್ಯಾತ ಗಳು ಆಯ ತಪ್ಪುತ್ತವೆಂದೂ, ಅದರಿಂದಾಗಿ ಹಣಕಾಸು ವ್ಯವಸ್ಥೆ ಕುಸಿಯುತ್ತದೆಂದೂ ಹಲವಾರು ಕೋಷ್ಟಕ, ಸ್ತಂಭಾಲೇಖಗಳಲ್ಲಿ ವಿವರಿಸಲಾಗಿದೆ (ಭಾರತ ತನಗೆ ಬೇಕಾದ ಇಂಧನ ತೈಲದ ಶೇಕಡ ನಲವತ್ತು ಭಾಗವನ್ನೂ, ರಸಗೊಬ್ಬರದ ಶೇಕಡ ಮೂವತ್ತಾರರಷ್ಟನ್ನೂ ವಿದೇಶದಿಂದಲೇ ಆಮದು ಮಾಡಿಕೊಳ್ಳುತ್ತಿದ್ದು ವಿಶ್ವ ಸಮರದಿಂದಾಗಿ ಅದು ನಿಂತುಹೋದರೆ, ನಾವು ತುಂಬ ಕಷ್ಟದ ದಿನಗಳನ್ನು ಎದುರಿಸ ಬೇಕಾದೀತೆಂಬ ಎಚ್ಚರಿಕೆಯನ್ನೂ ಕೊಡಲಾಗಿದೆ). ಆಡಳಿತ ವ್ಯವಸ್ಥೆ ಕುಸಿಯಿತೆಂದರೆ ಇಂಧನ–ರಸಗೊಬ್ಬರಗಳ ರಾಶಿಯೇ ಪಕ್ಕದಲ್ಲಿದ್ದರೂ ಅದು ಪ್ರಯೋಜನಕ್ಕೆ ಬರು ವಂತಿಲ್ಲ ಎಂಬುದನ್ನು ನಾವು ಮನಗಾಣಬೇಕು.

ವ್ಯವಸ್ಥೆಯನ್ನು ಅತಿಯಾಗಿ ನಂಬಿರುವ ಜನರೇ ಯುದ್ಧ ಕಾಲದಲ್ಲಿ ಅತ್ಯಂತ ಸಂಕಷ್ಟಕ್ಕೆ ಗುರಿಯಾಗುತ್ತಾರೆ. ನಿಸರ್ಗದಿಂದ ದೂರವಾಗಿ, ನಗರದ ಕಾಂಕ್ರೀಟ್ ಕಾಡುಗಳಲ್ಲಿ ವಾಸಿಸುವ ಜನ ದಿನಬೆಳಗಾಗುತ್ತಲೇ ಪೇಪರ್, ಹಾಲು, ಕೆಲಸದಾಕೆ, ಸ್ಕೂಲ್‌ಬಸ್ ಇವೆಲ್ಲ ನಿಯಮಿತ ವೇಳೆಗೆ ಬಂದರೇನೇ ನೆಮ್ಮದಿಯಾಗಿರುತ್ತಾರೆ. ಮಧ್ಯಮ ಪ್ರಮಾಣದ ವಿಶ್ವಸಮರ ನಡೆದರೂ ಇವರೆಲ್ಲ ಕ್ಷೋಭೆಗೊಳಗಾಗುತ್ತಾರೆ. ನಗರವಾಸಿಗಳಿಗೆಲ್ಲ ತಾವು ನಿರ್ಮಿಸಿಕೊಂಡ ಈ ವ್ಯವಸ್ಥೆಯೇ ಉಸಿರುಗಟ್ಟಿಸುವ ಪಂಜರವಾಗುತ್ತದೆ.

ನಾಗರಿಕ ಜಗತ್ತಿನ ವಿಪರ್ಯಾಸವೆಂದರೆ ಈಗೀಗ ಕ್ರಮೇಣ ದೂರದ ಹಳ್ಳಿಗಳೂ ಈ ಬಗೆಯ ವ್ಯವಸ್ಥೆಯ ಜಾಲಕ್ಕೆ ಸೇರಿಕೊಳ್ಳುತ್ತಿವೆ. ನಗರಗಳನ್ನು ಅವಲಂಬಿಸಿಯೇ ಬದುಕುವಷ್ಟು ಆಧುನಿಕತೆ ಹಳ್ಳಿಗಳದ್ದಾಗುತ್ತಿದೆ. ಬತ್ತದ ಗದ್ದೆಗೆ ನೀರೆತ್ತಲು ವಿದ್ಯುತ್ ಬೇಕು. ಬತ್ತ, ಸುಲಿದು ಅಕ್ಕಿ ಮಾಡಲೂ ನಗರದ ಮಿಲ್ಲಗಳೇ ಬೇಕು. ಅಂದಮೇಲೆ ಯುದ್ಧದ ಬಿಸಿಯಿಂದ ಹಳ್ಳಿಗಳೂ ಬಚಾವಾಗಿ ಬೀಜ, ಗೊಬ್ಬರ, ಕೀಟನಾಶಕ, ಪಶು ಔಷಧ, ಮೇವು ಮುಂತಾದ ವ್ಯವಸಾಯ

ಆವಶ್ಯಕತೆಗಳ ಪೂರೈಕೆಯೂ ಏರುಪೇರಾಗಿ, ನೀರು, ಹವಾಮಾನ ಸರಿಯಾಗಿದ್ದರೂ ಕೃಷಿ ವಿಫಲ ವಾಗುತ್ತದೆ. ಜಗತ್ತಿನ ಬಹುಪಾಲು ರಾಷ್ಟ್ರಗಳಲ್ಲಿ ಒಂದು ಇಡೀ ವರ್ಷಕ್ಕೆ ಸಾಕಾಗು ವಷ್ಟು ಧಾನ್ಯಸಂಗ್ರಹ ಇಲ್ಲ. ವ್ಯಕ್ತಿಗತವಾಗಿ ಕೆಲವು ರೈತರು ಧಾನ್ಯ ಸಂಗ್ರಹಿಸಿ ಇಟ್ಟು ಕೊಂಡರೂ ಹಸಿದವರ ದಂಗೆ ದಾಳಿಯಿಂದ ಅದನ್ನು ರಕ್ಷಿಸಿ ಇಟ್ಟುಕೊಳ್ಳುವುದು ದುಸ್ತರವಾಗುತ್ತದೆ.

ಹೀಗೆ ಮಾನವಕುಲದ ಬಹುಪಾಲು ಜನ ಯುದ್ಧದ ನೇರ ಪರಿಣಾಮಗಳಿಂದ ಅಥವಾ ಹವಾಮಾನದ ವೈಪರೀತ್ಯಗಳಿಂದ ರೋಗರುಜಿನಗಳಿಂದ ಇಲ್ಲವೇ ಹಸಿವಿನಿಂದ ಸಾಯುವಾಗ, ಅಳಿದುಳಿದ ಜನ ಶಿಲಾಯುಗಕ್ಕೆ ಮರಳುತ್ತಾರೆ. ಬೆಂಕಿಯಿಂದ ಬಚಾ ವಾಗಿ ಉಳಿದ ಅಷ್ಟಿಷ್ಟು ದಟ್ಟ ಕಾಡುಗಳೇ ಮಾನವನ ಅಂತಿಮ ಆಸರೆಯಾಗಿ ಉಳಿಯುತ್ತದೆ. ಆದರೆ ಕಾಡನ್ನೇ ಸರಿಯಾಗಿ ನೋಡಿರದ ಆಧುನಿಕ ಮಾನವ ಅಲ್ಲಿ ಒಂದೆರಡು ವರ್ಷ ಕಂದಮೂಲಗಳನ್ನೂ, ಪ್ರಾಣಿ ಪಕ್ಷಿಗಳನ್ನೂ ಬೇಟೆಯಾಡಿ ಬದುಕುವುದು ಸುಲಭವಲ್ಲ. ವಿಪರ್ಯಾಸವೆಂದರೆ, ನಾಗರಿಕತೆ ಸೋಂಕಿರದ ಕಾಡು ಕುರುಬರು, ಜೇನು ಕುರುಬರು, ಭಿಲ್ಲರು, ತೋಡರು, ಸಿದ್ದಿಗಳಂಥ ಅರಣ್ಯ ಮೂಲ ನಿವಾಸಿಗಳೇ ಅಣು ಸಮರದ ಮರುದಿನಗಳಲ್ಲಿ ಶೈಶವ ನಾಗರಿಕತೆಯ ತೊಟ್ಟಿಲು ತೂಗುವವರಾಗುತ್ತಾರೆ. ಆದರೆ ಮುಂದಿನ ಎರಡು–ಮೂರು ವರ್ಷಗಳಲ್ಲಿ ಎತ್ತರದ ವಾತಾವರಣದಲ್ಲಿರುವ ವಿಕಿರಣ ಧೂಳು ಮೋಡಗಳು ಕ್ರಮೇಣ ಧರೆಗಿಳಿದಾಗ, ವಾತಾವರಣದ ಓಸೋನ್ ಕವಚ ಭಗ್ನವಾಗಿ ಸೂರ್ಯನ ಅತಿನೇರಳೆ ಕಿರಣಗಳು ನೆಲ ತಲುಪುವಾಗ ದಟ್ಟ ಕಾಡೂ ದುರ್ದೆಸೆಗೀಡಾಗುತ್ತದೆ. ಬದುಕುಳಿದವರ ದೇಹದಲ್ಲಿ ರೋಗನಿರೋಧಕ ಶಕ್ತಿ ಹ್ರಾಸವಾಗಿ ಏಡ್ಸ್ ಹಾಗೂ ಅನೇಕ ವಿಧದ ಕ್ಯಾನ್ಸರ್ ರೋಗ ಗಳ ಬೀಡಾಗುತ್ತದೆ. ವಿಕಲಾಂಗ ವಿಕಲಬುದ್ದಿಯ ಮುಂದಿನ ಪೀಳಿಗೆ, ಆಲ್ಬರ್ಟ್ ಐನ್‌ಸ್ಟೀನ್‌ನ ಊಹೆಯಂತೆ ಕೇವಲ ಕಲ್ಲು ಮಣ್ಣುಗಳಿಂದಷ್ಟೇ ನಾಲ್ಕನೆಯ ವಿಶ್ವ ಸಮರವನ್ನು ಜರುಗಿಸಬೇಕಾದೀತು.

ಇಂಥ ಕರಾಳ ಭವಿಷ್ಯ ನಮ್ಮದಾಗದಂತೆ ಏನು ಮಾಡಬೇಕು ? ಈ ಬಗ್ಗೆ ವಿಜ್ಞಾನಿಗಳು ಯಾವ ಸಲಹೆಯನ್ನೂ ನೀಡಿಲ್ಲವಾದರೂ, ಸಮರ ಸಿದ್ಧತೆಗಳನ್ನು ಕೈ ಬಿಡುವಂತೆ ಶಕ್ತ ರಾಷ್ಟ್ರಗಳನ್ನು ಒತ್ತಾಯಿಸಬೇಕಾದುದು ಎಲ್ಲ ನಾಗರಿಕರ ಕರ್ತವ್ಯ ಎನ್ನುವುದು ಸ್ಪಷ್ಟವಾಗಿಯೇ ಇದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಆ ಬಗೆಯ ಒತ್ತಡ ತರುವುದು ವೈಯಕ್ತಿಕ ಮಟ್ಟದಲ್ಲಿ ಸುಲಭದ ಕೆಲಸವಲ್ಲ. ಅಂಥ ಒತ್ತಡ ಅತ್ಯಾವಶ್ಯಕವೆಂಬ ಮನೋಭಾವವೂ ನಮ್ಮಲ್ಲಿ ಬೆಳೆದುಬಂದಿಲ್ಲ. 1984ರಲ್ಲಿ ನ್ಯೂಯಾರ್ಕ್ ಪಟ್ಟಣದಲ್ಲಿ ಏಳೂವರೆ ಲಕ್ಷ ಜನ ಒಂದೆಡೆ ಸೇರಿ ಯುದ್ಧ ಸಿದ್ಧತೆ ಬೇಡ ವೆಂದು ಒತ್ತಾಯಿಸಿ ಶಾಂತಿ ಮೆರವಣಿಗೆ ನಡೆಸಿದ್ದರು. ನಮ್ಮಲ್ಲಿ 1986ರ ಮಾರ್ಚ್ ತಿಂಗಳಲ್ಲಿ ಗುಜರಾತಿನ ವೇಡ್‌ಚಿ ಎಂಬಲ್ಲಿ ಮುನ್ನೂರು ಮಂದಿಯ ಸಮ್ಮೇಳನ ಜರುಗಿದಾಗ ಕರ್ನಾಟಕದಿಂದ ಐದು ಜನ ಭಾಗವಹಿಸಿದ್ದರು. ತೃತೀಯ ವಿಶ್ವ ಸಮರ ನಮ್ಮಿಂದ ತುಂಬ ದೂರದಲ್ಲಿ ನಡೆಯುತ್ತದೆ ಎಂಬ ಆಶಾಭಾವನೆಯೇ ಇಂದು ಅಸಂಗತವಾಗಿದೆ. ಸಂಪರ್ಕ ಸೌಲಭ್ಯಗಳ ದೃಷ್ಟಿಯಿಂದ ಭೂಮಿ ಸಂಕುಚಿತಗೊಂಡಿರು ವಂತೆಯೇ ಸಮರಾಂಗಣವೂ ಮನೆಬಾಗಿಲಿಗೇ ಬಂದಿದೆ. ಅಣುಬಾಂಬ್‌ಗಳನ್ನು ಹೊತ್ತ ನೌಕೆಗಳು, ಜಲಾಂತರ್ಗಾಮಿಗಳು, ಉಪಗ್ರಹಗಳು ಭೂಮಿಯ ಎಲ್ಲ ಕಡೆ ಸುತ್ತುವರಿದಿದ್ದು, ಅಣ್ವಮುಕ್ತ ಪ್ರದೇಶ (ನ್ಯೂಕ್ಲಿಯರ್ ಫ್ರೀ ಝೋನ್) ಎಂಬುದೇ ಇಲ್ಲವೆನ್ನುತ್ತಾರೆ, ಭಾರತೀಯ ರಕ್ಷಣ ಅಧ್ಯಯನ ಸಂಸ್ಥೆಯ ನಿರ್ದೇಶಕ ಡಾ ॥ ಕೆ. ಸುಬ್ರಹ್ಮಣ್ಯಮ್.

ಜಗತ್ತಿನ ದೇಶಗಳ ಪೈಕಿ ನ್ಯೂಜಿಲ್ಯಾಂಡ್ ಮಾತ್ರ ಅಣುಸಮರದ ನಂತರವೂ ಬದುಕಿ ಉಳಿಯುವ ವ್ಯವಸ್ಥೆ ಕೆಲಮಟ್ಟಿಗೆ ಮಾಡಿಕೊಂಡಿದೆ ಎಂದು ಹೇಳಲಾಗಿ, ಇತರ ದೇಶಗಳಲ್ಲೂ ಈ ಕೆಳಗಿನಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕೆ ವಿಜ್ಞಾನಿ ಗಳು ಸಲಹೆ ನೀಡಿದ್ದಾರೆ.

ಆಹಾರ ಧಾನ್ಯ ಸಂಗ್ರಹಣೆಗೆ ಆದಷ್ಟು ಭದ್ರ ಗೋದಾಮುಗಳನ್ನು ನಿರ್ಮಿಸಿಕೊಳ್ಳುವುದು ; ಕೃಷಿಕಾರ್ಯ ಮತ್ತೆ ಸಾಗುವಂತೆ ಮಾಡಲು ಬೀಜನಿಧಿಗಳನ್ನು

ಸ್ಥಾಪಿಸುವುದು : ಪೆಟ್ರೋಲು. ಡೀಸೆಲ್, ಸೀಮೆಎಣ್ಣೆಗಳಿಗಾಗಿ ವಿದೇಶಗಳ ಅವ ಲಂಬನೆಯಿಂದ ಮುಕ್ತವಾಗುವುದು ; ರಫ್ತಿಗಾಗಿ ಬೆಳೆಯುವ ಕಾಫಿ, ತಂಬಾಕು, ರಬ್ಬರು ಇತ್ಯಾದಿಗಳನ್ನು ಆದಷ್ಟೂ ಕಮ್ಮಿ ಮಾಡಿ ಸ್ವದೇಶೀ ಮಾರುಕಟ್ಟೆಗೆ ಪೂರೈಕೆ ಯಾಗುವಷ್ಟೇ ಬೆಳೆಯುವುದು ; ರಸಗೊಬ್ಬರ, ಕೀಟನಾಶಕಗಳಂಥ ಶಕ್ತಿ ಆಧಾರಿತ ಕೃಷಿಕ್ರಮಕ್ಕೆ ಬದಲಾಗಿ ನೈಸರ್ಗಿಕ ವಿಧಾನದಲ್ಲೇ ಆಹಾರೋತ್ಪನ್ನ ಪಡೆಯಲು ಯತ್ನಿಸುವುದು : ಸಮಾಜದ ಎಲ್ಲ ಸ್ತರದಲ್ಲಿ ಸ್ಥಳೀಯ ಆಡಳಿತವನ್ನೇ ರೂಢಿಗೆ ತಂದು ಆದಷ್ಟು ಮಟ್ಟಿಗೆ ಸ್ಥಳೀಯ ಸಂಪನ್ಮೂಲಗಳನ್ನೇ ಆಧರಿಸಿ ಬದುಕಲು ಕಲಿಯುವುದು.

ಅರ್ಧ ಶತಮಾನದ ಹಿಂದೆ ಗಾಂಧೀಜಿ ಹೇಳಿದ್ದೂ ಇದೇ ತಾನೆ ?

ಅಣುಸಮರದ ನಂತರದ ಸ್ಥಿತಿ ಹೇಗಿರುತ್ತದೆಂದು ನಿರೂಪಿಸುವ 'ಆ ಮರುದಿನ' ('ದಿ ಡೇ ಆಕ್ಟರ್') ಎಂಬ ಚಿತ್ರದಲ್ಲಿ ಅಮೆರಿಕದ ಕನ್ಸಾಸ್ ನಗರ ಧೂಳೀಪಟ ವಾಗುವುದನ್ನು ತೋರಿಸುತ್ತಾರೆ. ಹೊಗೆ ಮುಸುಕಿದ ಮಸಣ ಮೌನವನ್ನು ಕಲಕು ವಂತೆ ಅರಬಂದು ನಜ್ಜುಗುಜ್ಜಾಗಿರುವ ಪ್ರಯೋಗಶಾಲೆಯ ಸಲಕರಣೆಗಳ ಮಧ್ಯೆ ಸ್ವಯಂಚಾಲಿತ ಮುರುಕು ಧ್ವನಿವರ್ಧಕದಿಂದ 'ಹಲೋ ಯಾರಾದ್ರೂ ಇದೀರಾ ?' ಎಂಬ ಕ್ಷೀಣ ಆಕ್ರಂದನದ ರೆಕಾರ್ಡ್ ಕೇಳಿ ಬಂದಾಗ ಉತ್ತರಿಸಲು ಒಬ್ಬರೂ ಉಳಿದಿರುವುದಿಲ್ಲ.

ಬಾಹ್ಯವಿಶ್ವದಲ್ಲಿ ಜೀವಿಗಳಿದ್ದಾವೆಯೇ ಎಂಬುದನ್ನು ಪರೀಕ್ಷಿಸಲು ನಾವು ಅದೇ ಪ್ರಶ್ನೆಯನ್ನು ವಿದ್ಯುತ್ ಕಾಂತೀಯ ತರಂಗಗಳ ಮೂಲಕ ನಕ್ಷತ್ರಲೋಕಕ್ಕೆ ರವಾನಿಸಿ ದ್ದೇವೆ. ಮನುಷ್ಯನ ಬುದ್ಧಿಮತ್ತೆ ಆಕಾಶದೆತ್ತರಕ್ಕೆ ವಿಸ್ತರಿಸಿದೆಯೆಂದು ದೂರ ವಿಶ್ವಕ್ಕೆ ಸಂದೇಶ ಚಿಮ್ಮಿದ್ದೇವೆ. ಅಲ್ಲಿಂದ ಮಾರುತ್ತರ ಬರುವವರೆಗೆ ಈ ಭೂಮಿ ಜೀವಂತವಾಗಿ ಇರುತ್ತೋ ಇಲ್ಲವೋ.

***

## ಲೇಖಕರ ಪರಿಚಯ : ನಾಗೇಶ ಹೆಗಡೆ

ನಾಗೇಶ ಹೆಗಡೆಯವರು 'ಪ್ರಜಾವಾಣಿ', 'ಸುಧಾ' ಪತ್ರಿಕೆಗಳ ವಿಜ್ಞಾನ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿಜ್ಞಾನದ ಪ್ರಗತಿ, ಅದರ ಸಾಮಾಜಿಕ ಪರಿಣಾಮಗಳು ಹಾಗೂ ಪರಿಸರ ಸಂರಕ್ಷಣೆಯ ಅಗತ್ಯಗಳನ್ನು ಕುರಿತು ಹಲವಾರು ಲೇಖನಗಳನ್ನು ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅಲ್ಲದೆ ಪರಿಸರ ವಿನಾಶದಿಂದ ಆಗುವ ದುಷ್ಪರಿಣಾಮಗಳನ್ನು ಜನಸಾಮಾನ್ಯರಿಗೆ ಪರಿಚಯಿಸುತ್ತ ಪರಿಸರ ಸಂರಕ್ಷಣೆಯ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾದ ಪಾತ್ರವಹಿಸುತ್ತಿದ್ದಾರೆ.

## 2. ಪರಿಸರ ಮತ್ತು ವಿಕಾಸ

– ಸುಂದರಲಾಲ ಬಹುಗುಣ
– ಕನ್ನಡಕ್ಕೆ: ಸುರೇಂದ್ರ ಕೌಲಗಿ

ಪರಿಸರದ ರಕ್ಷಣೆಗಾಗಿ ಕೆಲಸ ಮಾಡುತ್ತಿರುವಂಥವರಲ್ಲಿ ರಾಜಸ್ಥಾನ ರಾಜ್ಯವು ಅತ್ಯಂತ ದೊಡ್ಡ ತೀರ್ಥಕ್ಷೇತ್ರವಾಗಿದೆ. ಈ ವಿಷಯವನ್ನು ನನಗೆ ನನ್ನ ಗುರು ಸಂತ ವಿಜ್ಞಾನಿ ರಿಚರ್ಡ್ ಸೆಂಟ್ ಬರ್ವೆ ಬೇಕರ್ 1980 ರಲ್ಲಿ ಭಾರತಕ್ಕೆ ಬಂದಿದ್ದಾಗ ಪರಿಚಯಿಸಿದರು. ನಾನು ಅವರಿಗೆ ಅಮೃತಾದೇವಿಯ ಬಲಿದಾನ ಕಥೆಯನ್ನು ತಿಳಿಸಿದಾಗ ಅವರು ಗದ್ಗದಿತರಾದರು. "ನಾನಂತೂ ಬಹಳ ವೃದ್ಧನಾಗಿದ್ದೇನೆ, ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ಆದ್ದರಿಂದ ನನ್ನ ಬದಲಿಗೆ ನೀನು ಅಲ್ಲಿಯ ತೀರ್ಥಯಾತ್ರೆ ಮಾಡಿ ಬಾ" ಎಂದು ನನಗೆ ಹೇಳಿದರು. ಅವರು ಅಮೃತಾ ದೇವಿಯ ಬಲಿದಾನದ ಕಥೆಯನ್ನು ವಿಶ್ವದ ನೂರೆಂಟು ದೇಶಗಳಲ್ಲಿ ಬರೆದು ಪ್ರಚಾರ ಮಾಡಿದರು. "ವಿಶ್ವದ ಮೊದಲನೆಯ ಅಪ್ಪಿಕೊ ಆಂದೋಲನ' ಎಂಬ ಅವರ ಲೇಖನ ಪ್ರಪಂಚದ ಅನೇಕ ದೇಶ ಮತ್ತು ಭಾಷೆಗಳಲ್ಲಿ ಮುದ್ರಿತವಾಗಿದೆ.

ಅಮೃತಾದೇವಿಯ ಬಲಿದಾನದ ಮೂಲ ಬಹಳ ಮೊದಲೇ ಇದ್ದಿತ್ತು. 15 ನೇ ಶತಮಾನದಲ್ಲಿ ಭಾರತದಲ್ಲಿ ಜಂಭೋಜಿ ಮಹಾರಾಜ ವಿಷ್ಣೋಯಿ ಪಂಥವನ್ನು ಪ್ರಾರಂಭಿಸಿದ್ದರು. ದೇಶದ ಪ್ರತಿಯೊಬ್ಬ ವ್ಯಕ್ತಿಗೂ ಜಂಭೋಜಿ ಮಹಾರಾಜರ ಕಥೆ ಗೊತ್ತಾಗಬೇಕು. ನಮ್ಮ ದೇಶದಲ್ಲಿ ಎಷ್ಟೊಂದು ಸಂತರಾದರೋ ಅವರಲ್ಲೆಲ್ಲ ಜಂಭೋಜಿಯವರನ್ನು ಸಂತ ಶಿರೋಮಣಿ ಎಂದೇ ತಿಳಿದಿದ್ದೇನೆ. 15 ನೇ ಶತಮಾನದಲ್ಲಿ ಭಾರತದಲ್ಲಿ ಇಬ್ಬರು ಮಹಾನ್ ಸಂತರಾಗಿ ಹೋದರು. ಅವರಿಬ್ಬರೂ ಜನರ ಸರಳವಾದ ವ್ಯಾವಹಾರಿಕ ಜೀವನದಲ್ಲಿ ಪ್ರಕೃತಿಯ ಸಂಬಂಧ ಬರುವಂತೆ ಮಾಡಿದರು. ಜಂಭೋಜಿ

ಮಹಾರಾಜರು ಗೋಪಾಲಕರಾಗಿದ್ದರು. ಇಂದು ಸಹ ರಾಜಸ್ಥಾನದ ಬಿಕಾನೇರಿನ ಮರಳುಗಾಡಿನಲ್ಲಿ ಯಾವ ರೀತಿ ಎಲ್ಲರೂ ಗೋಪಾಲನೆ ಮಾಡುತ್ತಾರೋ ಅದೇ ರೀತಿ ಜಂಭೋಜಿಯವರೂ ಗೋಪಾಲನೆ ಮಾಡುತ್ತಿದ್ದರು. ಈಗಿನಂತೆ ಆಗಲೂ ಬರಗಾಲ ಬಿದ್ದಿತ್ತು. ಹಳ್ಳಿಯವರೆಲ್ಲರೂ ಹಸುಗಳನ್ನು ತೆಗೆದುಕೊಂಡು ಪಂಜಾಬಿನ ಕಡೆಗೆ ವಲಸೆ ಹೋದರು. ಆದರೆ ಜಂಭೋಜಿ ಮಹಾರಾಜ ಮಾತ್ರ ತಮ್ಮ ಸ್ಥಳದಲ್ಲಿಯೇ ಉಳಿದುಕೊಂಡರು. "ನಾನು ಈ ಊರು ಬಿಟ್ಟು ಕದಲುವುದಿಲ್ಲ"ಎಂದು ಹಟವಾಗಿ ಹೇಳಿದರು. "ಇಷ್ಟೊಂದು ದಯಾಳುವಾಗಿರುವ ಈ ಪ್ರಕೃತಿ, ನಮ್ಮ ಜೀವನಕ್ಕೆ ಎಲ್ಲ ಸಾಧನವನ್ನು ದೊರಕಿಸಿಕೊಡುವ ಈ ಪ್ರಕೃತಿ ಇಷ್ಟೊಂದು ಕ್ರೂರವೇಕೆ ಆಗಿದೆ, ಏಕೆ ಬರ ಬಿದ್ದಿದೆ?" ಎಂದು ಅವರು ಚಿಂತನೆ ಮಾಡಲು ಪ್ರಾರಂಭಿಸಿದರು, ಚಿಂತನೆ ಮಾಡುತ್ತಾ, "ಮಾನವನು ಪ್ರಕೃತಿಯೊಂದಿಗೆ ಮಾಡಿದ ಅತ್ಯಾಚಾರದ ಪರಿಣಾಮವಾಗಿ ಅದು ಮನುಷ್ಯನನ್ನು ದಂಡಿಸುತ್ತಿದೆ" ಎಂಬ ತೀರ್ಮಾನಕ್ಕೆ ಬಂದರು. ಹಾಗಾದರೆ ನಾವು ಏನು ಮಾಡಬೇಕು? ನಾವು ಪ್ರಕೃತಿಯ ಜೊತೆಗೆ ಸದ್ ವ್ಯವಹಾರ ಮಾಡಬೇಕು. ಆಗಿನ ಕಾಲದಲ್ಲಿ ಅಸೆಂಬ್ಲಿ ಇರಲಿಲ್ಲ, ಸರಕಾರ ಇರಲಿಲ್ಲ. ಆದ್ದರಿಂದ ಜಂಭೋಜಿ ಸ್ವಂತಕ್ಕಾಗಿ ಕೆಲವು ನಿಯಮ ಮಾಡಿಕೊಂಡರು. ಆತ್ಮಾನುಶಾಸನದ ನಿಯಮ ಮಾಡಿಕೊಂಡರು. ಅವುಗಳಲ್ಲಿ ಈ ಎರಡು ನಿಯಮಗಳಿದ್ದವು: ಒಂದು, ಪಶು ಪಕ್ಷಿಗಳನ್ನು ಹೊಡೆಯಕೂಡದು ಮತ್ತು ಎರಡನೆಯದು, ಹಸಿ ಮರವನ್ನು ಕಡಿಯಕೂಡದು. ಈ ನಿಯಮಗಳನ್ನು ಅವರು ಸ್ವತಃ ಪಾಲಿಸಲು ಪ್ರಾರಂಭಿಸಿದರು. ಆದ್ದರಿಂದ ಸ್ವಲ್ಪ ಸಮಯದ ನಂತರ ಎಲ್ಲ ಕಡೆಗೂ ಹಸಿರು ಕಾಣಿಸಿತು. ಮೊದಲು ದನಕರುಗಳಿಗೆ ಹುಲ್ಲು ಸಿಗಲು ಪ್ರಾರಂಭವಾಯಿತು. ನಾಲ್ಕು ಕಡೆಗೂ ಹಸಿರು ಉಂಟಾದಾಗ ಸಂತೋಷವಿರುತ್ತದೆ. ಅವರ ದನಕರುಗಳು ಬಹಳ ದಷ್ಟಪುಷ್ಟವಾದವು. ಬರಗಾಲ ಮುಗಿದ ನಂತರ ಪಂಜಾಬಕ್ಕೆ ವಲಸೆ ಹೋಗಿದ್ದ ಊರಿನ ಜನರು ಹಿಂದಿರುಗಿದರು. ಜಂಭೋಜಿ ಮೂರ್ಖನೆಂದೂ, ಸತ್ತಿರಬಹುದೆಂದೂ ಜನರು ಭಾವಿಸಿದ್ದರು. ಆದರೆ ಅವರು ಊರಿಗೆ ಹಿಂದಿರುಗಿದ ಮೇಲೆ ಜಂಭೋಜಿ ಮತ್ತು ಅವರ ಪಶುಗಳು ಬಹಳ ಆರೋಗ್ಯದಿಂದಿರುವುದನ್ನು ನೋಡಿದರು.

"ಇದು ಜಂಭೋಜಿಯ ಭೂತವಲ್ಲ ತಾನೆ! ನಾವು ಹೋದಾಗ ಅವರು ಬಹಳ ದುರ್ಬಲರಾಗಿದ್ದರು. ಈಗ ಅವರು ಇಷ್ಟೊಂದು ಎಂದು ಚಕಿತರಾದರು. ಅವರು ಜಂಭೋಜಿಯನ್ನು ಕೇಳಿದರು, "ನೀವು ಇಷ್ಟೊಂದು ಆರೋಗ್ಯವಾಗಿದ್ದೀರಿ, ನಿಮ್ಮ ಪಶುಗಳೂ ಕೂಡ ಆರೋಗ್ಯವಾಗಿವೆ, ಏನು ಕಾರಣ?" ಜಂಭೋಜಿ ಹೇಳಿದರು, 'ತಮ್ಮಂದಿರ, ಜಂಭೋಜಿಯವರನ್ನು ನೋಡಿ, ನಾನು ನನಗಾಗಿ ಸದಾಚಾರದ 29 ನಿಯಮಗಳನ್ನು ಮಾಡಿಕೊಂಡಿದೆ. ಆ ನಿಯಮಗಳನ್ನು ಪಾಲಿಸುತ್ತಿದ್ದುದಕ್ಕೆ ಇದೆಲ್ಲವೂ ಸಾಧ್ಯವಾಯಿತು. ಆಗ ಜನರು ತಮಗೂ ಆ * ನಿಯಮಗಳನ್ನು ತಿಳಿಸಬೇಕೆಂದು ಕೋರಿಕೊಂಡರು. ಜಂಭೋಜಿ ಆ 29 ನಿಯಮಗಳನ್ನು ತಿಳಿಸಿದರು. ಆಗಿನ ಕಾಲದಲ್ಲಿ ಕೋಟಿ, ದಶಕೋಟಿಗಳ ಮಾತಂತೂ ಇರಲಿಲ್ಲ. 20 ರವರೆಗೆ ಮಾತ್ರ ಎಣಿಕೆ ಇರುತ್ತಿತ್ತು. 20 ಮತ್ತು 9 ನಿಯಮಗಳು ಆದವು. " ಬೀಸ್ ಔರ್ ನವ್" ನಿಯಮವನ್ನು ಒಪ್ಪುವಂಥವರೇ ಆತ್ಮಾನುಶಾಸನದಿಂದ ಮತ್ತು ಸ್ವತಃ ತಮ್ಮ ಮೇಲೆ ಎವುಗಳ ಪ್ರಯೋಗ ಮಾಡಿಕೊಳ್ಳುವುದರಿಂದ "ವಿಷ್ಣೋಯಿ" ಆದರು. ಅವರು ಸಿದ್ದಿಯನ್ನು ಪಡೆದಿದ್ದರು. ಇಂದು ಈ ಯುಗದಲ್ಲಿ ಯಾವ ಕಾನೂನು ಯಾವುದನ್ನು ಮಾಡಲಾರದೋ ಅಂಥದು ಜಂಭೋಜಿಯವರ ಉಪದೇಶ ಮತ್ತು ನಿಯಮಗಳ ಕಟ್ಟುನಿಟ್ಟಾದ ಆಚರಣೆಯಿಂದ ಆಗುತ್ತಿದೆ. ಅಷ್ಟು ಅವರ ಪ್ರಭಾವವಿದೆ.

ನಾನು ಮೊಟ್ಟಮೊದಲು 1980 ರಲ್ಲಿ ಖೇಜಡಲಿಗೆ ಹೋಗಿದ್ದೆ. ಅಲ್ಲಿ ಎಲ್ಲ ಕಡೆಗೂ ಕೃಷ್ಣ ವರ್ಣದ ಜಿಂಕೆಗಳು ಅಲೆದಾಡುತ್ತಿರುತ್ತಿದ್ದವು.

ಆ ಕ್ಷೇತ್ರದಲ್ಲಿ ಸೈನ್ಯದ ಶಿಬಿರವೂ ಇರುತ್ತಿತ್ತು. ಸಿಪಾಯಿಗಳು ಅಭ್ಯಾಸ ಮಾಡುವುದಕ್ಕೆ ಜಿಂಕೆಗಳನ್ನು ಹೊಡೆಯುತ್ತಿದ್ದರು. ಆಗ ವಿಷ್ಣೋಯಿಗಳು ಇಪಾಯಿಗಳ ಬೆನ್ನು ಹತ್ತುತ್ತಿದ್ದರು. ಯಾವುದಾದರೂ ಮರಿಜಿಂಕೆ ತಪ್ಪಿಸಿ ಕೊಂಡರೆ ಅಲ್ಲಿಯ ಸ್ತ್ರೀಯರು ತಮ್ಮ ಮೊಲೆ ಹಾಲು ಉಣಿಸಿ ಅದರ ಪಾಲನೆ, ದೋಷಣೆ ಮಾಡುತ್ತಿದ್ದಂತಹ ಘಟನೆಗಳು ಇರುತ್ತಿದ್ದವು.

1730 ರ ಕಥೆಯನ್ನು ನೀವು ಕೇಳಿರಬಹುದು. ಮಹಾರಾಜ ಜಯಸಿಂಹಜಿ ಆ ಸಮಯದಲ್ಲಿ ಜೋಧಪುರದ ರಾಜರಾಗಿದ್ದರು. ಯುದ್ದ ಮತ್ತು ಜಗಳಗಳ ನಂತರ ಅವರಿಗೆ ಬಿಡುವು ಸಿಕ್ಕಿತು. ಆಗ ಅವರು ಕೋಟೆ ಕಟ್ಟಬೇಕು. ಸುಣ್ಣಕ್ಕಾಗಿ ಮರ ಬೇಕು. ಮರ ಎಲ್ಲಿ ಸಿಗುತ್ತದೆ? ಖೇಜಡಲಿಯಲ್ಲಿ ವಿಷ್ಣೋಯಿಗಳ ಹತ್ತಿರ ದೊಡ್ಡ ದೊಡ್ಡ ಮರಗಳಿವೆ ಎಂದು ಜನ ಹೇಳಿದರು. ಆಗ ಮಹಾರಾಜನು ತನ್ನ ಕೆಲಸಗಾರರಿಗೆ, "ಖೇಜಡಲಿಗೆ ಹೋಗಿರಿ ಮತ್ತು ಮರ ಕಡಿದು ತನ್ನಿ' ಎಂದು ಆಜ್ಞೆ ಮಾಡಿದ. ಕೆಲಸಗಾರರು ಮಹಾರಾಜನ ಆಜ್ಞೆಯಾಗುತ್ತಲೇ ಕೊಡಲಿ ತೆಗೆದುಕೊಂಡು ಖೇಜಡಲಿಗೆ ಹೋದರು. ಅಮೃತಾದೇವಿ ಆ ಸಮಯದಲ್ಲಿ ಮಜ್ಜಿಗೆ ಕಡೆಯುತ್ತಿದ್ದಳು. ಖಟ್ ಖಟ್ ಸದ್ದನ್ನು ಕೇಳುತ್ತಲೇ ಹೊರಗೆ ಬಂದು, "ಇದೇನು ಮಾಡುತ್ತಿದ್ದೀರಿ?" ಎಂದು ಜೋರಾಗಿ ಕೇಳಿದಳು. "ಮಹಾರಾಜರ ಆಜ್ಞೆಯಾಗಿದೆ. ಅದಕ್ಕಾಗಿ ಮರವನ್ನು ಕಡಿಯುತ್ತಿದ್ದೇವೆ' ಎಂಬ ಉತ್ತರ ಬಂತು. ಆಗ ಅಮೃತಾದೇವಿಯು, “ಮರ ಕಡಿಯುವುದು ನಮ್ಮ ಪಂಥಕ್ಕೆ ವಿರೋಧವಾದುದು. ನೀವು ಮರವನ್ನು ಕಡಿಯಕೂಡದು” ಎಂದು ಹೇಳಿದಳು. “ನಾವು ಮರವನ್ನು ಇಲ್ಲಿ ಕಡಿಯದೆ ಬೇರೆ ಕಡೆಗೆ ಹೋಗಬೇಕಾದರೆ ನೀನು ನಮಗೆ ದಂಡ ಕೊಡಬೇಕು” ಎಂದು ಕೆಲಸಗಾರರು ಹೇಳಿದರು. ಇಂದಿನ ಕಾಲದ ಮಾತಾಗಿದ್ದರೆ ಅವಳು ಮಹಾರಾಜರಿಗೆ ದಂಡದೊಂದಿಗೆ ಲಂಚವನ್ನೂ ತೆಗೆದುಕೊಂಡು ಹೋಗಿ ಎಂದು ಬಹುಶಃ ಹೇಳುತ್ತಿದ್ದಳು. ಆದರೆ ಅವಳು, "ದಂಡ ಕೊಡುವುದು ನಮ್ಮ ಧರ್ಮಕ್ಕೆ ಅವಮಾನ' ಎಂದು ಹೇಳಿ ತಕ್ಷಣ ಆ ಮರವನ್ನು ರಕ್ಷಿಸಲೇಬೇಕು ಮತ್ತು ಮರಗಳನ್ನು ಕಡಿಯುವುದಕ್ಕೆ ಅವಕಾಶ ಕೊಡಕೂಡದೆಂದು ನಿರ್ಣಯಿಸಿದಳು. ಆಗ ಅವಳು ತನ್ನ ತಲೆದಂಡದ ಬದಲಾಗಿ ಮರ ಉಳಿಯುವುದಾರೆ ಅದೇ ಹೆಚ್ಚು ಲಾಭದಾಯಕ ವ್ಯಾಪಾರವಾಗುವುದೆಂದು ಹೇಳಿದಳು! ಪರಿಸರದ ಮಹತ್ವದ ವಿಷಯವಾಗಿ ಇದಕ್ಕಿಂತಲೂ ಹೆಚ್ಚಾದ ಶಿಕ್ಷಣ ಯಾವುದಿದೆ? ವ್ಯವಹಾರಿಕ ಜೀವನದಲ್ಲಿ ಇದನ್ನು ಜಾರಿಗೆ ಕೊಡುವ ಕೆಲಸವನ್ನು ಅಮೃತಾದೇವಿ ಮಾಡಿದಳು ಮತ್ತು ವೃಕ್ಷಪ್ರೇಮಿ ಮಾನವನಾದ ಸಂತ

ಬರ್ವಬೇಕರ್ ಕೂಡ ಈ ಮಾತಿನಿಂದ ಬಹಳ ಪ್ರಭಾವಿತರಾದರು. ಇಂದಿಗೆ 200 ವರ್ಷಗಳ ಮುಂಚೆ ಅವಳು ಹೇಳಿದಳು, "ತಲೆಹೋಗಿ ಮರ

ಉಳಿಯುವುದಾದರೆ ಅದೇ ಹೆಚ್ಚು ಲಾಭದಾಯಕ", ಇಂದು ನಾವು ಇದರ ಮಹತ್ವ ತಿಳಿಯುತ್ತಿದ್ದೇವೆ. ಆದರೆ ಮರಗಳ ರಕ್ಷಣೆಗಾಗಿ ಹೋರಾಟ ಮಾಡುವ ಪ್ರೇರಣೆ ಅವಳಿಗೆ ಎಲ್ಲಿಂದ ಬಂತು? ಜಂಭೋಜಿಗಾದರೋ ಮೇವಿನ ಪ್ರಶ್ನೆ ಇತ್ತು. ಆದರೆ ಇಂದಿನ ನಮ್ಮ ತಲೆಮಾರಿನವರ ಮುಂದೆ ಪ್ರಾಣಿಮಾತ್ರದ ಅಸ್ತಿತ್ವದ ಪ್ರಶ್ನೆ ಇದೆ. ಪ್ರಾಣಿಗಳ ಅಸ್ತಿತ್ವಕ್ಕಾಗಿ ಪ್ರಾಣವಾಯುವಿನ ಅವಶ್ಯಕತೆ ಇದೆ. ಮರಗಳ ಮೊಟ್ಟ ಮೊದಲನೆಯ ಇಳುವರಿಯೇ ಪ್ರಾಣವಾಯು, ಅಪ್ಪಿಕೊ ಅಂದೋಲನ ಇಡೀ ವಿಶ್ವದಲ್ಲಿ ವಿಖ್ಯಾತವಾಗಿದ್ದರೆ "ಕಾಡಿನಿಂದ ಯಾವ ಉಪಕಾರ? ಮಣ್ಣು, ನೀರು ಮತ್ತು ವಾಯು" ಎಂಬ ಘೋಷಣೆಯ ಕಾರಣದಿಂದ.

ರಾಜಸ್ಥಾನದ ಯಾವ ಭೂಮಿಯ ಮೇಲೆ ಈ ಮಂತ್ರದ ಸಿದ್ಧಿಯಾಗಿತ್ತೋ ಮತ್ತು ಎಲ್ಲಿ ಇಂದಿಗೂ ಕೂಡ ಅದರ ಪ್ರಭಾವವಿದೆಯೋ ಅಲ್ಲಿ ಪರಿಸರದ → ಬಗ್ಗೆ ಯಾವ ಶಿಕ್ಷಣ ನಾ ಕೊಡಬಲ್ಲೆ? ನಾನು ನಿಮಗೆ ಕೇವಲ ಇಷ್ಟು ಮಾತ್ರ – ವಿನಂತಿಸಿಕೊಳ್ಳಬಲ್ಲೆ: "ನಮಗೆ ಹೊರಗಡೆಯಿಂದ ಯಾವ ತರದಲ್ಲಿ ಶಿಕ್ಷಣ ದೊರೆತಿದೆಯೊ ಅದನ್ನು ಮೊದಲು ಮುರಿದುಹಾಕಲು ಪ್ರಾರಂಭಿಸೋಣ. ಪ್ರಪಂಚದ ಓರ್ವ ದೊಡ್ಡ ವಿಚಾರಕ ಇವಾನ್ ಇಲಿಚ್ ಅವರು ಇಂದಿನ ಪರಿಸ್ಥಿತಿಯ ಬಗ್ಗೆ ಬಹಳ ವ್ಯಾಕುಲರಾಗಿದ್ದಾರೆ ಮತ್ತು ಜನಕ್ಕೆ ಹೊಸ ಮಾರ್ಗ ತೋರಿಸುತ್ತಿದ್ದಾರೆ. ಅವರು ಮೆಕ್ಸಿಕೋದ ಆದಿವಾಸಿ ಗ್ರಾಮದಲ್ಲಿ ಗಾಂಧೀಜಿಯವರಂತೆ ವಾಸಿಸುತ್ತಿದ್ದಾರೆ. ಕೆಲ ವಿಚಾರವಂತ ಕ್ರಾಂತಿಕಾರರು ಅವರ ಭೇಟಿಗಾಗಿ ಹೋದರು. ನಾನು ಕೂಡ ಅವರಲ್ಲಿಗೆ ಹೋದೆ. 2–3 ದಿನಗಳವರೆಗೆ 2 ಅವರ ಗುಡಿಸಿಲಲ್ಲಿ ಕುಳಿತು ಅಭಿವೃದ್ಧಿಯ ಬಗ್ಗೆ ವಿಚಾರ ಮಾಡಿದೆ. ಇವಾನ್ ಇಲಿಚ್‌ರವರನ್ನು, "ನೀವು ಯಾವ ಹೊಸ ಚಿಂತನೆ ಪ್ರಾರಂಭಿಸಿದ್ದೀರೋ ಮತ್ತು ಯಾವ ಪುಸ್ತಕ ಮೊದಲಿಗೆ ಬರೆದಿದ್ದೀರೋ– ಡೀಸ್ಕೂಲಿಂಗ್

ಸೊಸೈಟಿ– ಈ ಹೆಸರನ್ನು ಈ ಪುಸ್ತಕಕ್ಕೆ ಏಕೆ ಇಟ್ಟಿರಿ?" ಎಂದು ಕೇಳಿದೆ. ಅವರು ಹೀಗೆ ಉತ್ತರಿಸಿದರು, "ಎಲ್ಲ ಜಗಳಗಳ ಮೂಲ ಶಿಕ್ಷಣವೇ ಆಗಿದೆ. ಶಿಕ್ಷಣದ ಕಾರಣದಿಂದಾಗಿ ಪ್ರಪಂಚದಲ್ಲಿ ಸಮಸ್ಯೆಗಳು ಉಂಟಾಗುತ್ತೆ. ಆದ್ದರಿಂದ ಜನರಿಗೆ ಒಂದು ರೀತಿಯ ಆಘಾತವಾಗಲೆಂಬ ದೃಷ್ಟಿಯಿಂದ ಉದ್ದೇಶಪೂರ್ವಕವಾಗಿ ಈ ಹೆಸರನ್ನು ಇಟ್ಟಿದ್ದೇನೆ". ಕಳೆದ 250– 300 ವರ್ಷಗಳಿಂದ ಪ್ರಪಂಚದಲ್ಲಿ ತಪ್ಪು ಶಿಕ್ಷಣವನ್ನು ಕೊಡಲಾಗುತ್ತಿದೆ. ಈ ತಪ್ಪು ಶಿಕ್ಷಣ ಯುರೋಪಿನಲ್ಲಿ ಔದ್ಯೋಗಿಕ ಕ್ರಾಂತಿಯ ನಂತರ ಪ್ರಾರಂಭವಾಯಿತು. ಔದ್ಯೋಗಿಕ ಕ್ರಾಂತಿ ಎರಡು ದೊಡ್ಡ ಸುಳ್ಳುಗಳನ್ನು ಪ್ರಚಾರ ಮಾಡಿದೆ. ಮೊದಲನೆಯ ಸುಳ್ಳು ಏನೆಂದರೆ, ಪ್ರಕೃತಿ ವ್ಯಾಪಾರದ ವಸ್ತು (ಕಮೊಡಿಟಿ) ಎಂಬುದು. ಪ್ರಕೃತಿ ಯಾವಾಗ ವ್ಯಾಪಾರದ ವಸ್ತುವಾಗಿಬಿಡುತ್ತದೋ ಆಗ ಅದರ ಇತರ ಅಸಂಖ್ಯಾತ ಅಜ್ಞಾತ ಲಾಭಗಳೆಲ್ಲ ಲುಪ್ತವಾಗುತ್ತವೆ ಮತ್ತು ಈ ಪ್ರಕೃತಿಯ ಬೆಲೆಯನ್ನು ರೂಪಾಯಿ– ಪೈಸೆಗಳಲ್ಲಿ ಅಳೆಯುತ್ತ ಹೋಗುತ್ತೇವೆ. ಸಾರ್ವಜನಿಕ ಸ್ಥಳದಲ್ಲಿ ಒಂದು ಮಾವಿನ ಮರವಿದೆ. ಆ ಮರದಡಿಗೆ ದಣಿದ ಸುಸ್ತಾದ ಪ್ರಯಾಣಿಕರು ಬರುತ್ತಾರೆ, ವಿಶ್ರಾಂತಿ ಪಡೆಯುತ್ತಾರೆ. ಅವರಿಗೆ ಪ್ರಾಣವಾಯು ದೊರೆಯುತ್ತದೆ. ಪಕ್ಷಿಗಳು ಅದರ ಮೇಲೆ ವಸತಿಯನ್ನು ಮಾಡುತ್ತವೆ, ಗೂಡು ಕಟ್ಟುತ್ತವೆ, ಹಣ್ಣುಗಳು ದೊರೆಯುತ್ತವೆ. ಇದು ಪರೋಕ್ಷವಾದ ಲಾಭ. ಸ್ವಲ್ಪ ಸಮಯದ ನಂತರ ಆ ಮರ ಒಬ್ಬ ವ್ಯಕ್ತಿಯ ವ್ಯಕ್ತಿಗತ ಆಸ್ತಿಯಾಗುತ್ತದೆ. ಆನಂತರ ಅವನು ಆ ಮರದಿಂದ ತನಗೆ ಯಾವ ಯಾವ ಲಾಭಗಳು ದೊರೆಯುತ್ತವೆ ಎಂಬುದಾಗಿ ಆಲೋಚಿಸುತ್ತಾನೆ. ಕೆಲವು ದಿನಗಳ ನಂತರ ಸಾಮಿಲ್‌ನವನು ಅವನ ಬಳಿಗೆ ಬರುತ್ತಾನೆ ಮತ್ತು ಹೇಳುತ್ತಾನೆ, "ನೀನು ಎಷ್ಟೊಂದು ಮೂರ್ಖನಿದ್ದೀಯ? 5000 ರೂಪಾಯಿಗಳನ್ನು ಕೊಡುತ್ತೇನೆ." ಇದೇ 'ಕಮೋಡಿಟಿ'ಯ ಅರ್ಥ. ಈ ಮರದಿಂದ ಪ್ರಾಣವಾಯು ದೊರೆಯುತ್ತದೆ, ಈ ಮರದಲ್ಲಿ ಪಕ್ಷಿಗಳು ಆಶ್ರಯ ಪಡೆದಿವೆ, ದಣಿದು ಬಂದ ಜನ ಇದರ ಕೆಳಗೆ ವಿಶ್ರಮಿಸುತ್ತಾರೆ, ಅವರಿಗೆ ಆಕ್ಸಿಜನ್ ದೊರೆಯುತ್ತದೆ, ಈ ಮುಂತಾದ ಯಾವ ಸಂಗತಿಯ ಬಗ್ಗೆಯೂ ಆ ಮನುಷ್ಯನಿಗೆ ಚಿಂತೆಯಿಲ್ಲ. ಔದ್ಯೋಗಿಕ ಕ್ರಾಂತಿ ಪ್ರಚಾರ ಮಾಡಿರುವ ಎರಡನೆಯ ಸುಳ್ಳು ಏನೆಂದರೆ,

ಸಮಾಜ ಕೇವಲ ಮನುಷ್ಯರದೇ ಇದೆ. ಆದ್ದರಿಂದ ಏನೆಲ್ಲ ಶಾಸ್ತ್ರಗಳಿವೆಯೋ, ಏನೆಲ್ಲ ವಿಜ್ಞಾನದ ವಿಕಾಸವಾಗಿದೆಯೋ ಅದೆಲ್ಲವೂ ಮನುಷ್ಯನ ಸುಖಕ್ಕೇ ಇವೆ. ಈ ಸಮಾಜ ಕೇವಲ ಮನುಷ್ಯರದೇ ಆಗಿದೆ ಎಂಬುದು ಸಂಪೂರ್ಣ ಸುಳ್ಳು. ಏಕೆಂದರೆ ಸಮಾಜವು ಕೇವಲ ಮನುಷ್ಯರದೇ ಆಗಲು ಸಾಧ್ಯವಿಲ್ಲ. ಆಗ ಭೂಮಿಯ ಮೇಲೆ ಮನುಷ್ಯರೇ ಇರುತ್ತಿದ್ದರು, ಬೇರೆ ಪ್ರಾಣಿಗಳು, ಗಿಡಮೂಲಿಕೆಗಳು ಈ ಭೂಮಿಯ ಮೇಲೆ ಇರುತ್ತಿರಲಿಲ್ಲ. ಇಂದಿನ ಮನುಷ್ಯ ಬಹಳ ದುರಾಸೆಯುಳ್ಳವನಾಗಿದ್ದಾನೆ ಮತ್ತು ಈ ಭೂಮಿಯ ಮೇಲೆ ಇರುವುದೆಲ್ಲವನ್ನು ತನ್ನ ಭೋಗಲಾಲಸೆಯ ಸಾಧನವನ್ನಾಗಿ ಮಾಡಿಕೊಂಡಿದ್ದಾನೆ. ಆದರೆ ಈ ವಸ್ತುಗಳು ಕಡಿಮೆಯಾಗಿ ಹೋಗುತ್ತಿರುವುದರಿಂದ ಅವನಿಗೆ ಈಗ ಚಿಂತೆ ಪ್ರಾರಂಭವಾಗಿದೆ.

ಈ ಭೂಮಿಯೇನಿದೆ ಮತ್ತು ಇದರಲ್ಲಿ ಇರುವ ಇಡೀ ಜೀವನವೇನಿದೆ ಅದು ಪರಸ್ಪರ ಅವಲಂಬಿತವಾಗಿದೆ. ವ್ಯಾಪಾರಿಯೊಬ್ಬನು ತಾನು ಕೇವಲ ಒಂದು ಮರವನ್ನು ಕಡಿದುದಾಗಿ ಹೇಳುತ್ತಾನೆ. ಆದರೆ ಆರ್ಥಿಕ ದೃಷ್ಟಿಯಿಂದ ಅವನಿಗೆ ಲಾಭಕರವಾಗಿದ್ದರೂ ಆ ಮರದೊಂದಿಗೆ ಜೀವಿಸುತ್ತಿದ್ದ ಬೇರೆ ವನಸ್ಪತಿಗಳಿಗೆ, ಜೀವಿಗಳಿಗೆ ನಷ್ಟವಾಯಿತೆಂಬ ಪರಿವೆ ಅವನಿಗಿಲ್ಲ. ಈ ಎರಡು ಸ್ವ ಸುಳ್ಳುಗಳ ಮೇಲೆ ನಮ್ಮ ಇಡೀ ಅಭಿವೃದ್ಧಿಯ ಕಲ್ಪನೆ ಇದೆ.

ಯಾವಾಗ ಪ್ರಕೃತಿಯು ವ್ಯಾಪಾರದ ವಸ್ತುವಾಯಿತೋ ಮತ್ತು ಸಮಾಜವು ಕೇವಲ ಮನುಷ್ಯರಿಗಾಗಿಯೇ ಎಂಬ ತಿಳುವಳಿಕೆ ಉಂಟಾಯಿತೋ ಆಗ ಅದರ ಅರ್ಥ ಮನುಷ್ಯನು ತನ್ನ ಉಪಭೋಗಕ್ಕಾಗಿ, ತನ್ನ ಬೇಡಿಕೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಪ್ರಕೃತಿಯನ್ನು ಯಾವ ರೀತಿಯಲ್ಲಿಯೇ ಆಗಲಿ ಶೋಷಿಸುವ ಅಧಿಕಾರ ಪಡೆದಿದ್ದಾನೆ ಎಂದಾಯಿತು. ಪ್ರಕೃತಿಯೊಂದಿಗೆ ಮೂರು ಪ್ರಕಾರಗಳ ಸಂಬಂಧವಿರುತ್ತದೆ. ಒಂದು, ಸ್ತನ್ಯಪಾನ ಸಂಬಂಧ. ಉದಾಹರಣೆಗೆ, ತಾಯಿಯ ಸ್ತನ್ಯಪಾನ ಮಾಡಿ ಮಗು ಬದುಕಿರುತ್ತದೆ. ಇದರಿಂದಾಗಿ ತಾಯಿ ಮಗು ಇಬ್ಬರ ಆರೋಗ್ಯವೂ ಚೆನ್ನಾಗಿರುತ್ತದೆ. ಇಬ್ಬರೂ ಸಂತೋಷದಿಂದಿರುತ್ತಾರೆ. ಎರಡನೆಯದು, ಹಾಲು ಕರೆಯುವ ಸಂಬಂಧ. ಕೆಲವು ಜನರು ಬುದ್ಧಿವಂತರಾಗಿ ಹಾಲು ಕರೆಯುತ್ತಾರೆ. ಅವರು ಹಸುವಿನ ಆರೋಗ್ಯವನ್ನು ಗಮನದಲ್ಲಿ ಇಟ್ಟು ಕೊಳ್ಳುತ್ತಾರೆ ಮತ್ತು ಕರು ಕೂಡ

ಪುಷ್ಟವಾಗಿರಲೆಂದು ಆಲೋಚಿಸುತ್ತಾರೆ. ಏಕೆಂದರೆ ಮುಂದಿನ ಸಂತತಿ ಇದರಿಂದಲೆ. ಆದರೆ ಕೆಲವು ಗೌಳಿಗರು ಆಸೆ ಬುರುಕರು. ಅವರು ಕರುವನ್ನು ಸಾಯಿಸಿ ಅದರ ಹೊಟ್ಟೆಯೊಳಗೆ ಹೊಟ್ಟು ತುಂಬಿ ಹಾಲನ್ನು ಕರೆಯಲು ಹೋದಾಗ ಆ ಹೊಟ್ಟು ತುಂಬಿದ ಕರುವನ್ನು ಹಸುವಿನ ಮುಂದೆ ಇರಿಸುತ್ತಾರೆ. ಇದು ವ್ಯಾಪಾರಿಕ ದೃಷ್ಟಿಯಿಂದ ಹಾಲು ಕರೆಯುವುದಾಗಿದೆ. ಮೂರನೆಯದು, ಶೋಷಣೆ. ಇದನ್ನು ಕಟುಕನು ಮಾಡುತ್ತಾನೆ. ಕರುವನ್ನು ಜೀವಂತವಾಗಿಟ್ಟು ಏನು ಪ್ರಯೋಜನ, ಇದನ್ನು ಕಡಿದರೆ ಮೂಳೆ, ಮಾಂಸ, ಚರ್ಮ ಎಲ್ಲವು ಸಿಗುತ್ತದೆ ಎಂಬುದಾಗಿ ಯೋಚಿಸುತ್ತಾನೆ.

ನಾನು ಜಂಭೋಜಿಯವರನ್ನು ಎಲ್ಲರಿಗಿಂತ ಮಿಗಿಲಾದ ಅಭಿವೃದ್ಧಿ ಕಾರ್ಯಕರ್ತರೆಂದು ಭಾವಿಸುತ್ತೇನೆ, ಸರಳ ಜೀವನ ನಡೆಯಬೇಕೆಂಬ ಆಕಾಂಕ್ಷೆಯನ್ನು ಅವರು ಜನರಲ್ಲಿ ಉಂಟುಮಾಡಿದರು ಮತ್ತು ಈ ಜೀವನಪದ್ಧತಿಯ ರಕ್ಷಣೆಗಾಗಿ ಬಲಿದಾನ ಮಾಡಬೇಕೆನ್ನುವವರೆಗೂ ಆತ್ಮ ವಿಶ್ವಾಸವನ್ನುಂಟುಮಾಡಿದರು. ಭೋಗವಾದಿ ಅಭಿವೃದ್ಧಿಯು ಸೃಷ್ಟಿಸಿರುವ ಸಮಾಜವು ವಿಕೃತ ಸಮಾಜವಾಗಿದೆ. ಇಂಗ್ಲೆಂಡ್ ಮತ್ತು ಅಮೆರಿಕಾದಲ್ಲಿ ಸ್ವರ್ಗವಿದೆಯೆಂಬ ತಪ್ಪು ಕಲ್ಪನೆಯಲ್ಲಿ ನೀವಿರಬೇಡಿ. ಇಂಗ್ಲೆಂಡಿನಲ್ಲಿ ನಾಲ್ಕು ಲಕ್ಷ ಹತ್ತು ಸಾವಿರ ಜನರ ಉದ್ಯೋಗವೇನೆಂದರೆ ಅಪರಾಧವೆಸಗುವುದು, ಮೋಸಮಾಡುವುದು, ಕಳ್ಳತನ ಮಾಡುವುದು, ದ್ರೋಹಬಗೆಯುವುದೇ ಆಗಿದೆ. ಇದರಲ್ಲಿ ಸಾಕಷ್ಟು ಆದಾಯವಿದೆ. ಆರ್ಥಿಕಾಭಿವೃದ್ಧಿ ಆದಂತೆಲ್ಲ ಅಪರಾಧಗಳೂ ಬೆಳೆಯುತ್ತಾ ಹೋಗುತ್ತಿವೆ.

ಅಭಿವೃದ್ಧಿಯೆಂಬುದರ ಗ್ರಹಿಕೆ ಅದರ ಗಣಾತ್ಮಕತೆಯಲ್ಲಿ ಅಂದರೆ ಸಂಖ್ಯೆ ಅಥವಾ ಪ್ರಮಾಣ ಇತ್ಯಾದಿಯಲ್ಲಿದೆ. ಆದರೆ ಎಲ್ಲವನ್ನೂ ಸಂಖ್ಯೆ ಅಥವಾ ಪ್ರಮಾಣದಲ್ಲಿಯೇ ನೋಡುವುದು ವಿಕೃತಿಯಾಗಿದೆ. ಪ್ರಕೃತಿಯೊಂದಿಗೆ ನಾವು ಕಸಾಯಿಗಳ ವ್ಯವಹಾರ ಮಾಡುತ್ತಿರುವುದರಿಂದ ಈ ವಿಕೃತಿ ಬಂದಿದೆ. ಈಗ ನೀ್ರಿ ಕೇಳಬಹುದು, ನಾವು ಜೀವಿಸಿಕೊಂಡಿರಬೇಕಾದರೆ ಪ್ರಕೃತಿಯೊಂದಿಗೆ ನಮ್ಮ ವ್ಯವಹಾರ ಹೇಗಿರಬೇಕೆಂದು. ವಿಜ್ಞಾನ

ಮತ್ತು ತಂತ್ರವಿಜ್ಞಾನದ ಪಾತ್ರ ಏನು? ಬಹಳ ಸರಳವಾದ ಉತ್ತರವಿದೆ. ನಾವು ಸ್ವತಃ ಜೀವಿಸಿಕೊಂಡಿರಲು ಪ್ರಕೃತಿಯನ್ನು ಸುಸಂಸ್ಕೃತಗೊಳಿಸಬೇಕು. ಅಂದರೆ, ನಮ್ಮ ಜ್ಞಾನ ಹಾಗೂ ವಿಜ್ಞಾನದ ಮೂಲಕ ಪ್ರಕೃತಿಯೂ ಸಂತೋಷದಿಂದಿರಬೇಕು, ನಾವೂ ಸಂತೋಷದಿಂದಿರಬೇಕು ಎಂಬ ರೀತಿಯಲ್ಲಿ ಪ್ರಕೃತಿಯನ್ನು ಸುಸಂಸ್ಕೃತಗೊಳಿಸಬೇಕು. ಪ್ರಕೃತಿಯೊಂದಿಗೆ ತಾಯಿ ಮಗುವಿನ ಸಂಬಂಧ ಉಂಟಾಗಬೇಕು.

***

## ಲೇಖಕರ ಪರಿಚಯ : ಸುಂದರ್ ಲಾಲ್ ಬಹುಗುಣ

ಸುಂದರ್ ಲಾಲ್ ಬಹುಗುಣ (9 ಜನವರಿ 1927–21 ಮೇ 2021) ಒಬ್ಬ ಗರ್‌ವಾಲ್ (ಉತ್ತರಖಂಡ ರಾಜ್ಯದಲ್ಲಿದೆ) ಜನಾಂಗದ ಪರಿಸರವಾದಿ ಮತ್ತು ಚಿಪ್ಕೊ ಚಳುವಳಿಯ ನೇತಾರರಗಿದ್ದರು. ಹಿಮಾಲಯದಲ್ಲಿ ಕಾಡುಗಳ ಸಂರಕ್ಷಣೆಗಾಗಿ ಹಲವು ವರ್ಷಗಳಿಂದ ಅವರು ಹೋರಾಟ ಮಾಡುತ್ತಿದ್ದರು. 1980ರ ದಶಕದಿಂದ 2004ರ ಆರಂಭದವರೆಗೆ ತೆಹ್ರಿ ಅಣೆಕಟ್ಟು ವಿರೋಧಿ ಆಂದೋಲನವನ್ನು ಮುನ್ನಡೆಸಿದರು. ಅವರು ಭಾರತದ ಆರಂಭಿಕ ಪರಿಸರವಾದಿಗಳಲ್ಲಿ ಒಬ್ಬರಾಗಿದ್ದರು.

## ಚಿಪ್ಕೊ ಚಳುವಳಿ

ಚಿಪ್ಕೊ ಚಳುವಳಿಯು ಕಾಡು ಪ್ರದೇಶ ಹಾಗೂ ಕಾಡಿನ ಮರಗಳನ್ನು ರಕ್ಷಿಸಲು ಉತ್ತರಪ್ರದೇಶದಲ್ಲಿ 26 ಮಾರ್ಚ್ 1974ರಂದು ಪ್ರಾರಂಭಿಸಿದರು. ಹಳ್ಳಿಯಿಂದ ಹಳ್ಳಿಗೆ ಪ್ರಯಾಣ ಬೆಳೆಸುವ ಮೂಲಕ ಚಳುವಳಿಗೆ ಬೆಂಬಲವನ್ನು ಪಡೆದರು. ಚಿಪ್ಕೊ ಚಳುವಳಿಯು, ಕರ್ನಾಟಕದಲ್ಲಿ ಅಪ್ಪಿಕೊ ಚಳುವಳಿಗೆ ಸ್ಫೂರ್ತಿಯನ್ನು ನೀಡಿತು. ಬಹುಗುಣರವರು 'ಪರಿಸರವು ಶಾಶ್ವತ ಆರ್ಥಿಕತೆ' ಎಂಬ ಚಿಪ್ಕೊ ಘೋಷಣೆಯನ್ನು ರಚಿಸಿದ್ದಾರೆ. ಅವರು ಚಳುವಳಿಯನ್ನು

ಇನ್ನಷ್ಟು ಪ್ರಾಮುಖ್ಯಗೊಳಿಸಲು 1981ರಿಂದ 1983ರವರೆಗೆ ಹಳ್ಳಿಯಿಂದ ಹಳ್ಳಿಗೆ ಪ್ರಯಾಣ ಮಾಡಿ ಚಳುವಳಿಗೆ ಬೆಂಬಲವನ್ನು ಪಡೆದರು.

**ಪ್ರಶಸ್ತಿಗಳು**

1981ರಲ್ಲಿ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಆದರೆ ಅದನ್ನು ನಿರಾಕರಿಸಿದರು.

1987ರಲ್ಲಿ ರೈಟ್ ಲೈವ್ಲಿಹುಡ್ ಅವಾರ್ಡ್ (ಚಿಪ್ಕೊ ಚಳುವಳಿ).

1986ರಲ್ಲಿ ಜಮ್ನಾಲಾಲ್ ಬಜಾಜ್ ಪ್ರಶಸ್ತಿ.

1989ರಲ್ಲಿ ಐಐಟಿ ರೂರ್ಕಿ ಅವರು ಡಾಕ್ಟರ್ ಆಫ್ ಸೋಷಿಯಲ್ ಸೈನ್ಸಸ್ ಗೌರವ ಪದವಿ ನೀಡಿದರು.

2009ರಲ್ಲಿ ಪರಿಸರ ಸಂರಕ್ಷಣೆಗಾಗಿ ಭಾರತ ಸರ್ಕಾರವು ಪದ್ಮ ವಿಭೂಷಣ ಪ್ರಶಸ್ತಿ ನೀಡಿದೆ.

# 3. ಮೂಢನಂಬಿಕೆಗಳ ಬೀಡಿನಲ್ಲಿ

– ಭುವನೇಶ್ವರಿ ಹೆಗಡೆ

ಒಬ್ಬ ರಾಜನ ಆರಮನೆಯಿತ್ತು. ಮಹಾದ್ವಾರದ ಹೊರಗಿನ ಅಂಗಳದ ಒಂದು ಭಾಗದಲ್ಲಿ ಒಬ್ಬ ಪಹರೆಯವನಿಗೆ ವಿಚಿತ್ರ ಕೆಲಸವೊಂದು ಕೊಡಲ್ಪಟ್ಟಿತ್ತು. ಒಂದು ಹತ್ತು ಹೆಜ್ಜೆ ದೂರದ ಜಾಗದಲ್ಲಿ ಸುಮ್ಮನೆ ಹಿಂದೆ ಮುಂದೆ ಗಸ್ತು ತಿರುಗುತ್ತಿರಬೇಕೆಂಬುದು ಅವನ ಪಾಲಿನ ಕೆಲಸ. ಅದು ಎಷ್ಟು ವರ್ಷಗಳಿಂದ ಮುಂದುವರಿಸಲ್ಪಟ್ಟಿತ್ತೇನೋ? ಅವನು ಓಡಾಡುವ ಜಾಗ ಒಂದು ಗೇಣು ತಗ್ಗು ಬಿದ್ದು ಹೋಗಿತ್ತು. ಅವನು ಕಾಯುತ್ತಿರುವ ಜಾಗದಲ್ಲಿ ಕಣ್ಣಿಗೆ ಕಾಣುವಂತದ್ದೇನೂ ಇಲ್ಲದಿದ್ದರೂ ಆತ ಹಾಗೆ ಕಣ್ಣು ಮುಚ್ಚಿ ಶತಪಥ ತಿರುಗುತ್ತಿರುವುದು ಕೆಲ ಜನರಿಗೆ ಸೋಜಿಗವೆನಿಸಿತ್ತಾದರೂ ಅದು ರಾಜರ, ಸರ್ಕಾರದ ವಿಷಯವಾದ್ದರಿಂದ ಯಾರೂ ಏನೂ ಪ್ರಶ್ನಿಸಿರಲಿಲ್ಲ. ಹೀಗೆ ಶತಮಾನಗಳೇ ಸಂದ ಮೇಲೆ ರಾಜಮನೆತನದಲ್ಲೊಬ್ಬ ಸ್ವಂತ ಮಿದುಳುಳ್ಳ ರಾಜಕುಮಾರ ಹುಟ್ಟಿದ. ಈ ವಿಚಿತ್ರ ನೇಮಣೂಕಿಯ ಮೇಲೆ ಮೊಟ್ಟಮೊದಲನೆ ಬಾರಿಗೆ ಅವನಿಗೆ ಔಚಿತ್ಯದ ಶಂಕೆ ಕಾಡಿತು. ಹಿರಿಯರನ್ನು ಕೇಳಲಾಗಿ "ನಮ್ಮ ಹಿರಿಯರು ನೇಮಿಸಿದ್ದರು. ಅದಕ್ಕೆ ನಾವೂ ನೇಮಿಸಿದೆವು" ಎಂಬುತ್ತರ ಬಂತು. ಉಳಿತಾಯ ಯೋಜನೆಯ ಗುರಿ ಸಾಧಿಸಲು ಉತ್ಸುಕನಾಗಿದ್ದ ರಾಜಕುಮಾರ ಆ ಕೆಲಸದ ಮೂಲ ಕಂಡುಹಿಡಿಯಲು ಪಣತೊಟ್ಟು ಹಳೆಯ ಫೈಲುಗಳ ಕೋಣೆ ಸೇರಿ ದಿನವಿಡೀ ಕಳೆಯತೊಡಗಿದ. ಕೊನೆಗೂ ನಾಲ್ಕೈದು ಶತಮಾನದ ಹಿಂದಿನ ಫೈಲೊಂದು ಸಿಕ್ಕಿತು. ಅದರಲ್ಲಿ ಬರೆಯಲ್ಪಟ್ಟ ಪ್ರಕಾರ 'ಅರಮನೆಯ

ಅಂಗಳದ ಬಲಭಾಗದಲ್ಲಿ ವಿದೇಶಿ ಗುಲಾಬಿ ಗಿಡವೊಂದನ್ನು ನೆಡಲಾಗಿದೆ. ಅದು ಹಾಳಾಗದಂತೆ ಕಾಯಲು ಅಲ್ಲಿ ಗಸ್ತುತಿರುಗುವ ಕೆಲಸಕ್ಕಾಗಿ ಒಂದೂವರಾಣೆ ಪಗಾರಿನ ಮೇಲೆ ಸದರೀ ನೇಮಣೂಕಿ ಮಾಡಲಾಗಿದೆ' ಎಂಬುದಾಗಿ ರಾಜಾಜ್ಞೆಯ ಕೆಲವೊಂದು

ನಮೂದಿತವಾಗಿತ್ತು. ಅಲ್ಲಿಂದ ತರುವಾಯ ಬಂದವರೆಲ್ಲ ಬರಿದೇ ಅವನ ಪಗಾರವನ್ನು ಹೆಚ್ಚಿಸುತ್ತಾ ಬಂದಿದ್ದರು. ಆದರೆ ಗುಲಾಬಿ ಗಿಡ ಯಾವಾಗ ನಾಶವಾಗಿತ್ತೋ.

ಇಂಥ ಸಾವಿರಕ್ಕೂ ಮಿಕ್ಕ ಕಡತಗಳು ನಮ್ಮೂರಿನ ನೆಲದಲ್ಲಿ ಹುಗಿದು ಹೋಗಿವೆಯೆಂದು ನಾನು ಅಂದಾಜು ಮಾಡಿದ್ದೇನೆ. ಯಾಕೋ ಅವುಗಳನ್ನು ಹುಡುಕಿ ತೆಗೆಯುವ ಅರಸು ಮಕ್ಕಳು ಇನ್ನೂ ಹುಟ್ಟಿ ಬಂದಿಲ್ಲವಾದ್ದರಿಂದ ಇನ್ನೂ ಅವುಗಳ ಮೂಲರೂಪ ಅಜ್ಞಾತವಾಗಿಯೇ ಉಳಿದಿದೆ.

ಒಮ್ಮೆ ನಮ್ಮಲ್ಲೊಬ್ಬರಿಗೆ ಏನೋ ಕಾಯಿಲೆಯಾಗಿ ಅವರಿಗೆ ಕುಂಬಳಕಾಯಿ ಲೇಹ ಕೊಡಬೇಕೆಂಬ ಸಲಹೆ ವೈದ್ಯರಿಂದ ಬಂತು. ನಮ್ಮೂರಲ್ಲಿ ಕುಂಬಳಕಾಯಿ ಇರಲಿಲ್ಲವಾದ್ದರಿಂದ ಆದನ್ನು ಹುಡುಕುತ್ತ ಊರೂರು ಅಲೆಯುವ ಕೆಲಸ ನಮ್ಮ ಬಂಧುಗಳಲ್ಲೊಬ್ಬರಿಗೆ ಬಂತು. ಅದನ್ನವರು ಹುಡುಕಲು ಹೊರಡುವಾಗ ನಮ್ಮ ಅಜ್ಜಿ ಬಿಟ್ಟೂಬಿಡದೇ – 'ಮತ್ತೆ ಕುಂಬಳಕಾಯಿನ ದುಡ್ಡು ಕೊಡದೇ ಪುಕ್ಕಟೆ ಮಾತ್ರ ತರಬೇಡ ಮಾರಾಯಾ, ಇಷ್ಟೂ ಸಾಲ್ದೆ ಕೊಟ್ಟವರ ಆರಿಷ್ಠಾನ ಕಟ್ಕೋಳೋದು ಬೇಡ. ರೊಕ್ಕ ಕೊಟ್ಟಿ ತಗೊಂಬಾ' ಅಂತ ಹೇಳೇ ಹೇಳಿದರು. ಕುಂಬಳಕಾಯಿ ಹುಡುಕುತ್ತ ತಿರುಗಿ ತಿರುಗಿ ಸಾಕಾದ ನಮ್ಮ ಬಂಧುವಿಗೆ ಕೊನೆಗೆ ಯಾವುದೋ ಒಂದು ಊರಿನ ರೈತನೊಬ್ಬನ ಹೊಲದಲ್ಲಿ ಕುಂಬಳಕಾಯಿ ಗೋಚರಿಸಿ, 'ಎಷ್ಟು ಬೆಲೆ' ಎಂದು ಕೇಳಿದನಂತೆ. 'ಆಯ್ ಸ್ವಾಮಿ, ಕುಂಬಳಕಾಯಿ ಯಾರಾದರೂ ರೊಕ್ಕಕ್ಕೆ ಕೊಡೋದುಂಟಾ? ಪುಕ್ಕಟೆ ಆದ್ರೆ ಕೊಡ್ತೀವಿ' ಎಂಬ ಉತ್ತರ ಬಂತಂತೆ. ಪುಕ್ಕಟೆ ತರಬೇಡವೆಂದು ಅಜ್ಜಿಯ ಆದೇಶ, ರೊಕ್ಕಕ್ಕೆ ಕೊಡುವುದಿಲ್ಲವೆಂದು ರೈತನ ಹಠ, ಕುಂಬಳಕಾಯಿಯಂತೂ ಬೇಕೇಬೇಕು. ಕೊನೆಗೆ ಅದನ್ನು ಹಾಗೇ ತಂದು 'ನಾಲ್ಕು ರೂಪಾಯಿ ಕೊಟ್ಟೆ' ಎಂದು ಅಜ್ಜಿಗೆ ಹೇಳಿದರು ಎಂಬುದು ಬೇರೆ ಮಾತು.

ಹೀಗೆ ಒಂದೇ ವಿಷಯದ ಮೇಲಿನ ಶಾಸನಗಳು ಎರಡು ಬೇರೆ ಬೇರೆ ಪ್ರದೇಶಗಳಲ್ಲಿ ತದ್ವಿರುದ್ಧವಾಗಿ ರಚಿಸಲ್ಪಡುತ್ತಿದ್ದವೇ ಎಂಬುದು ವಿಚಾರಿಸಬೇಕಾದ ಸಂಗತಿ. ಹಾಗಿದ್ದಿದ್ರೆ

ಹೌದಾದರೆ ಅಂದರೆ ತಮಗನುಕೂಲವಾದ ಹಾಗೆ ಪರಸ್ಪರ ವಿರುದ್ಧವಾಗಿರುವ ಶಾಸನಗಳನ್ನು ರಚಿಸಿ ಹೇಳುವ ಕಲೆ ನಮ್ಮ ಪೂರ್ವಜರಿಗೂ ಗೊತ್ತಿತ್ತೆಂದ ಮೇಲೆ, ಒಂದು ಸರಕಾರ ತಮಗನುಕೂಲವಾದ ತಾಮ್ರಪಾಸನವನ್ನು ಹುಗಿದ ವಾಸನೆ ಹತ್ತಿದ ಇನ್ನೊಂದು ಸರಕಾರ ತನ್ನ ಅಧಿಕಾರಾವಧಿಯಲ್ಲಿ ಅದನ್ನು ಕಿತ್ತು ತೆಗೆಸಿ ತಾನಿಷ್ಟಪಟ್ಟದನ್ನು ಬರೆಸಿ ಹೂಳಿಸಿದ್ದರಲ್ಲೇನೂ ಹೊಸದಿಲ್ಲ. ಹಿಂದೆ ಕುಂಬಳಕಾಯಿ ಬೆಳೆ ಬೆಳೆಯದ ಪ್ರದೇಶದ ರಾಜ ಅದನ್ನು ದುಡ್ಡಿಗೆ ಮಾರಬಾರದು ಎಂದೂ ಶಾಸನಗಳನ್ನು ಮಾಡಿ ಹೇಳಿಸಿರಬಹುದೆ ಎಂದು ನನಗೆ ಅನುಮಾನವಿದೆ. ಗಡಿಗೆ ಮಡಕೆಗಳ ಚೂರುಗಳು ಆಗೆದು ತೆಗೆಯುವ ಸಂಶೋಧಕರು ಆಗೀಗ ನಮ್ಮ ಕಡೆ ಬಂದು ಅಗೆದಿದ್ದರೆ ಅವರಿಗೆ ಡಾಕ್ಟರೇಟು ಸಿಗುವ ಜೊತೆಗೆ ನಮ್ಮ ಇಂಥ ಆಚರಣೆಗಳ ಮೂಲವಸ್ತು ಹೇಗಿತ್ತು ಅಥವಾ ಇರಲೇ ಇಲ್ಲವೋ ಎಂಬುದಾದರೂ ತಿಳಿಯುತ್ತಿತ್ತೇನೋ. ಉತ್ತರ ಕನ್ನಡ ಜಿಲ್ಲೆಯ ಕಾಡುಗಳಲ್ಲಿ ಯಮದೂತರು ಹಕ್ಕಿಗಳ ರೂಪದಲ್ಲಿ ವಾಸಿಸುವ ಸಂಗತಿ ಬಹಳಷ್ಟು ಜನರಿಗೆ ಗೊತ್ತಿಲ್ಲ. ಯಮನ ಪಾಶಕ್ಕೆ ಸಿಕ್ಕು ಯಾರು ಸತ್ತರೂ ಆ ದಿನ ರಾತ್ರಿ 'ಸಿಕ್ಕಿತ್ ಸಿಕ್ ಸಿಕ್ಕಿತ್ತೋ' (ಯಮನಿಗೆ ಆಹಾರ) ಎಂದು ಕೂಗಿ ಭೂಲೋಕದಲ್ಲಿ ಅನೌನ್ಸ್ ಮಾಡುವುದು ಈ ಹಕ್ಕಿರೂಪೀ ದೂತರ ಕೆಲಸವೆಂದೂ, ಆ ಹಕ್ಕಿ ಹಾಗೆ ಕೂಗಿದ ಎರಡು ಮೂರು ದಿನದಲ್ಲಿಯೇ ಹತ್ತಿರದಲ್ಲೆಲ್ಲಾದರೂ ಸತ್ತ ಸುದ್ದಿ ಬಂದೇ ಬರುತ್ತದೆ ಎಂದೂ ನಮ್ಮೂರಿನ ಜನರು ಸೂರ್ಯಚಂದ್ರರಷ್ಟೇ ಸತ್ಯವಾಗಿ ನಂಬುತ್ತಾರೆ. ಕಾಡಿನ ಪಕ್ಕದಲ್ಲಿಯ ಅಡಿಕೆ ತೋಟಗಳ ಮಧ್ಯದಲ್ಲಿ ಇರುವ ಒಂಟಿ ಮನೆಗಳಲ್ಲಿ ಮಲಗಿದವರಿಗೆ ಮಧ್ಯರಾತ್ರಿಯಲ್ಲಿ ಈ ಹಕ್ಕಿಯ ಕೂಗಿನಿಂದ ಎಚ್ಚರವಾಯಿತಾದರೆ ಹಾಸಿಗೆ ಒದ್ದೆಯಾಗುವುದು ಖಂಡಿತ. ಹಾಗೆ ಪದೇ ಪದೇ ಹಾಸಿಗೆ ಒದ್ದೆಯಾಗುವುದು ಒಳ್ಳೆಯದಲ್ಲವೆಂದು ಅರಿತ ಯಾರೋ ಹಿರಿಯರು ಆ ಕೂಗಿನಿಂದ ಉಂಟಾಗುವ ಭಯದ ನಿವಾರಣೆಗೆ ಒಂದು ಉಪಾಯವನ್ನು ಕಂಡುಹಿಡಿದಿಟ್ಟಿದ್ದಾರೆ. ಆ ಹಕ್ಕಿ 'ಸಿಕ್ಕಿ ಸಿಕ್ಕಿತ್ತೋ' ಎಂದು ಎದೆ ನಡುಗುವ ಹಾಗೆ ಕೂಗಲು ಪ್ರಾರಂಭಿಸಿದ ಕೂಡಲೇ ಅದು ಕುಳಿತಿರುವ ಮರದ ಹೆಸರನ್ನು ನಾವು ಹೇಳಿಬಿಟ್ಟರೆ ಅದರ ಗಂಟಲುಕಟ್ಟಿ ಹೋಗಿ ಕೂಗುವುದನ್ನು ನಿಲ್ಲಿಸುತ್ತದೆ. ಬಾಲ್ಯದಲ್ಲಿಯೇ

ನಮಗೆ ಬೋಧಿಸಲ್ಪಟ್ಟ ಈ ನಿವಾರಣೋಪಾಯ ಇಂದಿಗೂ ನಮಗೆ ಸಂಜೀವಿನಿಯಾಗಿದೆ. ಆ ಹಕ್ಕಿಯ ಕೂಗು ಶುರುವಾಗುತ್ತಲೇ ಶುರು ನಮ್ಮ ಮರಗಳ ಜಪ: ಅಡಿಕೆ ಮರ, ಬಾಳೆ ಮರ, ಅತ್ತಿ ಮರ, ಹೊನ್ನೆ ಮರ... ಹೀಗೆ ಜ್ಞಾಪಿಸಿಕೊಳ್ಳುತ್ತ ಸಾಗುವ ಮರಗಳ ಹೆಸರಿನ ಜಪ ಮುಗಿಯುವಷ್ಟರಲ್ಲಿ ನಮಗೆ ತೂಕಡಿಕೆ ಹತ್ತಿಯೋ, ಹಕ್ಕಿಯ ಕೂಗು ನಿಂತುಹೋಗಿಯೋ ಅಂತೂ ಮುಂದಿನ ಭಾಗದ ರಾತ್ರಿ ಸುಖನಿದ್ದೆಯಲ್ಲಿ ಕಳೆಯುವಂತಾಗುತ್ತದೆ.

ಇಂಥ ನಂಬಿಕೆಗಳನ್ನೆಲ್ಲ ಮೂಢನಂಬಿಕೆಗಳೆಂದು ಅಪಹಾಸ್ಯಮಾಡಿ ಅವುಗಳನ್ನೆಲ್ಲ ತೆಗೆದೊಗೆಯಬೇಕೆಂದು ವಾದಿಸುವ ಸುಧಾರಣಾವಾದಿಗಳನ್ನು ನಾನು ಬಲವಾಗಿ ವಿರೋಧಿಸುತ್ತೇನೆ. ಏಕೆಂದರೆ ಕಾಡಿನಲ್ಲಿಯೇ ವಾಸಿಸಬೇಕಾಗಿರುವ ನಮ್ಮ ಮಕ್ಕಳು ರಾತ್ರಿ ಹೊತ್ತಿನಲ್ಲಿ ಭಯರಹಿತರಾಗಿ ನಿದ್ರಿಸಬೇಕೆಂಬ ಬಯಕೆ ನನಗಿದೆ.

ಮೂರು ಸಂಜೆಯ ಹೊತ್ತಿನಲ್ಲಿ ಮಲಗಬಾರದು ಎಂಬ ನಿಯಮವನ್ನು ನಮ್ಮ ಮನೆಯಲ್ಲಿಯ ಹುಡುಗರಿಗೆ ಸಂಜೆ ಮಗ್ಗಿ ಬಾಯಿಪಾಠ ಮಾಡಿಸಲಿಕ್ಕಾಗಿ ನಮ್ಮ 'ಹುಡುಗ ವಿರೋಧಿ ಅಜ್ಜನೇ ಜಾರಿಗೆ ತಂದದ್ದೆಂದು ನಾನು ತೀರ ಇತ್ತೀಚಿನ ತನಕವೂ ತಿಳಿದಿದ್ದೆ. ಎಲ್ಲರ ಮನೆಯಲ್ಲೂ ಅದು ಜಾರಿಯಲ್ಲಿದೆ ಎಂಬುದು ಗೊತ್ತಾದ ದಿನ ಏನೋ ಒಂದು ರೀತಿಯ ಸಮಾಧಾನವಾಗಿ ನನ್ನ ಅಜ್ಜನ ಬಗೆಗೆ ಒಂದು ರೀತಿಯ ಗೌರವವೂ ಮೂಡಿತ್ತು.

ಹೆಣ್ಣು ಮಕ್ಕಳು ಅಕ್ಕಿ ಆರಿಸುವಾಗ ಅಕ್ಕಿ ತಿಂದರೆ ಅವರ ಮದುವೆಯಲ್ಲಿ ಮಳೆ ಬರುತ್ತದೆಯೆಂಬ ಪ್ರತೀತಿ ಹುಟ್ಟಿಕೊಂಡಿರುವುದರಿಂದ ದಿನವೂ ಅಕ್ಕಿ ಆರಿಸುವ ಕೆಲಸವನ್ನು ನಮ್ಮ ಮೇಲೆ ವಿಶ್ವಾಸದಿಂದ ಕೊಡುತ್ತಾರೆ. ಹಾಗೆಯೆ ಸ್ನಾನಮಾಡಿ ಬರುವಾಗ ಬಚ್ಚಲು ಹಂಡೆಗೆ ಒಂದೆರಡು ಕೊಡ ನೀರು ಹಾಕಿ ಬರಬೇಕೆಂಬ ನಿಯಮ ಇರದಿದ್ದರೆ, ಬಾವಿಯಿಂದ ನೀರೆತ್ತಿ ಸ್ನಾನಮಾಡುವ ಬಚ್ಚಲುಗಳುಳ್ಳ ಸ್ಥಳಗಳಲ್ಲಿ ಒಬ್ಬರ ಸ್ನಾನದ ನಂತರ ಬಚ್ಚಲಿಗೆ ಬರುವ ಮತ್ತೊಬ್ಬರ ಸ್ಥಿತಿ ಶೋಚನೀಯವಾಗುತ್ತಿತ್ತು.

ಎಲ್ಲಿಗಾದರೂ ಹೊರಟಕೂಡಲೇ 'ಎಲ್ಲಿಗೆ ಸ್ವಾಮಿ' ಎಂಬ ಸ್ವರ ಎದುದಾದರೆ ಅದು ಅಪಶಕುನವೆಂದು ಎಲ್ಲಾ ಕಡೆಯೂ ಪರಿಗಣಿಸಲ್ಪಡುವುದಾದರೂ ಅದು ನಮ್ಮೂರಿನ ಹಿರಿಯರಾದ ಗಣೇಶಯ್ಯನವರನ್ನು ರೊಚ್ಚಿಗೆಬ್ಬಿಸುವಷ್ಟು ಇನ್ಯಾರ ಮೇಲೂ ಅಷ್ಟು ಪರಿಣಾಮ ಬೀರಲಿಕ್ಕಿಲ್ಲ. ಇವರು ತಮ್ಮ ಮೂಗಿನ ನೇರಕ್ಕೆ ರಚಿಸಲ್ಪಟ್ಟ ರಸ್ತೆಯ ಮೇಲೆ ಜರತಾರೀ ಕಾಲು ಹೊದ್ದು ಕೊಡೆ ಹಿಡಿದು ಹೊರಟ ಠೀವಿಯನ್ನು ಕಂಡಾಕ್ಷಣ ಎಲ್ಲಿಗಿರಬಹುದು ಎಂಬ ಕುತೂಹಲ ಯಾರಲ್ಲಾದರೂ ಹುಟ್ಟದಿರಲಿಕ್ಕೆ ಸಾಧ್ಯವೇ ಇಲ್ಲ. ಆ ಕುತೂಹಲ ಎಲ್ಲಾದರೂ ಅಪ್ಪಿ ತಪ್ಪಿ ಅವರೆದುರು ಯಾರಿಂದಾದರೂ ಪ್ರಕಟಿಸಲ್ಪಟ್ಟಿತೋ ಆ ವ್ಯಕ್ತಿಗೆ ಶಾಪ ನಿಂಚನ ಆಗೇ ತೀರುತ್ತದೆ. 'ಪಾಪದ ಪಿಂಡಗಳು, ಹೊರಡು ಹೊರಡುತ್ತಲೇ ಎಲ್ಲಿಗೇಂತ ಹಲ್ಲು ಕಿರಿದು ಆಯ್ತು, ಇನ್ನು ಹೋದ ಕೆಲಸ ಆದ ಹಾಗೇ' ಎನ್ನುತ್ತ ಪಟಪಟನೇ ಮನೆಗೆ ವಾಪಸ್ಸಾಗಿ ಒಂದರ್ಧ ಘಂಟೆ ಕುಳಿತು ಮತ್ತೆ ಹೊರಡುವರು. ಇದು ನಮಗೆ ಬಹಳ ಪ್ರಿಯವಾದ ವಿಷಯವಾಗಿತ್ತು. ಅವರು ಎಲ್ಲಿಗಾದರೂ ಹೊರಟದ್ದು ಗೊತ್ತಾಗುತ್ತಲೆ ನಾವು ಒಂದು ಹಿಂದು ಹುಡುಗರು ಯಾರಾದರೂ ಮನೆಯ ಭತ್ತದ ಕಣಜದ ಹಿಂದೆ ಆಡಗಿಯೋ, ಅಡಿಕೆ ಅಟ್ಟ ಏರಿ ನಿಂತೋ 'ಎಲ್ಲಿಗೆ ಐನೋರ' ಎಂದು ಕೂಗಿ ಆಡಗಿ ಬಿಡುತ್ತಿದ್ದೆವು. ಬರೀ ಒಂದು ಶಾಪಸಹಿತ ನೋಟ ನಮ್ಮೆಡೆಗೆ ಬೀರಿ ಅವರು ಹಾಗೇ ಹೋಗುತ್ತಿದ್ದರೆ ವಿನಾ ಮನೆಗೆ ವಾಪಸಾಗುತ್ತಿರಲಿಲ್ಲ. ಈಗೀಗ ಎಲ್ಲಿಗೆ ಬದಲು 'ಎಷ್ಟು ದೂರ ಎತ್ತ ಮುಖಗಳು' ಆಮದಾಗಿ ಬಿಟ್ಟಿರುವುರಿಂದ ಇಂಥ ಅವಕಾಶಗಳು ಕಡಿಮೆಯಾಗುತ್ತಿವೆ. ಆದರೂ 'ಎಲ್ಲಿಗೆ' 'ಎತ್ತ' ಮುಖಗಳ ಪರಿಚಯವಿಲ್ಲದ ಧಾರವಾಡದ ಡಾಕ್ಟರರೊಬ್ಬರು ನಮ್ಮಲ್ಲಿಗೆ ವರ್ಗವಾಗಿ ಬಂದರು. ಒಂದು ದಿನ ಹತ್ತಿರದ ಪೇಟೆಗೆ ಹೊರಟಿದ್ದರೆಂದು ಕಾಣುತ್ತದೆ. ಅವರನ್ನು ಕಂಡ ವೃದ್ಧರೊಬ್ಬರು 'ಎಷ್ಟು ದೂರ ಡಾಕ್ಟ್ರೆ' ಅಂತ ಕೇಳಿದಾಗ ಡಾಕ್ಟರರು ತಾವು ಹೋಗುತ್ತಿದ್ದಷ್ಟೆ ಅವಸರವಾಗಿ, 'ಇಲ್ಲಿಂದ 15 ಕಿ.ಮಿ. ಇರಬೇಕ್ರಿ' ಎನ್ನುತ್ತ ದಾಪುಗಾಲು ಹಾಕಿ ನಡೆದುಬಿಟ್ಟರು.

ಪೂರ್ವ ಸೂಚನೆಯಿಲ್ಲದೇ ನೆಂಟರು ಬಂದರೆ ಎಂಥ ಫಜೀತಿ ಎಂಬುದು ನಮ್ಮಲ್ಲಿಯ ಕಾಗೆ. ಬೆಕ್ಕು ಮುಂತಾದ ಸಜೀವ ಪ್ರಾಣಿಗಳೇ ಅಲ್ಲದೆ ನೀರು, ಹಣಿಗೆ, ಅಕ್ಕಿ ಮೊದಲಾದ ನಿರ್ಜೀವ ವಸ್ತುಗಳಿಗೂ ಗೊತ್ತಿದೆ. ಅದಕ್ಕೇ ನೆಂಟರು ಬರುವ ಪೂರ್ವ ಸೂಚನೆಯನ್ನು ಮೊದಲೇ ಹೆಂಗಸರಿಗೆ ಕೊಡುವ ಕೆಲಸವನ್ನು ಇವು ವಹಿಸಿಕೊಂಡಿವೆ. ಅನ್ನದ ಅಕ್ಕಿಯನ್ನು ತೊಳೆಯುವಾಗ ಅದು ಗೊಡ ಗೊಡ ಎಂದರೆ, ನೀರೆತ್ತುವಾಗ ಅರ್ಧ ಕೊಡ ತುಂಬದೇ ಅರ್ಧ ಮಾತ್ರ ನೀರು ಬಂದರೆ, ಕೂದಲು ಬಾಚುವಾಗ ಹಣಿಗೆ ಕೈ ತಪ್ಪಿ ನೆಲಕ್ಕೆ ಬಿದ್ದರೆ, ಆಡಿಗೆಮನೆಯಲ್ಲಿ ಬೆಕ್ಕು ಮುಖ ತಿಕ್ಕಿಕೊಂಡರೆ, ಕಾಗೆ ಕರ್ ಕರ್ ಎಂದು (ಕಾ.ಕಾ.ಬದಲು) ಕೂಗಿದರೆ ಆ ದಿನ ಊಟಕ್ಕೆ ನೆಂಟರು ಬರಲೇಬೇಕು. ಇವುಗಳಲ್ಲಿ ಒಂದು ಘಟಿಸಿದರೂ ಆ ದಿನದ ಊಟಕ್ಕೆ ಹೆಚ್ಚು ಅಕ್ಕಿ ಹಾಕಲು ಅಡ್ಡಿಯಿಲ್ಲ. ಆದರೆ ಇವು ಬರಿದೇ ನೆಂಟರು ಬರುತ್ತಾರೆ ಎಂದಷ್ಟೇ ಹೇಳಿಬಿಟ್ಟು ಸುಮ್ಮನಾಗುತ್ತವೆಯೇ ಹೊರತು ಎಷ್ಟುಜನ ಬರುತ್ತಾರೆಂದು ತಿಳಿಸುವುದಿಲ್ಲವಾದ್ದರಿಂದ ಫಜೀತಿ ತಪ್ಪಿದ್ದಲ್ಲ.

ಹಳೆಯ ಆಚಾರವಿಚಾರಗಳಿಗೆಲ್ಲಾ ವೈಜ್ಞಾನಿಕ ವಿವರಣೆಯನ್ನು ಹುಡುಕಿ (ಊಹಿಸಿ) ವಾದಿಸುವ ಹುಚ್ಚನ್ನು ಬೆಳೆಸಿಕೊಂಡ 'ಹಳತಾವಾದಿಗಳು' ನಮ್ಮೂರಲ್ಲೂ ಇತ್ತೀಚೆಗೆ ಹುಟ್ಟಿಕೊಂಡಿದ್ದಾರೆ. ಪೂರ್ವಜರ ಜ್ಞಾನವೇ ಇಂದಿನವರ ವಿಜ್ಞಾನವೆಂಬುದು ಅವರ ಅಭಿಮತ. ಬೇಕಾದ ಉದಾಹರಣೆಯನ್ನು ಕೊಡಲಿ – ಅದಕ್ಕೆಲ್ಲ ವೈಜ್ಞಾನಿಕವಾಗಿ ಕಾರಣ ಹಾಗಿರಬಹುದು, ಹೀಗಿರಬಹುದು ಎಂದು ವಾದಿಸುವ ಈ ಶಾಸ್ತ್ರೀಯ ಕಾರಣದ ಅನ್ವೇಷಕರೂ ಊಹಿಸಲು ಸೋತ ನಂಬಿಗೆಯೊಂದನ್ನು ಒಂದು ದಿನ ಅವರೆದುರಿಗಿಟ್ಟೆ. ವರ್ಷಗಟ್ಟಲೆ ಕೆಡದ ಮಿಡಿ ಉಪ್ಪಿನಕಾಯಿಯನ್ನು ಮಾಡಿಡುವಾಗ ನಮ್ಮೂರ ಹೆಂಗಸರು ತಪ್ಪದೇ ಉಪ್ಪಿನಕಾಯಿ ಮಾಡುವ ದಿನದ ಮಿತಿಯನ್ನು ಲಕ್ಷಿಸಿ ಸಪ್ತಮಿ ಅಷ್ಟಮಿ ನವಮಿ ಮುಂತಾದ ಮಿಕಾರಾಂತ ಮಿತಿಗಳಂದು ಉಪ್ಪಿನಕಾಯಿ ಮಾಡುವುದಿಲ್ಲ. ಹಾಗೆ ಮಾಡಿದ್ದಾದರೆ ಅಂದಿನ ಮಿತಿಯ 'ಮಿಗೆ' 'ಜ' ಸೇರಿ ಉಪ್ಪಿನಕಾಯಿಯಲ್ಲಿ ಮಿಜಿ ಮಿಜಿ ಆಗುತ್ತದೆ ಎಂಬ ಅವರ ನಂಬಿಗೆಯೇ ಅದಕ್ಕೆ ಕಾರಣ.

ಇದು ನಮ್ಮ ಆ ಹಳತಾವಾದಿಗಳಲ್ಲಿ ಬಹಳ ಕುತೂಹಲ ಹುಟ್ಟಿಸಿತಾದರೂ ಮಿಕಾರಾಂತಗಳ ದಿನದಂದು ವಾತಾವರಣದಲ್ಲೇನಾದರೂ ಜಿಕಾರಾಂತಗಳನ್ನು ಸೇರಿಸುವ ಗುಣವಿರಬಹುದೇ ಅಥವಾ ಉಪ್ಪಿನಕಾಯಿಯಲ್ಲಿ ಆಗಬಹುದಾದ ಮಿಜಿ ಮಿಜಿಗಳಿಂದ ತುಂಬಿಹೋದ ಸಪ್ತಮಿ ಅಷ್ಟಮಿ ದಶಮಿಗಳು ಏಕಾದಶಿಯಂದು ಹೇಗೆ ಶುದ್ಧವಾಗಿಬಿಡಬಹುದು ಎಂಬ ನನ್ನ ವೈಜ್ಞಾನಿಕ ಪ್ರಶ್ನೆಗಳಿಗೆ ಅವರಲ್ಲಿ ಉತ್ತರ ದೊರೆಯಲಿಲ್ಲ. ಗಂಭೀರ ಸಮಸ್ಯೆಯೊಂದನ್ನು ತಲೆಗಂಟಿಕೊಂಡವರಂತೆ ಎದ್ದುಹೋದ ಈ ಹಳತಾವಾದಿಗಳು ಎಂದಾದರೊಂದು ದಿನ ಒಂದು ಶಾಸ್ತ್ರೀಯ ಕಾರಣದೊಂದಿಗೆ ನನ್ನೆದುರು ಪ್ರತ್ಯಕ್ಷವಾಗಬಹುದು.

ಜಗತ್ ಪ್ರಳಯದ ಕುರಿತಾಗಿ ಆಗಾಗ ಒಂದು ಹೇಳಿಕೆ ನೀಡಿ ಆಮೇಲೆ ಸುಮ್ಮನಾಗಿ ಬಿಡುವ ವಿಜ್ಞಾನಿಗಳನೇಕರು ಈ ಜಗತ್ತಿನಲ್ಲಿದ್ದರೂ ಇಂಥ ದಿನವೇ ಇಂಥ ಕಾರಣಕ್ಕಾಗಿಯೇ ಜಗತ್ಪಳಯ ಆಗುತ್ತದೆಯೆಂದು ನಿಖರವಾಗಿ ಹೇಳಲು ಯಾವ ವಿಜ್ಞಾನಿಗೂ ಇದು ತನಕ ಸಾಧ್ಯವಾಗಿಲ್ಲ. ಆದರೆ ಈ ವಿಚಾರ ನಮ್ಮೂರ ಮಾತು ಬಲ್ಲ ಶಿಶುಗಳಿಗೆಲ್ಲ ಗೊತ್ತು. ಈ ಭೂಮಿಯನ್ನು ಹೊತ್ತು ಹೊತ್ತು ಆದ ಬೇಸರದಿಂದ ಆಗಾಗ ಹೆಡೆಯಲ್ಲಾಡಿಸಿ ಅಲ್ಲಲ್ಲಿ ಭೂಕಂಪಗಳನ್ನುಂಟುಮಾಡುತ್ತಿರುವ ಆದಿಶೇಷ ಯಾವಾಗಾದರೊಮ್ಮೆ ತನ್ನ ಹೆಡೆಯನ್ನು ಪೂರ್ತಿ ನೀರಿನಲ್ಲಿ ಮುಳುಗಿಸಿಬಿಡುವುದರಿಂದ ಭೂಮಿ ನೀರಲ್ಲಿ ಮುಳುಗಿ ಪ್ರಳಯವುಂಟಾಗುತ್ತದೆ ಎಂಬ ಕಾರಣವನ್ನು ನಮ್ಮೂರಿನ ಆಬಾಲವೃದ್ಧರಾದಿಯಾಗಿ ಎಲ್ಲರೂ ನಂಬುತ್ತಾರೆ. ಹಾಗೂ ಎಲ್ಲರ ಮನೆಯ ಮಜ್ಜಿಗೆಯಲ್ಲೂ ಅರ್ಧ ಮುಳುಗಿ ಅರ್ಧ ತೇಲುತ್ತಿರುವ ಬೆಣ್ಣೆ ಮುದ್ದೆ ಯಾವ ದಿನ ಪೂರ್ತಿ ಮಜ್ಜಿಗೆಯೊಳಗೆ ಮುಳುಗಿ ಹೋಗುತ್ತದೆಯೋ, ಅದೇ ದಿನ ಪ್ರಳಯವಾಗುವುದರಲ್ಲಿ ಸಂಶಯವಿಲ್ಲ ಎಂಬುದಾಗಿ ಪ್ರಳಯದ ದಿನವನ್ನೂ ಸಹ ನಿಗದಿಪಡಿಸಿಕೊಂಡು ಬಿಟ್ಟಿದ್ದಾರೆ.

ನಾನು ನಾಲ್ಕನೇ ತರಗತಿಯಲ್ಲಿ ಓದುತ್ತಿರುವಾಗ ಒಂದು ದಿನ ಶಾಲೆಯಲ್ಲಿ ಮಾಸ್ತರರು ಪ್ರಳಯದ ಕತೆಯನ್ನು ಹೇಳಿ ಪ್ರಳಯ ಕಾಲದಲ್ಲಿ ಹೇಗೆ ಈ ಭೂಮಿಯ ಮೇಲಿನ

ಎಲ್ಲವೂ ನೀರಿನಲ್ಲಿ ಮುಚ್ಚಿ ಕೊಚ್ಚಿ ಹೋಗುತ್ತದೆಯೆಂಬುದನ್ನು ಸಚಿತ್ರ ಕಲ್ಪನೆಯೊಂದಿಗೆ ವಿವರಿಸಿದರು. ಎಲ್ಲವೂ ನೀರಿನಲ್ಲಿ ಮುಳುಗಿ ಮುಳುಗಿ ಹೋಗುತ್ತದೆಯೆಂದ ಬಳಿಕ ಶಾಲೆ, ಮಾಸ್ತರರ ಬೆತ್ತ... ಎಲ್ಲವೂ ನೀರಿನಲ್ಲಿ ಮುಳುಗಿ ಮುಳುಗಿ ಹೋಗುತ್ತಿರುವ ಚಿತ್ರ ನನ್ನ ಕಣ್ಮುಂದೆ ಕಟ್ಟತೊಡಗಿತು. ಹೆಚ್ಚು ಖುಷಿಯಾಗತೊಡಗಿತು. ಶಾಲೆ ಬಿಟ್ಟು ಬರುವಾಗ ಆ ಪ್ರಳಯದ ಶುಭದಿನ ಇವತ್ತೇ ಏಕೆ ಬರಬಾರದು ಎಂಬ ವಿಚಾರವನ್ನು ನನಗಿಂತ ಎರಡುವರ್ಷ ಚಿಕ್ಕವನಾದ ನನ್ನ ತಮ್ಮನೊಂದಿಗೆ ಸುದೀರ್ಘವಾಗಿ ಚರ್ಚಿಸಿದೆ. ಅಕ್ಷರ ಬರೆದುಕೊಟ್ಟಹಾಗೆ ಸೊನ್ನೆ ಸುತ್ತಿಡುತ್ತಿದ್ದ ನನ್ನ ತಮ್ಮ ನನಗಿಂತಲೂ ಹೆಚ್ಚು ಪೆಟ್ಟು ತಿನ್ನುವವನಾಗಿದ್ದರಿಂದ ಆತನಿಗೆ ಶಾಲೆ ಮುಳುಗಿಹೋಗುವುದು ನನಗಿಂತ ಹೆಚ್ಚು ಬೇಗ ಬೇಕಾದ ವಿಷಯವಾಗಿತ್ತು. 'ಹೇಗೂ ಬೆಣ್ಣೆ ಮುದ್ದೆ ಮುಳುಗಿದ ದಿನ ತಾನೆ ಪ್ರಳಯ. ಇವತ್ತೇ ನಮ್ಮ ಮನೆಯ ಬೆಣ್ಣೆ ಮುದ್ದೆ ಮಜ್ಜಿಗೆಯೊಳಗೆ ಮುಳುಗಿ ಹೋಗುವ ವ್ಯವಸ್ಥೆ ಮಾಡಬೇಕು' ಎಂದು ತನ್ನ ಸಲಹೆಯನ್ನು ಕೊಟ್ಟೇಬಿಟ್ಟ. ಮಾಸ್ತರರು ತಮ್ಮ ಬೆತ್ತದೊಂದಿಗೆ ನೀರಿನಲ್ಲಿ ತೇಲಿಹೋಗುವ ದೃಶ್ಯವನ್ನು ಊಹಿಸಿದಷ್ಟೂ ನಮಗೆ ಮೈ ರೋಮಾಂಚನವಾಗುತ್ತಿತ್ತು. (ಆಗ ನಾವಿಬ್ಬರೂ ಏನು ಮಾಡಬೇಕೆಂದು ಯೋಚಿಸಿದ್ದೆವೆಂಬುದು ಈಗ ನೆನಪಾಗುತ್ತಿಲ್ಲ).

ಸರಿ, ಮನೆಗೆ ಬಂದವರೇ ಅಮ್ಮ ಸ್ನಾನಕ್ಕೆ ಹೋದ ಹೊತ್ತಿನಲ್ಲಿ ಮಜ್ಜಿಗೆ ಕಪಾಟಿನ ಬಾಗಿಲು ತೆಗೆದು ಮಜ್ಜಿಗೆ ಗಡಿಗೆಯ ಮುಚ್ಚಳ ತೆಗೆದು ಈಕ್ಷಿಸಿದೆವು. ಪ್ರಳಯದ ಗುಟ್ಟನ್ನು ತನ್ನೊಳಗೆ ಅಡಗಿಸಿಕೊಂಡು ದೊಡ್ಡದಾದ ಬೆಣ್ಣೆ ಮುದ್ದೆ ಅರ್ಧ ಮುಳುಗಿ ಆರ್ಧ ತೇಲುತ್ತಿದೆ. ಮಜ್ಜಿಗೆಯ ಮೇಲ್ಭಾಗದಲ್ಲಿರುವ ಬೆಣ್ಣೆಯನ್ನು ತೆಗೆದು ತಿಂದು ಬಿಟ್ಟರೆ ಕೆಳಭಾಗದಲ್ಲಿದ್ದ ಬೆಗ್ಗೆ ಮುಳುಗುತ್ತದೆ. ಹಾಗೂ ಜಗತ್ ಪ್ರಳಯ ಆಗೇ ತೀರುತ್ತದೆ–ಇದು ಆ ಕ್ಷಣಕ್ಕೆ ನಮ್ಮಿಬ್ಬರಿಗೆ ಗೋಚರಿಸಿದ ಸತ್ಯ. ಸರಿ ಮೇಲ್ಭಾಗದ ಅರ್ಧ ಬೆಣ್ಣೆಯನ್ನು ಸರಸರನೇ ತೆಗೆದು ಇಬ್ಬರೂ ತಿಂದುಬಿಟ್ಟೆವು. ಇನ್ನೇನು ಬೆಣ್ಣೆ ಮುಳುಗಿದ ಸುದ್ದಿಯನ್ನು ಹೊರಗೆಲ್ಲಾ ಕೂಗಿ ಹೇಳಬೇಕು ಎಂದು ನಾವು ಸಿದ್ದರಾಗುತ್ತಿರುವಷ್ಟರಲ್ಲಿಯೇ ಅರ್ಧ ಹೋಳು ಮಾಡಿದ ಪೃಥ್ವಿಯ

ಆಕಾರದಲ್ಲಿದ್ದ ಉಳಿದರ್ಧ ಬೆಣ್ಣೆ ಮುದ್ದೆ ಟಿಣ್ಣೆಂದು ಮೇಲೆ ಜಿಗಿಯಬೇಕೆ? ಆಗ ನಮ್ಮಿಬ್ಬರಿಗೂ ಸ್ವಲ್ಪ ದಿಗಿಲಾಯಿತಾದರೂ ದಿನಾ ಬೆಳಿಗ್ಗೆ ಬೆನ್ನು ಚುರುಗುಡಿಸಿ, ಕಿವಿ ಹಿಂಡಿ ಉಠಾ ಬೈಸ್ ತೆಗೆಸಿ, ಕಣ್ಣಲ್ಲಿ ನೀರು ತರಿಸಿ, ಗೋಳುಹುಯ್ಯುತ್ತಿದ್ದ ಮಾಸ್ತರರು ಮುಳುಗಿ ಹೋಗಬೇಕೆಂಬ ಆಸೆ ಅಷ್ಟು ದುರ್ಬಲವಾಗಿರಲಿಲ್ಲ. ಹಾಗೇ ಆ ಪ್ರಯತ್ನದಲ್ಲಿ ಅಷ್ಟು ಬೇಗ ನಿರಾಶೆಗೊಳ್ಳುವಂತೆಯೂ ಇರಲಿಲ್ಲ (ಹಾಗಿತ್ತು ಅವರ ಶಿಕ್ಷೆ) ಸರಿ. ಉಳಿದರ್ಧ ಬೆಣ್ಣೆಯಲ್ಲೂ ಮೇಲ್ಭಾಗದ ಅರ್ಧವನ್ನು ತೆಗೆದು ತಿಂದದ್ದಾಯ್ತು. ಆದರೆ ನಮ್ಮ ದುರದೃಷ್ಟವೋ ಮಾಸ್ತರರ ಅದೃಷ್ಟವೋ ಆಮೇಲೆ ಉಳಿದ ಚೂರು ಬೆಣ್ಣೆ ಸಹ ಮುಳುಗುವ ಕೃಪೆ ತೋರದೇ ನಾಚಿಕೆಯಿಲ್ಲದೇ ಮತ್ತೆ ಮೇಲೇ ಬಂತು. ಸಿಟ್ಟಿನಿಂದಲೋ ಏನೋ ಆ ಚೂರನ್ನು ನನ್ನ ತಮ್ಮ ಗಬಕ್ಕನೆ ಬಾಯಿಗೆ ಹಾಕಿಕೊಳ್ಳುವುದಕ್ಕೂ ನಮ್ಮ 'ಸಿ.ಐ.ಡಿ. ರಾಮಣ್ಣ' ನೆಂದು ನಾವು ಹೆಸರಿಟ್ಟ ನಮ್ಮಣ್ಣ ಅಲ್ಲಿ ಪ್ರತ್ಯಕ್ಷವಾಗುವುದಕ್ಕೂ ಸರಿಹೋಯ್ತು. ಬೆಕ್ಕೊಂದು ಬಂದು ಬೆಣ್ಣೆಯನ್ನು ತಿನ್ನುತ್ತಿದ್ದದ್ದನ್ನು ನಾವಿಬ್ಬರೂ ಕಣ್ಣಾರೆ ಕಂಡ ವಿಚಾರವನ್ನು ಎಷ್ಟೇ ವರ್ಣಿಸಿ ಹೇಳಿದರೂ ಯಾರ ಕಿವಿಯ ಮೇಲೂ ಅದು ಬೀಳದೇ ನಮಗೆ ಆಗ ಬೇಕಾದ ಶಾಸ್ತಿ ಆಗಿಯೇ ಆಯಿತು.

***

## ಲೇಖಕರ ಪರಿಚಯ : ಭುವನೇಶ್ವರಿ ಹೆಗಡೆ

ಭುವನೇಶ್ವರಿ ಹೆಗಡೆ ಕನ್ನಡ ಸಾಹಿತ್ಯದ ಹಾಸ್ಯಲೋಕದಲ್ಲಿ ಪ್ರಮುಖವಾದ ಹೆಸರು.06–05–1956ರಲ್ಲಿ ಜನಿಸಿದ ಭುವನೇಶ್ವರಿ ಹೆಗಡೆ, ಉತ್ತರ ಕನ್ನಡ ಜಿಲ್ಲೆ ಕತ್ರಗಾಲ ಗ್ರಾಮದವರು. ಇವರ ತಂದೆ ಶ್ರೀ ಗಣಪತಿ ಹೆಗಡೆ ಕತ್ರಗಾಲ, ತಾಯಿ ಗೌರಮ್ಮ. ತಮ್ಮ ಪದವಿ ವಿದ್ಯಾಭ್ಯಾಸವನ್ನು ಶಿರ್ಸಿಯ ಎಮ್.ಇ.ಎಸ್ ಕಾಲೇಜಿನಲ್ಲಿ ಪೂರೈಸಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಅರ್ಥಶಾಸ್ತ್ರದಲ್ಲಿ ಎಂ.ಎ ಸ್ನಾತಕೋತ್ತರ ಪದವಿ ಪಡೆದವರು. ಪತಿ ಶ್ರೀ ಶಂಭುಹೆಗಡೆ ಹಾಗು ಮಗಳು ಆಭಾ. ಇವರ 500ಕ್ಕೂ ಮಿಕ್ಕ ಹಾಸ್ಯ ಪ್ರಬಂಧ

ರಚನೆ ಕನ್ನಡದ ಎಲ್ಲ ಪ್ರಮುಖ ಪತ್ರಿಕೆ,ನಿಯತಕಾಲಿಕೆಗಳಲ್ಲಿ ಪ್ರಕಟಿತವಾಗಿವೆ. ಪ್ರಸ್ತುತ ವಿಶ್ವವಿದ್ಯಾನಿಲಯ ಕಾಲೇಜು,ಮಂಗಳೂರು ಇಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕಿಯಾಗಿದ್ದಾರೆ.

ಮುಗುಳು ಧಾರವಾಡ ವಿದ್ಯಾವರ್ಧಕ ಸಂಘದ ರತ್ನಮ್ಮ ಹೆಗ್ಗಡೆ ಪ್ರಶಸ್ತಿ. ಕನ್ನಡ ಸಾಹಿತ್ಯ ಪರಿಷತ್ ಅಂತರಾಷ್ಟ್ರೀಯ ಮಹಿಳಾ ವರ್ಷ ಪ್ರಶಸ್ತಿ ನಕ್ಕು ಹಗುರಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡುಕೋಣೆ ರಮಾನಂದ ಪ್ರಶಸ್ತಿ, ಎಂಥದು ಮಾರಾಯ್ರೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಅತ್ತಿಮಬ್ಬೆ ಪ್ರತಿಷ್ಠಾನ ಬಹುಮಾನ ಬನಹಟ್ಟಿ ಪುಸ್ತಕ ಬಹುಮಾನ ಪುತ್ತೂರಿನ ಉಗ್ರಾಣ ಪ್ರಶಸ್ತಿ ವಲಲ ಪ್ರತಾಪ 66ನೇ ಅಖಿಲ ಭಾರತ ಕನ್ನಡ ಸಾಹಿತ್ಯಸಮ್ಮೇಳನ ಪುರಸ್ಕೃತ ಕೃತಿ, ಹಾಸಭಾಸ ಅತ್ತಿಮಬ್ಬೆ ಪ್ರತಿಷ್ಠಾನ ಪ್ರಶಸ್ತಿ, ದ.ಕ.ಜಿಲ್ಲಾ ಸಾಹಿತ್ಯ ಸಮ್ಮೇಳನ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ ಕುಂ.ಬಾ.ಸ. ಬಹುಮಾನ, ಮೃಗಯಾ ವಿನೋದ ಉತ್ತರ ಕರ್ನಾಟಕ ಲೇಖಕಿಯರ ಸಂಘ ಹಾಗೂ ಇನ್ಫೋಸಿಸ್ ಫೌಂಡೇಶನ್ನಿನ ಡಾ.ಸುಧಾಮೂರ್ತಿ ಪ್ರಶಸ್ತಿ ಬೆಟ್ಟದ ಭಾಗೀರಥಿ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸ್ಮೃತಿ ಮಾಲಿಕೆಯಡಿ ಪ್ರಕಟಿತ, ಮಾತಾಡಲು ಮಾತೇ ಬೇಕೆ? ಬಂಟ್ವಾಳ ಅಕ್ಷರ ಪ್ರತಿಷ್ಠಾನದ ಅಕ್ಷರ ಶ್ರೀ ರಾಜ್ಯ ಪ್ರಶಸ್ತಿ, ಪುಟ್ಟಿಯ ಪಟ್ಟೆ ಹುಲಿ ಮೈಸೂರಿನ ರಂಗಾಯಣ ಹಾಗೂ ಸ್ವೀಡನ್ನಿನ ಐ.ಟಿ ಶಿಬಿರದಲ್ಲಿ ಪ್ರಕಟಿತ ಮಕ್ಕಳ ನಾಟಕ, ಕೈಗುಣ ಬಾಯ್ಗುಣ.

# ಪ್ರಥಮ ವರ್ಷದ ಬಿಎಸ್ಸಿ–ಫ್ಯಾಡ್/ಐಡಿಡಿ/ ಬಿವಿಎ/ ಬಿಎಸ್ಐಡಿ/ ಬಿಎಸ್ಎನ್ಡಿ

## ಎರಡನೆ ಸೆಮಿಸ್ಟರ್.

## ಪರಿವಿಡಿ

**1.** ನಾಟಕ

ಸಂಕ್ರಾಂತಿ – ಪಿ. ಲಂಕೇಶ್

**2.** ಕಾದಂಬರಿ

ಒಡಲಾಳ –ದೇವನೂರು ಮಹದೇವ

# 1. ನಾಟಕ

## ಸಂಕ್ರಾಂತಿ – ಪಿ. ಲಂಕೇಶ್

ಕನ್ನಡದ ಖ್ಯಾತ ಸಾಹಿತಿಗಳಲ್ಲೊಬ್ಬರು ಹಾಗೂ ಲಂಕೇಶ್ ಪತ್ರಿಕೆಯ ಸ್ಥಾಪಕ ಸಂಪಾದಕರು.[1] ಕವಿ, ಕಥೆಗಾರ, ಕಾದಂಬರಿಕಾರ, ಅಂಕಣಕಾರ, ನಾಟಕಕಾರ, ನಟ, ನಿರ್ದೇಶಕ –ಹೀಗೆ ಬಹುಮುಖ ವ್ಯಕ್ತಿತ್ವವನ್ನು ಹೊಂದಿದವರು. ಇದು ಪತ್ರಿಕೋದ್ಯೋಗಿಯಾಗಿ ಹೆಸರು ಮಾಡಿರುವ ಲಂಕೇಶರು ಪ್ರಸಿದ್ಧಿ ಪಡೆದದ್ದು ನಾಟಕಕಾರರಾಗಿ. ನಾಟಕ ಕ್ಷೇತ್ರಕ್ಕೆ ಅವರು ಕೊಟ್ಟಿರುವ ನಾಟಕಗಳು ಅನೇಕ.

### ಕೃತಿಗಳು

ಲಂಕೇಶರ ಮೊದಲ ಕಥಾಸಂಕಲನ ಕೆರೆಯ ನೀರನು ಕೆರೆಗೆ ಚೆಲ್ಲಿ 1963ರಲ್ಲಿ ಪ್ರಕಟವಾಯಿತು ಕಲ್ಲು ಕರಗುವ ಸಮಯ 1990, ಉಲ್ಲಂಘನೆ 1996, ಮಂಜು ಕವಿದ ಸಂಜೆ 2001, ಸಮಗ್ರ ಕಥೆಗಳು (ಸಮಗ್ರ ಸಂಕಲನ), ಕಾದಂಬರಿಗಳು, ಬಿರುಕು (1967), ಮುಸ್ಸಂಜೆಯ ಕಥಾಪ್ರಸಂಗ (1978), ಅಕ್ಕ (1991), ಅಂಕಣ ಬರಹಗಳ ಸಂಗ್ರಹ, ಪ್ರಸ್ತುತ (1970), ಕಂಡದ್ದು ಕಂಡಹಾಗೆ (1975), ಟೀಕೆ ಟಿಪ್ಪಣಿ – 1 (1997), ಟೀಕೆ ಟಿಪ್ಪಣಿ – 2 (1997), ಟೀಕೆ ಟಿಪ್ಪಣಿ – 3 (2008), ರೂಪಕ ಲೇಖಕರು (2008), ಸಾಹಿತಿ ಸಾಹಿತ್ಯ ವಿಮರ್ಶೆ (2008), ಮರೆಯುವ ಮುನ್ನ – ಸಂಗ್ರಹ 1 (2009), ಈ ನರಕ ಈ ಪುಲಕ (2009), ಮರೆಯುವ ಮುನ್ನ – ಸಂಗ್ರಹ 2 (2010)

### ಕವನ ಸಂಗ್ರಹಗಳು

ಬಿಚ್ಚು, ನೀಲು ಕಾವ್ಯ – ಸಂಗ್ರಹ 1, ನೀಲು ಕಾವ್ಯ – ಸಂಗ್ರಹ 2, ನೀಲು ಕಾವ್ಯ – ಸಂಗ್ರಹ 3, ಚಿತ್ರ ಸಮೂಹ (ಸಮಗ್ರ ಸಂಕಲನ), ಅಕ್ಷರ ಹೊಸ ಕಾವ್ಯ, ಪಾಪದ ಹೂಗಳು, ತಲೆಮಾರು, ಆತ್ಮಕಥೆ

ಹುಳಿ ಮಾವಿನಮರ (ಇದರಲ್ಲಿ ಮಾವಿನ ಮರದ ಜೀವನ ಘಟ್ಟಗಳಂತೆ ತಮ್ಮ ಜೀವನ ಕಥನವನ್ನು ನಿರೂಪಿಸಿದ್ದಾರೆ)

**ನಾಟಕಗಳು**

ಬಿರುಕು (1973), ಈಡಿಪಸ್ ಮತ್ತು ಅಂತಿಗೊನೆ (1971), ಗುಣಮುಖ (1993), ನನ್ನ ತಂಗಿಗೊಂದು ಗಂಡು ಕೊಡಿ (1963), ತೆರೆಗಳು (1964), ಟಿ. ಪ್ರಸನ್ನನ ಗೃಹಸ್ಥಾಶ್ರಮ (1964), ಕ್ರಾಂತಿ ಬಂತು ಕ್ರಾಂತಿ (1965), ಸಂಕ್ರಾಂತಿ (1971)

---

## 2. ಕಾದಂಬರಿ

### ದೇವನೂರು ಮಹದೇವ

1948ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ದೇವನೂರಿನಲ್ಲಿ ಜನಿಸಿದರು. ದೇವನೂರು, ನಂಜನಗೂಡು ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸವನ್ನು ಪಡೆದರು. ಮೈಸೂರು ಮಹಾರಾಜ ಕಾಲೇಜಿನಿಂದ ಬಿ.ಎ. ಪದವಿ ಪಡೆದ ಇವರು, ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿಯನ್ನು ಪಡೆದಿದ್ದಾರೆ. ಕೆಲಕಾಲ ಮೈಸೂರಿನ ಸಿ.ಐ.ಐ.ಎಲ್.ನಲ್ಲಿ ಕೆಲಸ ಮಾಡಿ ಅಲ್ಲಿಯ ವೃತ್ತಿಗೆ ರಾಜೀನಾಮೆ ನೀಡಿ ವ್ಯವಸಾಯದಲ್ಲಿ ತೊಡಗಿದರು. ಇವರ 'ಒಡಲಾಳ' ಕೃತಿಯನ್ನು ಕಲ್ಕತ್ತಾದ ಭಾರತೀಯ ಪರಿಷತ್ 1984ರ ಉತ್ತಮ ಸೃಜನಶೀಲ ಕೃತಿಯೆಂದು ಗೌರವಿಸಿತು. 1991ರಲ್ಲಿ ಇವರ 'ಕುಸುಮಬಾಲೆ' ಕೃತಿಗೆ

ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ನೀಡಿತು. ಕರ್ನಾಟಕದ ರಾಜ್ಯೋತ್ಸವ ಪ್ರಶಸ್ತಿಯನ್ನೂ ಪಡೆದಿರುವ ದೇವನೂರ ಮಹಾದೇವ 1989ರಲ್ಲಿ ಅಮೆರಿಕಾದಲ್ಲಿ ನಡೆದ 'ಇಂಟರ್‌ನ್ಯಾಶನಲ್ ರೈಟಿಂಗ್ ಪ್ರೋಗ್ರಾಂ(International writting Programme)' ನಲ್ಲಿ ಭಾಗವಹಿಸಿದ್ದರು. ವರ್ಷದ ಹಿಂದೆ ದೇವನೂರು ಅವರಿಗೆ ಪದ್ಮಶ್ರೀ ಪ್ರಶಸ್ತಿ ಸಹ ಲಭಿಸಿತು. ಇವರ ಕೃತಿಗಳು 'ದ್ಯಾವನೂರು', 'ಒಡಲಾಳ' ಮತ್ತು 'ಕುಸುಮಬಾಲೆ'.

## ಗೌರವ, ಪುರಸ್ಕಾರ

ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 1991ರಲ್ಲಿ 'ಕುಸುಮಬಾಲೆ' ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಟ, ಅಲ್ಲಮಪ್ರಭು ಪ್ರಶಸ್ತಿ–2013, ಬೋಧಿವೃಕ್ಷ ಪ್ತಶಸ್ತಿ –2013, ವಿ,ಎಂ.ಇನಾಂದಾರ್ ಪ್ರಶಸ್ತಿ – ಎದೆಗೆ ಬಿದ್ದ ಅಕ್ಷರ ಕೃತಿಗೆ, ಇವರ ಒಡಲಾಳ ಕೃತಿಗೆ ಕಲ್ಕತ್ತಾದ ಭಾರತೀಯ ಭಾಷಾ ಪರಿಷತ್ 1984ರ ಉತ್ತಮ ಸೃಜನಶೀಲ ಕೃತಿಯೆಂದು ಗೌರವಿಸಿದೆ. 2011ರಲ್ಲಿ ಭಾರತ ಸರ್ಕಾರ ಇವರಿಗೆ ಪದ್ಮಶ್ರಿ ಪ್ರಶಸ್ತಿ ಯನ್ನು ಕೊಟ್ಟೂ ಗೌರವಿಸಿದೆ, ಗೌರವ ಡಾಕ್ಟರೇಟ್, ಮೈಸೂರು ವಿಶ್ವವಿದ್ಯಾನಿಲಯ – 2014, ಇದಲ್ಲದೆ ಅಮೇರಿಕಾದಲ್ಲಿ ನಡೆದ 'ಇಂಟರನ್ಯಾಷನಲ್ ರೈಟಿಂಗ್ ಪ್ರೋಗ್ರಾಮ'ದಲ್ಲಿ ಭಾಗವಹಿಸಿದ್ದಾರೆ. ಕುವೆಂಪು ರಾಷ್ಟೀಯ ಪ್ರಶಸ್ತಿ ಲಭಿಸಿದೆ.

ದೇವನೂರು ಮಹಾದೇವ ಅವರು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸ್ಥಾಪಕರಲ್ಲಿ ಒಬ್ಬರು. ಇವರು ಪ್ರಸ್ತುತ ಕರ್ನಾಟಕ ಸರ್ವೋದಯ ಪಕ್ಷದ ಅಧ್ಯಕ್ಷರಾಗಿದ್ದಾರೆ.

# ಮೊದಲ ಮತ್ತು ಎರಡನೇ ಸೆಮಿಸ್ಟರ್ ಬಿಎಸ್ಸಿ ಫ್ಯಾಡ್

# ಪ್ರಶ್ನೆಪತ್ರಿಕೆಯ ಸ್ವರೂಪ 2024-25

**I**. ಎರಡು ಅಂಕಗಳ ಎಂಟು ಪ್ರಶ್ನೆಗಳನ್ನು ಕೊಟ್ಟು ಐದು ಪ್ರಶ್ನೆಗಳಿಗೆ ಉತ್ತರಿಸಬೇಕು **(2X5=10)**

**ಮೊದಲ ಸೆಮಿಸ್ಟರ್‌ಗೆ**
ಕವಿತೆಗಳಿಂದ ನಾಲ್ಕು ಪ್ರಶ್ನೆಗಳು
ಕಥೆಗಳಿಂದ ಎರಡು ಪ್ರಶ್ನೆಗಳು
ಲೇಖನಗಳಿಂದ ಎರಡು ಪ್ರಶ್ನೆಗಳನ್ನು ಕೊಡಬೇಕು

**ಎರಡನೇ ಸೆಮಿಸ್ಟರ್‌ಗೆ**
ನಾಟಕದಿಂದ ನಾಲ್ಕು ಪ್ರಶ್ನೆಗಳು
ಕಾದಂಬರಿಯಿಂದ ನಾಲ್ಕು ಪ್ರಶ್ನೆಗಳು

**II.** ಐದು ಅಂಕಗಳ ಎಂಟು ಪ್ರಶ್ನೆಗಳನ್ನು ಕೊಟ್ಟು ಆರು ಪ್ರಶ್ನೆಗಳಿಗೆ ಉತ್ತರಿಸಿಬೇಕು. **(5X6=30)**

**ಮೊದಲ ಸೆಮಿಸ್ಟರ್‌ಗೆ**
ಕವಿತೆಗಳಿಂದ ನಾಲ್ಕು ಪ್ರಶ್ನೆಗಳು
ಕಥೆಗಳಿಂದ ಎರಡು ಪ್ರಶ್ನೆಗಳು
ಲೇಖನಗಳಿಂದ ಎರಡು ಪ್ರಶ್ನೆಗಳನ್ನು ಕೊಡಬೇಕು

**ಎರಡನೇ ಸೆಮಿಸ್ಟರ್‌ಗೆ**
ನಾಟಕದಿಂದ ನಾಲ್ಕು ಪ್ರಶ್ನೆಗಳು
ಕಾದಂಬರಿಯಿಂದ ನಾಲ್ಕು ಪ್ರಶ್ನೆಗಳು

**III. ಹತ್ತು ಅಂಕಗಳ ಆರು ಪ್ರಶ್ನೆಗಳನ್ನು ಕೊಟ್ಟು ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಬೇಕು. (10X4=40)**

**ಮೊದಲ ಸೆಮಿಸ್ಟರ್‌ಗೆ**
ಕವಿತೆಗಳಿಂದ ಮೂರು ಪ್ರಶ್ನೆಗಳು
ಕಥೆಗಳಿಂದ ಎರಡು ಪ್ರಶ್ನೆಗಳು
ಲೇಖನಗಳಿಂದ ಒಂದು ಪ್ರಶ್ನೆ ಕೊಡಬೇಕು

**ಎರಡನೇ ಸೆಮಿಸ್ಟರ್‌ಗೆ**
ನಾಟಕದಿಂದ ಮೂರು ಪ್ರಶ್ನೆಗಳು
ಕಾದಂಬರಿಯಿಂದ ಮೂರು ಪ್ರಶ್ನೆಗಳು

..................................................................

| | |
|---|---|
| ಒಟ್ಟು ಅಂಕಗಳು | 100 ಅಂಕಗಳು |
| ಪರೀಕ್ಷ ಬರವಣಿಗೆ ಅಂಕಗಳು | 80 ಅಂಕಗಳು |
| ಆಂತರಿಕ ಅಂಕಗಳು | 20 ಅಂಕಗಳು (ಹಾಜರಾತಿ 10 ಅಂಕಗಳು ನಿಯೋಜಿತ ಕಾರ್ಯ 10 ಅಂಕಗಳು) |

## ಸಂಪಾದಕ ಮಂಡಳಿ


**ಪ್ರಧಾನ ಸಂಪಾದಕರು**

**ಡಾ. ಎಂ.ಜಿ. ಮಂಜುನಾಥ್**

ಕನ್ನಡ ಪ್ರಾಧ್ಯಾಪಕರು & ಡೀನ್, ಕಲಾನಿಕಾಯ

ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಸಂಪಾದಕರ ವಿಳಾಸ**

**ಡಾ. ಜಿ. ಆಶಾ**

ಸಹ ಪ್ರಾಧ್ಯಾಪಕರು

ಕೆ.ಎಲ್.ಇ ಸಂಸ್ಥೆಯ

ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ

ರಾಜಾಜಿನಗರ ಬೆಂಗಳೂರು – 560010

**ಡಾ. ಪ್ರೇಮ ಸಿದ್ಧರಾಜು**

ಪ್ರಾಂಶುಪಾಲರು

ಎಸ್.ಜೆ.ಆರ್ ಮಹಿಳಾ ಪದವಿ ಕಾಲೇಜು

ರಾಜಾಜಿನಗರ, ಬೆಂಗಳೂರು – 10

**ಡಾ. ಚನ್ನವೀರಯ್ಯ**

ಸಹಪ್ರಾಧ್ಯಾಪಕರು

ಆಚಾರ್ಯ ಪದವಿ ಅಧ್ಯಯನ ವಿದ್ಯಾಲಯ

ಸೋಲದೇವನಹಳ್ಳಿ

ಬೆಂಗಳೂರು – 560107

**ಪ್ರೋ. ನಾರಾಯಣ ಸ್ವಾಮಿ ಎಸ್.ಜಿ**

ಉಪ ಪ್ರಾಂಶುಪಾಲರು

ವಿ.ಇ.ಟಿ ಪ್ರಥಮ ದರ್ಜೆ ಕಾಲೇಜು

ಜೆ.ಪಿ ನಗರ ಬೆಂಗಳೂರು – 560078